ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ




Po Mone Modi

ಸಂಪುಟ 10 | ಸಂಚಿಕೆ 21 | ಪುಟ 20 | ಮೇ 22, 2016 | ರೂ. 10/-

web: www.janashakthi.co.in e-mail : js_weekly@yahoo.com

ಉಡುಪಿ ಜಿಲ್ಲೆ ವಿಶೇಷ ಪುರವಣಿ



ಉಡುಪಿ ಅಭಿವೃದ್ಧ ಜಿಲ್ಲೆಯೇ?

ಕಾಂ. ಕರ್ಕಡ ಮತ್ತು ಸಿ.ನಾರಾಯಣ ನೆನಪು

ಕೋಮುವಾದೀಕರಣ : ಸಂವಾದ

ಮೀನುಗಾರರ ಮತ್ತು ಕಾರ್ಮಿಕರ ಪರಿಸ್ಥಿತಿ

ಜೂನ್ 6 :

ಬೆಂಗಳೂರಿನಲ್ಲಿ ಎಡ ಪಕ್ಷಗಳ ರ್ಯಾಲಿ



ಸಿದ್ದು 3:

ನುಡಿ ಭರಪೂರ ನಡೆ ಸಪೂರ

ಉತ್ತರಾಖಂಡ :

ಮೋದಿಗೆ ಮುಖಭಂಗ

ಜೆಎನ್‌ಯುಗೆ ವಿಪರೀತ ಹಾನಿಯಾಗುತ್ತಿದೆ, ತುರ್ತಾಗಿ ಮಧ್ಯಪ್ರವೇಶಿಸಿ– ರಾಷ್ಟ್ರಪತಿಗಳಿಗೆ ಪ್ರತಿಪಕ್ಷಗಳ ಎಂಪಿಗಳ ಆಗ್ರಹ

ದಿಲ್ಲಿಯ ಜವಹರಲಾಲ್ ನೆಹರು ವಿಶ್ವವಿದ್ಯಾಲಯದಲ್ಲಿ ಮತ್ತೆ ಕ್ಷೋಭೆ ಹರಡಿದೆ. ನಮ್ಮ ಹಿಂದಿನ ಸಂಚಿಕೆಯಲ್ಲಿ ಪ್ರಕಟಿಸಿರುವಂತೆ ವಿವಿ ಆವರಣದಲ್ಲಿ ಫೆಬ್ರುವರಿ 9ರಂದು ನಡೆದ ಘಟನೆಯ ವಿಚಾರಣೆ ನ್ಯಾಯಾಲಯದಲ್ಲಿರುವಾಗ, ವಿದ್ಯಾರ್ಥಿ ಮುಖಂಡರ ಮೇಲೆ ರಾಜದ್ರೋಹದ ಗುರುತರ ಆಪಾದನೆಗೆ ಆಧಾರವಾದ ವೀಡಿಯೋದಲ್ಲಿ ಮೋಸ ನಡೆದಿದೆ ಎಂದು ದಿಲ್ಲಿ ಸರಕಾರ ನಡೆಸಿದ ಮ್ಯಾಜಿಸ್ಟ್ರೇಟ್ ವಿಚಾರಣೆಯಲ್ಲಿಯೇ ಬಯಲಾಗಿರುವಾಗ ವಿವಿ ಆಡಳಿತ 20 ವಿದ್ಯಾರ್ಥಿಗಳ ಮೇಲೆ ಕಠಿಣ ಕ್ರಮಗಳನ್ನು ಕೈಗೊಂಡಿದೆ. ಈ ಕ್ರಮಗಳಿಗೆ ಆಧಾರವಾದ 'ಉನ್ನತ ಮಟ್ಟದ ತನಿಖಾ ಸಮಿತಿ'ಯ ರಚನೆಯನ್ನೇ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರೂ ಕೂಡ ವಿರೋಧಿಸಿದ್ದರು.

ಇಂತಹ ಸಮಿತಿಯ ಶಿಫಾರಸುಗಳ ಆಧಾರದಲ್ಲಿ ಕೈಗೊಂಡಿರುವ ಶಿಕ್ಷಾ ಕ್ರಮಗಳ ವಿರುದ್ಧ ವಿದ್ಯಾರ್ಥಿಗಳ ಸಂಘ ಅನಿರ್ದಿಷ್ಟ ಕಾಲದ ಉಪವಾಸ ಮುಷ್ಕರವನ್ನು ನಡೆಸುತ್ತಿದೆ. ವಿವಿಯ ಅಧ್ಯಾಪಕರ ಸಂಘವೂ ಇದನ್ನು ಬೆಂಬಲಿಸಿದೆ. ಆದರೂ ವಿವಿಯ ಆಡಳಿತ ಹಠಮಾರಿತನ ಪ್ರದರ್ಶಿಸಿ ಬಿಕ್ಕಟ್ಟನ್ನು ಸೃಷ್ಟಿಸಿದೆ.

ಇಂತಹ ಸಂದರ್ಭದಲ್ಲಿ ವಿವಿಯ ಸಂದರ್ಶಕರಾಗಿರುವ ರಾಷ್ಟ್ರಪತಿಗಳು ತುರ್ತಾಗಿ ಮಧ್ಯಪ್ರವೇಶಿಸಿ ನ್ಯಾಯ ಒದಗಿಸಬೇಕು, ಭಾರತದಲ್ಲಿ ಅತ್ಯುತ್ತಮ ವಿಶ್ವವಿದ್ಯಾಲಯ ಎನಿಸಿರುವ ಜೆಎನ್‌ಯುವನ್ನು ಇಂತಹ ಅಭೂತಪೂರ್ವ ಬಿಕ್ಕಟ್ಟಿನಿಂದ ರಕ್ಷಿಸಬೇಕು ಎಂದು ಮೇ 6ರಂದು, ವಿದ್ಯಾರ್ಥಿಗಳ ಉಪವಾಸ ಸತ್ಯಾಗ್ರಹದ ಒಂಭತ್ತನೇ ದಿನ, ರಾಷ್ಟ್ರಪತಿಗಳನ್ನು ಭೇಟಿ ಮಾಡಿದ ಸಂಸತ್ ಸದಸ್ಯರಾದ ಸೀತಾರಾಮ್ ಯೆಚೂರಿ(ಸಿಪಿಐ–ಎಂ), ಡಿ.ರಾಜ(ಸಿಪಿಐ), ದಿಗ್ವಿಜಯ ಸಿಂಗ್(ಕಾಂಗ್ರೆಸ್), ಕೆ ಸಿ ತ್ಯಾಗಿ ಮತ್ತು ಪವನ್ ಕುಮಾರ್(ಜೆಡಿಯು), ಮಜೀದ್ ಮೆಮನ್(ಎನ್‌ಸಿಪಿ), ಬೈಷ್ಣಬ್ ಪರಿದ(ಬಿಜೆಡಿ) ಮತ್ತು ಕೆಟಿಎಸ್ ತುಲಸಿ(ನಾಮಕರಣ ಸದಸ್ಯ) ಆಗ್ರಹಿಸಿದರು.

ಈ ಬಗ್ಗೆ ಅವರು ಸಲ್ಲಿಸಿದ ಪತ್ರದಲ್ಲಿ ವಿದ್ಯಾರ್ಥಿಗಳಿಗೆ ಭಾರೀ, ಅಭೂತಪೂರ್ವ ದಂಡನೆ ವಿಧಿಸಿರುವ ತನಿಖೆಯಲ್ಲಿ ಹುರುಳಿರುವಂತೆ ಕಾಣುತ್ತಿಲ್ಲ, ಬಹುಮಟ್ಟಿಗೆ ಅದು ಸುಳ್ಳಾಗಿರುವ ಸಾಧ್ಯತೆಯೂ ಇದೆಯಾದ್ದರಿಂದ ಮತ್ತು ವಿದ್ಯಾರ್ಥಿ ಸಂಘದ ಅಧ್ಯಕ್ಷರೂ ಸೇರಿದಂತೆ ಹಲವು ಉಪವಾಸ ನಿರತ ವಿದ್ಯಾರ್ಥಿಗಳ ಆರೋಗ್ಯಕ್ಕೆ ಅಪಾಯ ಉಂಟಾಗುತ್ತಿರುವುದರಿಂದ ರಾಷ್ಟ್ರಪತಿಗಳು ತಕ್ಷಣವೇ ಮಧ್ಯಪ್ರವೇಶಿಸಿ ನ್ಯಾಯ ಒದಗಿಸಬೇಕು ಎಂದು ಆಗ್ರಹಿಸಲಾಗಿದೆ. ವಿದ್ಯಾರ್ಥಿಗಳ ವಿರುದ್ಧ ಕೈಗೊಂಡಿರುವ ಎಲ್ಲ ಕ್ರಮಗಳನ್ನು ತಕ್ಷಣವೇ ಹಿಂತೆಗೆದುಕೊಳ್ಳಬೇಕು ಎಂದಿರುವ ಪತ್ರ, ಈಗ ನಡೆಯುತ್ತಿರುವ ನ್ಯಾಯಾಂಗ ವಿಚಾರಣೆ ಮುಗಿಯುವ ವರೆಗೆ ಕಾಯಬಹುದು ಎಂದಿದೆ.

ಈ ವಿಷಯವನ್ನು ರಾಷ್ಟ್ರಪತಿಗಳು ತುರ್ತಿನ ವಿಷಯ ಎಂದು ಪರಿಗಣಿಸಿದ್ದಾರೋ ಗೊತ್ತಿಲ್ಲ. ಆದರೆ, ಉಪವಾಸ ಸತ್ಯಾಗ್ರಹದ 13ನೇ ದಿನ, ಮೇ 10ರ ಅಕೆಡೆಮಿಕ್ ಕೌನ್ಸಿಲ್ ಸಭೆಯಲ್ಲಿ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರ ಪ್ರತಿನಿಧಿಗಳು ಈ ಪ್ರಶ್ನೆಯನ್ನು ಎತ್ತಿದಾಗ ಉತ್ತರಿಸಲಾಗದ ಉಪಕುಲಪತಿಗಳು ಸಭೆಯನ್ನು ಅರ್ಧಕ್ಕೇ ನಿಲ್ಲಿಸಿ ಓಡಿ ಹೋದರು ಎಂದು ವರದಿಯಾಗಿದೆ.

ಈಗ ಜಾದವ್‌ಪುರ ವಿ.ವಿ. ಮೇಲೆ ಕಣ್ಣು

ಮೇ 6ರಂದು ಪಶ್ಚಿಮ ಬಂಗಾಲದ ಮತ್ತು ದೇಶದ ಇನ್ನೊಂದು ಪ್ರತಿಷ್ಠಿತ ಶಿಕ್ಷಣ ಸಂಸ್ಥೆ ಜಾದವಪುರ ವಿಶ್ವವಿದ್ಯಾಲಯದಲ್ಲಿ ವಿವೇಕ ಅಗ್ನಿಹೋತ್ರಿ ಎಂಬವರ ಚಲನಚಿತ್ರ ಪ್ರದರ್ಶನದ ವೇಳೆಯಲ್ಲಿ ನಡೆದ ಗಲಭೆ ದೇಶದ ಗಮನ ಸೆಳೆದಿದೆ. ಅವರ ಚಿತ್ರ ಪ್ರದರ್ಶನಕ್ಕೆ ಅಡ್ಡಿ ಉಂಟು ಮಾಡಿದ್ದರಿಂದ ಇದು ನಡೆಯಿತು ಎನ್ನುವಂತೆ ಬಿಂಬಿಸಲಾಗಿದೆ. ವಾಸ್ತವವಾಗಿ ಎಬಿವಿಪಿಯನ್ನು ತಿರಸ್ಕರಿಸಿದ ಈ ವಿ.ವಿ.ಯ ವಿದ್ಯಾರ್ಥಿಗಳನ್ನೂ 'ರಾಷ್ಟ್ರ–ವಿರೋಧಿ'ಗಳ ಪಟ್ಟಿಗೆ ಸೇರಿಸುವ ಪ್ರಯತ್ನ ಇದು ಎಂದು ಈಗ ಸ್ಪಷ್ಟವಾಗಿದೆ.

ಮರುದಿನ ಎಬಿವಿಪಿ ನೇತೃತ್ವದಲ್ಲಿ ನಡೆದ ಪ್ರತಿಭಟನಾ ಪ್ರದರ್ಶನದಲ್ಲಿ ಎಬಿವಿಪಿಯ ಪಶ್ಚಿಮ ಬಂಗಾಲದ ಮುಖಂಡರೊಬ್ಬರು "ಈ ವಿವಿಯ ವಿದ್ಯಾರ್ಥಿನಿಗಳ ಮೇಲೆ ಲೈಂಗಿಕ ದೌರ್ಜನ್ಯ ನಡೆಸುವ ಪ್ರಶ್ನೆಯೇ ಇಲ್ಲ, ಏಕೆಂದರೆ ಇವರಿಗೆ ನಾಚಿಕೆಯೆಂಬುದೇ ಇಲ್ಲ" ಎಂದು ನೀಡಿರುವ ಹೇಳಿಕೆ ಅವರ ನಿಜಬಣ್ಣವನ್ನು ಬಯಲು ಮಾಡಿದೆ. ಈ ವಿವಿಯ ಉಪಕುಲಪತಿಗಳು ಜೆಎನ್‌ಯು ಮತ್ತು ಹೈದರಾಬಾದ್ ವಿವಿಯ ಉಪಕುಲಪತಿಗಳಂತೆ ಜೀಹುಜೂರ್ ಅಲ್ಲ ಎಂಬುದು ಈ ಮಂದಿಗೆ ಸಮಸ್ಯೆಯಾಗಿದೆ. ಆದರೆ ಅದನ್ನು ರಾಜ್ಯಪಾಲರ ಮೂಲಕ ಮಾಡಿಸಿಕೊಳ್ಳುವ ಪ್ರಯತ್ನ ನಡೆದಿದೆ ಎನ್ನಲಾಗುತ್ತಿದೆ.



"ಭಾಗ್ ವಿಸಿ ಭಾಗ್"!





ಮೇ 10ರಂದು ಅಪರಾಹ್ನ 2.30ಕ್ಕೆ ಜೆಎನ್‌ಯು ಅಕಡೆಮಿಕ್ ಕೌನ್ಸಿಲ್ ಸಭೆ ಆರಂಭವಾದಾಗ ಉಪಕುಲಪತಿಗಳು ವಿದ್ಯಾರ್ಥಿಗಳ ವಿರುದ್ಧ ಕಠಿಣ ಕ್ರಮಗಳ ಚರ್ಚೆಯನ್ನು ಮೊದಲು ಎತ್ತಿಕೊಳ್ಳಬೇಕು ಎಂಬ ವಿದ್ಯಾರ್ಥಿಸಂಘದ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಪ್ರಧಾನ ಕಾರ್ಯದರ್ಶಿಯ ಜಂಟಿ ಆಗ್ರಹವನ್ನು ತಿರಸ್ಕರಿಸಿದರು. ಆದರೆ ಹಲವು ಡೀನ್‌ಗಳು ಮತ್ತು ವಿವಿಧ ವಿಭಾಗಗಳ ಮುಖ್ಯಸ್ಥರೂ ಈ ಬೇಡಿಕೆಯನ್ನು ಬೆಂಬಲಿಸಿದಾಗ ಕೊನೆಗೂ ಚರ್ಚೆಗೆ ಎತ್ತಿಕೊಳ್ಳಬೇಕಾಯಿತು. ಒಂದು ಗಂಟೆ ಚರ್ಚೆ ನಡೆದರೂ ಉಪಕುಲಪತಿಗಳು ಯಾವುದೇ ಭರವಸೆ ನೀಡಲಿಲ್ಲ. ಸುಮಾರು ಒಂದು ಗಂ–ಟೆಯ ಚರ್ಚೆಯ ನಂತರ ಉಪಕುಲಪತಿಗಳು ಇದ್ದಕ್ಕಿದ್ದಂತೆ ಸಭೆಯನ್ನು ಬರ್ಖಾಸ್ತು ಮಾಡಿ ಎದ್ದು ನಡೆದರು. ವಿದ್ಯಾರ್ಥಿ ಸಂಘದ ಉಪಾಧ್ಯಕ್ಷೆ ಶೆಹಲಾ ರಶೀದ್ "ಸರ್, ನೀವು ಹಾಗೆ ಹೋಗುವಂತಿಲ್ಲ. ಈ ಮುಷ್ಕರದಲ್ಲಿ ಪ್ರಾಣ ಕಳಕೊಳ್ಳಬಹುದಾದ ವಿದ್ಯಾರ್ಥಿಗಳ ರಕ್ತ ನಿಮ್ಮ ಕೈಗಂಟುತ್ತದೆ" ಎಂದರೂ ಕೇಳದೆ ಹೊರನಡೆದರು.

ಆದರೆ ಹೊರಗೆ ಉಪವಾಸ ನಿರತ ವಿದ್ಯಾರ್ಥಿಗಳೂ ಸೇರಿದಂತೆ ಪ್ರತಿಭಟಿಸುತ್ತಿದ್ದ ಸುಮಾರು 200 ವಿದ್ಯಾರ್ಥಿಗಳು ಎದುರಾದರು. ಇದನ್ನು ಕಂಡ ಉಪಕುಲಪತಿಗಳು 250 ಮೀಟರ್ ದೂರದಲ್ಲಿದ್ದ ಆಡಳಿತ ಕಟ್ಟಡದತ್ತ ಓಡಲಾರಂಭಿಸಿದರು. ಕೈ–ಕೈ ಹಿಡಿದು ಮಾನವ ಸರಪಣಿ ಹೆಣೆದಿದ್ದ ವಿದ್ಯಾರ್ಥಿಗಳು "ಭಗೋಡಾ ವಿಸಿ ವಾಪಸ್ ಆವೊ" (ಓಡಿ ಹೋಗುವ ಉಪಕುಲಪತಿ, ಹಿಂದಿರುಗಿ ಬಾ) ಎಂದು ಕೂಗಲಾರಂಭಿಸಿದರ.

ಓಟ ಕಿತ್ತ ಉಪಕುಲಪತಿಗಳು ಆಡಳಿತ ಕಟ್ಟಡವನ್ನು ಸೇರಿಕೊಂಡ ಮೇಲೆ ಬಾಗಿಲು ಹಾಕಲಾಯಿತು. ವಿದ್ಯಾರ್ಥಿಗಳು ಮುಚ್ಚಿದ ಬಾಗಿಲ ಹೊರಗಿನಿಂದಲೇ ಘೋಷಣೆ ಮುಂದುವರೆಸಿದರು.

ನಂತರ ವಿವಿ ಆಡಳಿತ ನೀಡಿದ ಹೇಳಿಕೆಯಲ್ಲಿ ವಿಸಿಯವರನ್ನು ಅಡ್ಡಗಟ್ಟಿದ ವಿದ್ಯಾರ್ಥಿಗಳಲ್ಲಿ ಕೆಲವರು ಅವರ ಶರ್ಟ್ ಎಳೆದು ನಿಲ್ಲಿಸಲು ಪ್ರಯತ್ನಿಸಿದರು ಎನ್ನಲಾಗಿದೆ.

ಇದನ್ನು ನಿರಾಕರಿಸಿರುವ ಜೆಎನ್‌ಯು ವಿದ್ಯಾರ್ಥಿ ಸಂಘದ ಅಧ್ಯಕ್ಷ ಕನ್ಹೈಯ ಕುಮಾರ್, ವಿದ್ಯಾರ್ಥಿಗಳ ಶಾಂತಿಯುತ ಘೋಷಣೆಗಳು ಮತ್ತು ಹಾಡುಗಳ ನಡುವೆ ವಿಸಿಯವರನ್ನು ಹತ್ತಾರು ಭದ್ರತಾ ಸಿಬ್ಬಂದಿ ಕರೆದುಕೊಂಡು ಹೋಗುತ್ತಿರುವುದನ್ನು ವೀಡಿಯೋಗ್ರಾಫ್ ಮಾಡಲಾಗಿದೆ ಎಂದಿದ್ದಾರೆ.

ಜೆಎನ್‌ಯು ಅಧ್ಯಾಪಕರ ಸಂಘ ನೀಡಿರುವ ಪತ್ರಿಕಾ ಹೇಳಿಕೆಯೂ ಉಪಕುಲಪತಿಗಳ ವರ್ತನೆಯನ್ನು ಖಂಡಿಸಿದೆ. ಹಲವಾರು ಡೀನ್‌ಗಳು ಮತ್ತೆ–ಮತ್ತೆ ಮಾಡಿದ ಮನವಿಯಿಂದಾಗಿ ಚರ್ಚೆ ಕೊನೆಗೂ ಆರಂಭವಾಗಿ ಅದರಲ್ಲಿ ಮಾತಾಡಿದ ಹನ್ನೆರಡು ಮಂದಿ ಅಕಡೆಮಿಕ್ ಕೌನ್ಸಿಲ್ ಸದಸ್ಯರೂ ಶಿಕ್ಷೆಗಳು ವಿಪರೀತವಾಗಿವೆ, ಅವನ್ನು ಕೈಬಿಡಬೇಕು ಎಂದು ವಿನಂತಿಸುವುದನ್ನು ಕಂಡ ವಿಸಿ ಇದ್ದಕ್ಕಿದ್ದಂತೆ ಸಭೆಯನ್ನು ಮುಂದೂಡಿ ಹೊರಟದ್ದು ಕಂಡ ಎಲ್ಲರೂ ವಿಸ್ಮಿತರಾದರು ಎಂದು ಆ ಹೇಳಿಕೆ ತಿಳಿಸಿದೆ.

ಈ ನಡುವೆ ಅಕಡೆಮಿಕ್ ಕೌನ್ಸಿಲ್ ಸಭೆಗೆ ಹಾಜರಾಗಿದ್ದ ಸದಸ್ಯರಲ್ಲಿ ಬಹುಸಂಖ್ಯಾತರು (53ಮಂದಿ) ವಿವಿ ಆಢಳಿತ ವಿಧಿಸಿದ ದಂಡಗಳನ್ನು ರದ್ದು ಮಾಡಬೇಕೆಂಬ ಒಂದು ನಿರ್ಣಯವನ್ನು ಅಂಗೀಕರಿಸಿದರು.

"ಈ ಸಭೆಯಲ್ಲಿ ವ್ಯಕ್ತವಾಗಿರುವ ಬಹು ಮಂದಿಯ ಭಾವನೆಗಳ ಮೇರೆಗೆ ವಿದ್ಯಾರ್ಥಿಗಳಿಗೆ ವಿಧಿಸಿರುವ ವಜಾ, ಅಮಾನತು, ಕ್ಯಾಂಪಸ್ ಪ್ರವೇಶಕ್ಕೆ ನಿಷೇಧ, ವಿಪರೀತ ದಂಡ ಇತ್ಯಾದಿ ಕಠಿಣತಮ ಶಿಕ್ಷೆಗಳನ್ನು ತಕ್ಷಣವೇ ರದ್ದು ಮಾಡಬೇಕು" ಎಂದ ಈ ನಿರ್ಣಯ "ಸಭೆಯ ಅಧ್ಯಕ್ಷತೆ ವಹಿಸಿದವರು ಅಕಡೆಮಿಕ್ ಕೌನ್ಸಿಲ್ ಸದಸ್ಯರು ವ್ಯಕ್ತಪಡಿಸಿದ ಅಭಿಪ್ರಾಯಗಳಿಗೆ ಏನೊಂದು ಗೌರವ ತೋರದೆ ಇದ್ದಕ್ಕಿದ್ದಂತೆ, ಕಾರಣವಿಲ್ಲದೆ ಮುಂದೂಡಿದ್ದನ್ನು ಕಂಡು ಬೇಸರವಾಗಿದೆ. ನಾವು, ಅಕಡೆಮಿಕ್ ಕೌನ್ಸಿಲ್‌ನ ಸದಸ್ಯರು ಫೆಬ್ರುವರಿ 9ರ ಘಟನೆಯ ಕಾರಣ ವಿಧಿಸಿದ್ದ ಎಲ್ಲ ನಿಷ್ಕಾರಣ ಶಿಕ್ಷೆಗಳನ್ನು ರದ್ದು ಮಾಡುವುದಾಗಿ ನಿರ್ಧರಿಸುತ್ತೇವೆ. ಉಪಕುಲಪತಿಗಳು ತಕ್ಷಣವೇ ಇದನ್ನು ಜಾರಿ ಮಾಡಬೇಕು ಎಂದು ನಿರ್ಧರಿಸುತ್ತೇವೆ" ಎಂದಿದೆ. ಸಭೆಯನ್ನು ಮುಂದೂಡಿ ಹೋದ ಉಪಕುಲಪತಿಗಳು ಇದಕ್ಕೆ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರನ್ನು ದೂರಿರುವುದರ ಬಗ್ಗೆ ಆಘಾತವನ್ನೂ ಈ ನಿರ್ಣಯ ವ್ಯಕ್ತಪಡಿಸಿದೆ.

ಅಂದೇ ಜಂತರ್ ಮಂತರ್‌ನಲ್ಲಿ ಉಪವಾಸ ಸತ್ಯಾಗ್ರಹ ನಿರತ ವಿದ್ಯಾರ್ಥಿಗಳಿಗೆ ಬೆಂಬಲವಾಗಿ ಎಐಡಿಡಬ್ಲ್ಯುಎ, ಎಐಎಲ್‌ಯು, ಎಐಪಿಡಬ್ಲ್ಯುಎ, ಎನ್‌ಎಫ್‌ಐಡಬ್ಲ್ಯು, ಎಸ್‌ಎಫ್ಐ, ಡಿವೈಎಫ್‌ಐ, ಜನವಾದಿ ಲೇಖಕ ಸಂಘ, ಜನನಾಟ್ಯ ಮಂಚ್, ಜನಸಂಸ್ಕೃತಿ ಇತ್ಯಾದಿ 44 ಲೇಖಕರು, ಕಲಾವಿದರು, ಮಾನವ ಹಕ್ಕು ಕಾರ್ಯಕರ್ತರು, ಮಹಿಳಾ, ವಿದ್ಯಾರ್ಥಿ, ಯುವಜನ, ಕಾರ್ಮಿಕರ ಸಂಘಟನೆಗಳು 4 ಗಂಟೆಗಳ ಧರಣಿ ಕಾರ್ಯಕ್ರಮ ನಡೆಸಿದರು.

ಮರುದಿನ ಈ ಸಂಘಟನೆಗಳ ಮುಖಂಡರು ರಾಷ್ಟ್ರಪತಿಗಳಿಗೆ ರಾಷ್ಟ್ರದ ಮುಖ್ಯಸ್ಥರಾಗಿ ಮತ್ತು ಈ ವಿಶ್ವವಿದ್ಯಾಲಯದ ಸಂದರ್ಶಕರಾಗಿ ತುರ್ತಾಗಿ ಮಧ್ಯಪ್ರವೇಶಿಸಿ ವಿದ್ಯಾರ್ಥಿಗಳಿಗೆ ವಿಧಿಸಿರುವ ಕಠಿಣ ದಂಡಗಳನ್ನು ರದ್ದು ಮಾಡಬೇಕು ಎಂದು ಕೋರುವ ಮನವಿ ಪತ್ರವನ್ನು ಸಲ್ಲಿಸಿದರು.

ಕರ್ನಾಟಕ ಸೇರಿದಂತೆ ದೇಶದ ಹಲವೆಡೆಗಳಲ್ಲಿ ಜೆನ್‌ಯು ವಿದ್ಯಾರ್ಥಿಗಳ ಹೋರಾಟವನ್ನು ಬೆಂಬಲಿಸಿ ಒಂದು ದಿನದ ಸಾಂಕೇತಿಕ ಉಪವಾಸ ಸತ್ಯಾಗ್ರಹಗಳನ್ನು ನಡೆಸಲಾಗಿದೆ.

ಸುಪ್ರಿಂ ಕೋರ್ಟ್ ತೀರ್ಪು–ಉತ್ತರಾಖಂಡದಲ್ಲಿ ರಾಷ್ಟ್ರಪತಿ ಆಳ್ವಿಕೆ ರದ್ದು

ಬಿಜೆಪಿಯ ಸಂವಿಧಾನ–ವಿರೋಧಿ ಪಿತೂರಿಗೆ ಹಿನ್ನಡೆ

–ಸಿಪಿಐ(ಎಂ) ಪೊಲಿಟ್‌ಬ್ಯುರೊ

ಮೇ 10ರಂದು ಉತ್ತರಾಖಂಡ ವಿಧಾನ ಸಭೆಯಲ್ಲಿ ಸುಪ್ರಿಂ ಕೋರ್ಟ್ ನಿರ್ದೇಶನದ ಮೇರೆಗೆ ನಡೆದ ವಿಶ್ವಾಸ ಮತ ಪರೀಕ್ಷೆಯಲ್ಲಿ ಕಾಂಗ್ರೆಸ್ ಸರಕಾರ 33–28ಮತಗಳಿಂದ ಗೆದ್ದಿರುವುದರಿಂದ ಅಲ್ಲಿ ಮೋದಿ ಸರಕಾರ ಹೇರಿದ್ದ ರಾಷ್ಟ್ರಪತಿ ಆಳ್ವಿಕೆ ರದ್ದಾಗಿದೆ.

ಸರಕಾರದ ಬಲಾಬಲದ ಪರೀಕ್ಷೆ ವಿಧಾನ ಸಭೆಯಲ್ಲೇ ಆಗಬೇಕು ಎಂಬ ಬೊಮ್ಮಾಯಿ ತೀರ್ಪನ್ನು ಮತ್ತು ಸಂವಿಧಾನವನ್ನು ಎತ್ತಿ ಹಿಡಿದಿರುವ ನ್ಯಾಯಾಂಗ ತೀರ್ಪನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸ್ವಾಗತಿಸಿದೆ.

ಇದು ಬಿಜೆಪಿಗೆ ಒಂದು ದೊಡ್ಡ ಹಿನ್ನಡೆ. ರಾಜ್ಯಗಳಲ್ಲಿನ ಸರಕಾರಗಳನ್ನು ಉರುಳಿಸಿ ತನ್ನ ಆಳ್ವಿಕೆಯನ್ನು ಹೇರುವ ಬಿಜೆಪಿಯ ಸಂವಿಧಾನ–ವಿರೋಧಿ ಪಿತೂರಿ ವಿಫಲವಾಗಿದೆ ಎಂದು ಸಿಪಿಐ(ಎಂ) ಹೇಳಿದೆ. ಪ್ರತಿಪಕ್ಷಗಳ ನೇತೃತ್ವದಲ್ಲಿರುವ ಪ್ರಜಾಸತ್ತಾತ್ಮಕವಾಗಿ ಚುನಾಯಿತವಾದ ರಾಜ್ಯ ಸರಕಾರಗಳನ್ನು ತೆಗೆದು ಹಾಕಲು ಇಂತಹ ಕಪಟೋಪಾಯಗಳಿಗೆ ಇಳಿದರೆ ಅದು ಯಶಸ್ವಿಯಾಗುವುದಿಲ್ಲ ಎಂಬುದನ್ನು ಬಿಜೆಪಿ ಕಲಿತುಕೊಳ್ಳಬೇಕು ಎಂದು ಅದು ಹೇಳಿದೆ..

ಆದರೆ ಈ ನಡುವೆಯೂ ಮೇ 10ರಂದು ಸುಪ್ರಿಂ ಕೋರ್ಟ್ ನಿರ್ದೇಶಿತ ಬಲಾಬಲ ಪರೀಕ್ಷೆಯ ಹಿಂದಿನ ದಿನವೇ, ಅಲ್ಲಿ ರಾಷ್ಟ್ರಪತಿ ಆಳ್ವಿಕೆಯನ್ನು ಸಂಸತ್ತು ಇನ್ನೂ ಅನುಮೋದಿಸದೇ ಇದ್ದರೂ, ವಾಸ್ತವವಾಗಿ ಅದು ಪ್ರಶ್ನಾರ್ಹವಾಗಿದ್ದರೂ ಉತ್ತರಾಖಂಡದ ಬಜೆಟಿಗೆ ಸಂಸತ್ತಿನ ಅನುಮತಿ ಪಡೆಯಲು ಮುಂದಾಯಿತು. ಮೋದಿ ಸರಕಾರಕ್ಕೆ ಈಗಲೂ ಇಂತಹ ಆತುರ ಏಕೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ ಕೇಳುತ್ತಾರೆ. (ಪುಟ 6ರಲ್ಲಿ ಪ್ರಕಟವಾಗಿರುವ ಲೇಖನ ನೋಡಿ)

aÀiÀvÉAzÀgÉEzÀA

ಬಂಡವಾಳ ಎಂದರೆ ಹಣ, ಬಂಡವಾಳ ಎಂದರೆ ಸರಕುಗಳು. ಹಣ ತಾನೆ ಒಂದು ಮೌಲ್ಯವಾಗಿರುವುದರಿಂದ ತನಗೆ ತಾನೇ ಮೌಲ್ಯವನ್ನು ಹೆಚ್ಚಿಸಿಕೊಳ್ಳುವ ಮಾಂತ್ರಿಕ ಶಕಿಯನ್ನು ಅದು ಪಡೆದುಕೊಂಡಿದೆ. ಜೀವಂತ ಸಂತಾನವನ್ನು ಅದು ಹುಟ್ಟಿಸುತ್ತದೆ, ಅಥವಾ, ಕನಿಷ್ಠ ಚಿನ್ನದ ಮೊಟ್ಟೆಗಳನ್ನು ಇಡುತ್ತದೆ.

– ಕಾರ್ಲ್ ಮಾರ್ಕ್ಸ್

'ವಿಶನ್' ಇಲ್ಲದ 'ವಿಶನ್ ಗ್ರೂಪ್' ನಿರ್ಧಾರ

ಸಂಪಾದಕೀಯ

ಬೆಂಗಳೂರು ವೇಗವಾಗಿ ಬೆಳೆಯುತ್ತಿರುವ ನಗರ. ದೂರಗಾಮಿ ಯೋಜನೆ ಇಲ್ಲದೆ ಅದರ ಬೆಳವಣಿಗೆ ಅರಾಜಕವಾಗಿದೆ. ತ್ಯಾಜ್ಯ ನಿರ್ವಹಣೆ, ಟ್ರಾಫಿಕ್ ಜಾಮ್, ಬೇಸಗೆಯಲ್ಲಿ ನೀರಿನ ಅಭಾವ, ವಿದ್ಯುತ್ ಕಡಿತ, ಕೆರೆಗಳ ಒತ್ತುವರಿ ಮಾಲಿನ್ಯ, ವಾಯು ಮಾಲಿನ್ಯ, ಶಬ್ದ ಮಾಲಿನ್ಯ, ಮುಂತಾದ ಸಮಸ್ಯೆಗಳು ತೀವ್ರ ಬಿಕ್ಕಟ್ಟಿನ ಸ್ಥಿತಿ ಮುಟ್ಟಿದೆ. ಸಾವಿರಾರು ದುಬಾರಿ ಫ್ಲಾಟುಗಳು ಖಾಲಿ ಬಿದ್ದಿರುವ, ಇನ್ನೊಂದು ಕಡೆ ಬಡ–ಮಧ್ಯಮ ವರ್ಗದವರಿಗೆ ಮನೆ, ನಿವೇಶನಗಳು ಸಿಗದೆ ಒದ್ದಾಡುತ್ತಿರುವ ಪರಿಸ್ಥಿತ ಇದೆ. ಇದೆಲ್ಲದಕ್ಕೆ ವೇಗವಾಗಿ ಬೆಳೆಯುತ್ತಿರುವ ನಗರದ ನೀರು–ವಿದ್ಯುತ್ ಪೂರೈಕೆ, ಸಾರ್ವಜನಿಕ ಸಾರಿಗೆ, ತ್ಯಾಜ್ಯ ನಿರ್ವಹಣೆ ಇತ್ಯಾದಿಗಳ ಬಗ್ಗೆ ದೂರಗಾಮಿ ಯೋಜನೆ ಇಲ್ಲದಿರುವುದು ಕಾರಣ.

ಬೆಂಗಳೂರು ನಗರದ ಬೆಳವಣಿಗೆಯ ದೂರಗಾಮಿ ಯೋಜನೆಗೆ ಸಾಂಸ್ಥಿಕ ವ್ಯವಸ್ಥೆಯ ಕೊರತೆಯೇನಿಲ್ಲ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ(ಬಿ.ಡಿ.ಎ.), ಬೆಂಗಳೂರು ಮಹಾನಗರ ಪ್ರಾದೇಶಿಕ ಅಭಿವೃದ್ಧಿ ಪ್ರಾಧಿಕಾರ (ಬಿ.ಎಂ.ಆರ್.ಡಿ.ಎ.), ಮಹಾನಗರ ಯೋಜನಾ ಸಮಿತಿ (ಎಂ.ಪಿ.ಸಿ.) ಎಂಬ ಮೂರು ಪ್ರಾಧಿಕಾರಗಳು ಇವೆ. ಇವು ತಮ್ಮದೇ ಆದ ಕಾನೂನುಬದ್ಧ ಸ್ಥಾನಮಾನ, ಅಧಿಕಾರ, ಕರ್ತವ್ಯಗಳನ್ನು ಹೊಂದಿವ. ಇವುಗಳ ಮಧ್ಯೆ ಸಮನ್ವಯದ ಅಭಾವ ಇದೆ. ಈ ಪ್ರಾಧಿಕಾರಗಳ ಸಂಯೋಜನೆಯನ್ನು ರಾಜ್ಯ ಸರಕಾರವೇ ನಿರ್ವಹಿಸುತ್ತಿದೆ. ಇವುಗಳಿಗೆ ಒಂದು ಸಮಾನ ಕಾರ್ಯಸೂಚಿ ಇಲ್ಲ. 2013ರಲ್ಲಿ ಎಂ.ಪಿ.ಸಿ.ಯ ನಿಯಮಾವಳಿಗಳನ್ನು ರೂಪಿಸಲಾಗಿದ್ದರೂ ಅದು ಇನ್ನೂ ಕೆಲಸ ಆರಂಭಿಸಿಲ್ಲ. ಬಿ.ಬಿ.ಎಂ.ಪಿ.ಯ ವ್ಯಾಪ್ತಿಯ ಅಭಿವೃದ್ಧಿ ಯೋಜನೆಗಳ ನೀಲನಕ್ಷೆ ತಯಾರಿಸುವುದು, ನಗರದ ಎಲ್ಲಾ ಮೂಲಸೌಕರ್ಯಗಳ ಸಮಗ್ರ ಯೋಜನೆ ರೂಪಿಸುವುದು, ಅವುಗಳನ್ನು ಕಾರ್ಯರೂಪಕ್ಕೆ ತರುವುದು ಎಂ.ಪಿ.ಸಿ.ಯ ಕರ್ತವ್ಯಗಳಾಗಿವೆ. ಆದರೆ ಮುಖ್ಯಮಂತ್ರಿ ನೇತೃತ್ವದಲ್ಲಿ ಕೆಲಸ ನಿರ್ವಹಿಸಬೇಕಾದ ಎಂ.ಪಿ.ಸಿ. ಈ ವರೆಗೆ ಒಂದು ಬಾರಿಯೂ ಸಭೆ ಸೇರಿಲ್ಲ.

ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳು 'ಬೆಂಗಳೂರು ನೀಲನಕ್ಷೆ ಕ್ರಿಯಾತಂಡ' (ವಿಶನ್ ಗ್ರೂಪ್) ರಚನೆಯ ಘೋಷಣೆ ಮಾಡಿದ್ದರ ಉದ್ದೇಶ ಏನು ಎಂಬುದು ಸ್ಪಷ್ಟವಾಗಿಲ್ಲ. 'ವಿಶನ್ ಗ್ರೂಪ್' ಬೆಂಗಳೂರಿನ ಸಮಗ್ರ ಅಭಿವೃದ್ಧಿಗೆ ನೀಲನಕ್ಷೆ ತಯಾರಿಸುವ ತಜ್ಞರ ತಂಡವಾಗಿರುತ್ತದೆ ಎಂದು ಹೇಳಲಾಗಿದೆ. ಆದರೆ ಈ ತಂಡದಲ್ಲಿರುವುದು ಸರಕಾರಿ ಅಧಿಕಾರಿಗಳು, ಮಂತ್ರಿಗಳು; ಕಾರ್ಪೊರೆಟ್ ಕಂಪನಿಗಳ ಘಟಾನುಘಟಿಗಳು ಮತ್ತು ಕೆಲವು ಎನ್.ಜಿ.ಒ.ಗಳ ಪ್ರತಿನಿಧಿಗಳು. ಇವರಲ್ಲಿ ಯಾರೂ ನಗರ ಯೋಜನೆ ತಜ್ಞರಲ್ಲ. ಇವರಿಗೆ ನಗರದ ಸಮಸ್ಯೆಗಳ, ಪರಿಹಾರಗಳ ಆಳವಾದ ತಿಳುವಳಿಕೆ ಆಗಲಿ, ಕಾಳಜಿಯಾಗಲಿ, ಅನುಭವವಾಗಲಿ ಇಲ್ಲ. ತಂಡದಲ್ಲಿ ಇರುವ ವಿಪ್ರೋದ ಅಜೀಜ್ ಪ್ರೇಮ್‌ಜಿ, ಇನ್ಫೋಸಿಸ್ ಸ್ಥಾಪಕ ನಾರಾಯಣಮೂರ್ತಿ, ಬಯೊಕೊನ್ ಕಿರಣ್ ಮುಜುಮ್ ದಾರ್ ಇವರಿಗೆ ತಮ್ಮ ಕಂಪನಿಗಳಿಗೆ ನಗರಾಡಳಿತದಿಂದ ಏನು ಬೇಕು ಎಂದು ಗೊತ್ತಿರಬಹುದು. ಉದ್ಯಮಗಳ ಅಗತ್ಯಗಳ ಅರಿವು ಕಾಳಜಿ ಇರಬಹುದು. ಅವರಿಗೆ ನಗರದ ಕೆಲವು ಸಮಸ್ಯೆಗಳ ಬಗ್ಗೆ ಅರಿವಿರಬಹುದು.

ಆದರೆ ನಗರದ ಬಹುಸಂಖ್ಯಾತ ಬಡ–ಮಧ್ಯ ವರ್ಗಗಳ ಜನರ ಅಗತ್ಯಗಳ ಅರಿವು ಕಾಳಜಿ ಅವರಿಗೆ ಇಲ್ಲ. ಹಾಗಾಗಿ ಅವರು ಯಾವ ತಜ್ಞ ಸಲಹೆ ನೀಡಲು ಸಾಧ್ಯ? ಅದರಲ್ಲೂ ಕಾರ್ಪೊರೆಟ್–ಪ್ರಾಯೋಜಿತ ರಾಜಕೀಯ ಉದ್ದೇಶದ ಗುಂಪು ಬಿ–ಪ್ಯಾಕ್ ಈ ಕಂಪನಿಗಳ ಹಿತಾಸಕ್ತಿ ಕಾಪಾಡುವ ಸಂಘಟನೆ. ಇದರ 4 ಸದಸ್ಯರು ತಂಡದಲ್ಲಿದ್ದಾರೆ. ಮೊದಲ ಘೋಷಣೆಯಲ್ಲಿ ನಗರದ ಮೇಯರ್, ಪೋಲಿಸ್ ಮುಖ್ಯಸ್ಥ, ನಗರದ ಮೂಲಸೌಕರ್ಯಗಳಲ್ಲಿ ಗಣನೀಯ ಪಾತ್ರ ವಹಿಸುವ ನಮ್ಮ ಮೆಟ್ರೊ, ಬಿಎಂಟಿಸಿ, ಬೆಸ್ಕಾಂ, ನೀರು ಪೂರೈಕೆ ಮತ್ತು ಕೊಳಚೆ ನಿರ್ಮೂಲನ ಬೋರ್ಡ್‌ಗಳ ಮುಖ್ಯಸ್ಥರು ಸಹ ಇರಲಿಲ್ಲ. ಟೀಕೆಗಳ ನಂತರ ಅವರನ್ನು ಸೇರಿಸಲಾಗಿದೆ. ನಗರದ ಜನತೆಯ ಅಭಿಪ್ರಾಯ ಪ್ರತಿನಿಧಿಸಬಲ್ಲ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳ ಪ್ರತಿನಿಧಿಗಳನ್ನು ಏಕೆ ಸೇರಿಸಿಲ್ಲ ಎಂಬ ದೂರಿಗೂ ಅದನ್ನು ಪರಿಶೀಲಿಸಲಾಗುವುದು ಎಂಬ ಸಮಜಾಯಿಷಿ ಬಂದಿದೆ. ವಿಷನ್ ಗ್ರೂಪ್ ತಿಂಗಳ ಕೊನೆಯಲ್ಲಿ ಸಭೆ ಸೇರುವುದು ಎಂದು ಹೇಳಲಾಗಿದೆ.

'ವಿಶನ್ ಗ್ರೂಪ್' ರಚಿಸುವ ನಿರ್ಧಾರದ ಹಿಂದೆ ಬೆಂಗಳೂರಿನ ಸಮಗ್ರ ಅಭಿವೃದ್ಧಿಗೆ ಯೋಜನೆ ತಯಾರಿಸುವ ಉದ್ದೇಶ ಬಿಟ್ಟು ಬೇರೆ ಕಾರಣಗಳೇ ಇರುವ ಹಾಗೆ ಕಾಣುತ್ತದೆ. ಮೊದಲನೆಯದಾಗಿ ಇದು ರಾಜ್ಯ ಸರಕಾರದಿಂದ ಸ್ಥಳೀಯ ಸಂಸ್ಥೆಗಳಿಗೆ ಪರಿಣಾಮಕಾರಿ ಅಧಿಕಾರ ವಿಕೇಂದ್ರೀಕರಣ ಮಾಡುವ ಬಗ್ಗೆ ಇರುವ ಅಸಡ್ಡೆ, ಪ್ರತಿರೋಧವನ್ನು ತೋರಿಸುತ್ತದೆ. ಬೆಂಗಳೂರಿನಂತಹ 'ಫಲವತ್ತಾದ' ಕ್ಷೇತ್ರದ ಬಗೆಗಿನ ನಿರ್ಧಾರಗಳನ್ನು ಆದಷ್ಟು ಕೆಲವೇ ಆಸಕ್ತ ಮಂದಿ ತೆಗೆದುಕೊಳ್ಳುವ ಪ್ರಜಾಪ್ರಭುತ್ವ–ವಿರೋಧಿ ಕೇಂದ್ರೀಕರಣದ ಧೋರಣೆಯನ್ನು ಬಿಂಬಿಸುತ್ತದೆ. ಜನತೆಯಿಂದ ಚುನಾಯಿತರಾದವರ ಅವರಿಗೆ ಜವಾಬ್ದಾರರಾಗಿರುವವರಿಂದ ನಿಜವಾದ ಅಧಿಕಾರವನ್ನು ಕಿತ್ತುಕೊಂಡು, ಕೆಲವೇ ಕಾರ್ಪೊರೆಟ್ ಕುಳಗಳು, ಅವರ ಹಿತಾಸಕ್ತಿ ಕಾಪಾಡುವ ಅಧಿಕಾರಿಗಳು, ರಾಜಕಾರಣಿಗಳ ಕೈಗೆ ಕೊಡುವ ಹುನ್ನಾರ ಕಾಣುತ್ತದೆ. ಈಗಾಗಲೇ ವ್ಯಾಪಕವಾಗಿ ಸಾರ್ವಜನಿಕ ಭೂಮಿ ಮತ್ತು ಕೆರೆಗಳ ಒತ್ತುವರಿ, ನಗರದ ಭೂಮಿ/ನಿವೇಶನ ಬೆಲೆಯನ್ನು ಹೆಚ್ಚಿಸುತ್ತಾ ಹೋಗುವ ರಿಯಲ್ ಎಸ್ಟೇಟ್ ಹಿತಾಸಕ್ತಿಗಳ ರಕ್ಷಣೆ ಬೆಂಗಳೂರು 'ಅಭಿವೃದ್ಧಿಯ ಮುಖ್ಯ ಕಾರ್ಯಸೂಚಿ'ಯಾಗಿದೆ. ರಿಯಲ್ ಎಸ್ಟೇಟ್ ಕುಳಗಳು ಕಾರ್ಪೊರೆಟ್ ಹೂಡಿಕೆಯನ್ನೂ ಮಾಡುತ್ತಿದ್ದು 'ವಿಶನ್ ಗ್ರೂಪ್'ನಲ್ಲಿರುವ ಕಾರ್ಪೊರೆಟ್ ಕುಳಗಳು ಅವರ ಜತೆ ಶಾಮೀಲಾಗುವ ಸಾಧ್ಯತೆಯೇ ಹೆಚ್ಚು. 'ವಿಶನ್ ಗ್ರೂಪ್'ನ ಸದಸ್ಯರಿಗೆ ನಗರದ ಬಹುಸಂಖ್ಯಾತ ಬಡ–ಮಧ್ಯಮ ವರ್ಗದ ಸಮಸ್ಯೆಗಳ ಅಥವಾ ಸುಸ್ಥಿರ ಪರಿಸರ–ಸ್ನೇಹಿ ಸಮಗ್ರ ಬೆಳವಣಿಗೆಯ ಬಗ್ಗೆ ಅರಿವಾಗಲಿ ಕಾಳಜಿಯಾಗಲಿ ಇರುವುದು ಕಾಣುತ್ತಿಲ್ಲ.

ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳ ನಾಯಕರೂ, ಸಿವಿಕ್ ನಂತಹ ಜನಪರ ಸಂಸ್ಥೆಗಳೂ 'ವಿಶನ್ ಗ್ರೂಪ್'ನ ಕಾನೂನುಬದ್ಧತೆ ಪ್ರಶ್ನಿಸಿ ಕೋರ್ಟಿಗೆ ಹೋಗುವುದಾಗಿ ಘೋಷಿಸಿದ್ದಾರೆ. ಈ ಹಿಂದಿನ ಸರಕಾರ ರಚಿಸಿದ್ದ ಬಿ.ಎ.ಟಿ.ಎಫ್.ನ ರಚನೆಯನ್ನು ಕೋರ್ಟು ವಜಾಗೊಳಿಸಿತ್ತು ಎಂದು ನೆನಪಿಸಿಕೊಳ್ಳಬಹುದು. ಈ ಹಿನ್ನೆಲೆಯಲ್ಲಿ ಮಹಾನಗರ ಯೋಜನಾ ಸಮಿತಿ (ಎಂ.ಪಿ.ಸಿ.)ಯನ್ನು ಸಕ್ರಿಯಗೊಳಿಸಿ ಅದರ ನಿಯಮಾವಳಿಗಳಲ್ಲಿ ಅಗತ್ಯ ಬದಲಾವಣೆ ಮಾಡಿ, ಅದು ಎಲ್ಲಾ ನಗರಾಭಿವೃದ್ಧಿ ಯೋಜನೆಗಳ, ಜಾರಿಯ ಸಮನ್ವಯದ ಕೆಲಸ ನಿರ್ವಹಿಸುವಂತೆ ಮಾಡುವುದು ಸೂಕ್ತ. ಇದರ ಬದಲು ಸರಕಾರ 'ವಿಶನ್ ಗ್ರೂಪ್' ಹಾದಿ ಮುಂದುವರೆಸಿದರೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳ ಜತೆ ಎಡ–ಪ್ರಜಾಸತ್ತಾತ್ಮಕ ಶಕ್ತಿಗಳು ಜನಪರ ಸುಸ್ಥಿರ ಪರಿಸರ–ಸ್ನೇಹಿ ನಗರಾಭಿವೃದ್ಧಿಗಾಗಿ ಹೋರಾಟ ಕೈಗೆತ್ತಿಕೊಳ್ಳಬೇಕು.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಜನ-ವಿರೋಧಿ ನೀತಿಗಳ ವಿರುದ್ಧ ಎಡಪಕ್ಷಗಳಿಂದ ಪ್ರತಿಭಟನೆ

ಜೂನ್ 6ಕ್ಕೆ ರಾಜ್ಯ ಮಟ್ಟದ ಬೃಹತ್ ಪ್ರತಿಭಟನಾ ಸಭೆ

ದೇಶದ ಪರಿಸ್ಥಿತಿಯು ಹಿಂದೆಂದಿಗಿಂತಲೂ ಹೆಚ್ಚು ಹದಗೆಟ್ಟಿದೆ. ಸ್ವಾತಂತ್ರ್ಯ ಪಡೆದಂದಿನಿಂದಲೂ ಇಲ್ಲಿಯವರೆಗೆ ನಮ್ಮ ದೇಶವನ್ನಾಳಿದ ಎಲ್ಲಾ ಸರ್ಕಾರಗಳು, ಕಾಂಗ್ರೆಸ್ ಆಗಿರಬಹುದು ಅಥವಾ ಬಿಜೆಪಿ ಆಗಿರಬಹುದು, ಜನಸಾಮಾನ್ಯರಿಗೆ ಮಾರಕವಾದ ನೀತಿಗಳನ್ನೇ ಜಾರಿಗೊಳಿಸುತ್ತಾ ಬಂದಿವೆ.

ಕೇಂದ್ರದಲ್ಲಿ ಅಧಿಕಾರ ಹಿಡಿದ ಬಿಜೆಪಿ ಸರ್ಕಾರದಿಂದಾಗಿ ಎಲ್ಲಾ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದಾಗಿ ಭಾರತದ ಆರ್ಥಿಕತೆ ತೀವ್ರ ಬಿಕ್ಕಟ್ಟಿಗೆ ಸಿಲುಕಿದೆ. ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರಗಳ ವ್ಯಾಪಾರೀಕರಣ ಹಾಗೂ ಖಾಸಗೀಕರಣದಿಂದಾಗಿ ಕೋಟ್ಯಂತರ ಬಡವರು ಶಿಕ್ಷಣ ಹಾಗೂ ಆರೋಗ್ಯ ಸೇವೆಗಳಿಂದ ವಂಚಿತರಾಗುತ್ತಿದ್ದಾರೆ. ಕಾರ್ಪೋರೇಟ್ ಕಂಪನಿಗಳ ಅನುಕೂಲಕ್ಕೆ ತಕ್ಕಂತೆ ಕಾರ್ಮಿಕ ಕಾನೂನುಗಳನ್ನು ತಿದ್ದುಪಡಿ ಮಾಡಲಾಗುತ್ತಿದೆ, ಕಠಿಣ ಹೋರಾಟಗಳಿಂದ ಗಳಿಸಲಾಗಿದ್ದ ಕಾರ್ಮಿಕರ ಹಕ್ಕುಗಳನ್ನು ಹರಣ ಮಾಡಲಾಗುತ್ತಿದೆ.

ಅದೇ ರೀತಿಯಲ್ಲಿ ರಾಜ್ಯದಲ್ಲಿ ಆಳುತ್ತಿರುವ ಕಾಂಗ್ರೆಸ್ ಸರ್ಕಾರ ಬಂದ ಮೇಲೆ ನಿರುದ್ಯೋಗ, ರೈತರ ಆತ್ಮಹತ್ಯೆ ಮತ್ತು ಇತರೆ ಜ್ವಲಂತ ಸಮಸ್ಯೆಗಳು ದ್ವಿಗುಣಗೊಂಡಿವೆ. ಮಧ್ಯ ಹಾಗೂ ಉತ್ತರ ಕರ್ನಾಟಕದ ಜಿಲ್ಲೆಗಳಷ್ಟೇ ಅಲ್ಲದೆ ರಾಜ್ಯದ ಬಹುತೇಕಕಡೆಕುಡಿಯುವ ನೀರು ಸಿಗದಂತಹ ಬರ ಪರಿಸ್ಥಿತಿ ಬಂದಪ್ಪಳಿಸಿದೆ. ಶಾಶ್ವತ ನೀರಾವರಿ ಯೋಜನೆಗಳನ್ನು ಕಲ್ಪಿಸುವುದು ಜರೂರು ಆಗಲೇಬೇಕು, ಆದಾಗ್ಯೂ ಅಗತ್ಯ ಹಣ ಮಂಜೂರು ಮಾಡಲು ಕೇಂದ್ರ ಸರ್ಕಾರವಾಗಲಿ ಹಾಗೂ ರೈತರನ್ನು ಕಾಪಾಡಲು ಸಮರ್ಪಕ ಕ್ರಮಗಳನ್ನು ಕೈಗೊಳ್ಳಲು ರಾಜ್ಯ ಸರ್ಕಾರವಾಗಲಿ ಮುಂದೆ ಬಂದಿಲ್ಲ.

ಭ್ರಷ್ಟಾಚಾರ–ಮುಕ್ತ ಕರ್ನಾಟಕದ ಆಶ್ವಾಸನೆ ನೀಡಿದ್ದ ರಾಜ್ಯ ಸರ್ಕಾರ ಪ್ರಸಕ್ತ ಅಸ್ತಿತ್ವದಲ್ಲಿರುವ 'ಲೋಕಾಯುಕ್ತ'ವನ್ನು ಬಲಗೊಳಿಸುವ ಬದಲು ಹೊಸದಾಗಿ ಭ್ರಷ್ಟಾಚಾರ ನಿಗ್ರಹ ದಳ(ಎಸಿಬಿ)ವನ್ನು ರಚಿಸುತ್ತಿರುವುದು ಸಮಂಜಸವಲ್ಲ. ಇದು ಭ್ರಷ್ಟ ರಾಜಕಾರಣಿಗಳು ಹಾಗೂ ಅಧಿಕಾರಿಗಳಿಗೊಂದು ರಹದಾರಿಯಷ್ಟೇ!. ಹಾಗೆಯೇ ನಮ್ಮ ರಾಜ್ಯದಲ್ಲಿಯೂ ಸಹ ಸಂಘ ಪರಿವಾರ ಮತ್ತು ಬಿಜೆಪಿಗೆ ಸೇರಿದ ಪ್ರತಿಗಾಮಿ ಶಕ್ತಿಗಳ ಚಟುವಟಿಕೆಗಳು ಜನತೆಯ ಒಗ್ಗಟ್ಟು ಮತ್ತು ಕೋಮು ಸಾಮರಸ್ಯಕ್ಕೆ ಧಕ್ಕೆ ತರುತ್ತಿವೆ.

ಪ್ರಬಲ ಜನಾಂದೋಲನದ ಮೂಲಕ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಕಾರ್ಪೋರೇಟ್–ಪರ ಮತ್ತು ಜನ–ವಿರೋಧಿ ನೀತಿಗಳನ್ನು ಹಿಮ್ಮೆಟ್ಟಿಸುವುದೇ ಈ ಘಳಿಗೆಯ ಅವಶ್ಯಕತೆ. ಈ ದಿಶೆಯಲ್ಲಿ–ಸಿಪಿಐ, ಸಿಪಿಐ(ಎಂ), ಎಸ್‌ಯುಸಿಐ(ಸಿ), ಸಿಪಿಐಎಂಎಲ್(ಲಿಬರೇಷನ್), ಫಾರ್ವರ್ಡ್ ಬ್ಲಾಕ್ – ಎಡಪಕ್ಷಗಳು ಜಂಟಿಯಾಗಿ 2016 ಜೂನ್ 6ರಂದು ಬೆಂಗಳೂರಿನಲ್ಲಿ ರಾಜ್ಯ ಮಟ್ಟದ ಬೃಹತ್ ಪ್ರತಿಭಟನಾ ಮೆರವಣಿಗೆಯನ್ನು ಸಂಘಟಿಸುತ್ತಿವೆ. ಅದಕ್ಕೂ ಮುಂಚೆ ಜಿಲ್ಲಾ ಮಟ್ಟದ ಸಮಾವೇಶಗಳನ್ನು ಮತ್ತು ಪ್ರಚಾರ ಕಾರ್ಯಕ್ರಮಗಳನ್ನು ರಾಜ್ಯದಾದ್ಯಂತ ಹಮ್ಮಿಕೊಳ್ಳಲಾಗುವುದು.

ಹಕ್ಕೊತ್ತಾಯಗಳು

1) ಜನವಿರೋಧಿ ಕಾರ್ಮಿಕ ಕಾನೂನುಗಳ ತಿದ್ದುಪಡಿಗಳನ್ನು ಕೈಬಿಡಿ. ಸರ್ಕಾರದ ಅಡಿಯಲ್ಲಿ ದುಡಿಯುತ್ತಿರುವ ಲಕ್ಷಾಂತರ ಕಾಂಟ್ರಾಕ್ಟ್, ಅರೆಕಾಲಿಕ ಉದ್ಯೋಗಿಗಳ, ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರ ಸಮಸ್ಯೆಗಳನ್ನು ಪರಿಹರಿಸಿ, ಅಸಂಘಟಿತ ಕ್ಷೇತ್ರಗಳ ಕಾರ್ಮಿಕರಿಗೆ ರಕ್ಷಣೆ ಒದಗಿಸಿ.
2) ಬರಗಾಲ ಪರಿಹಾರ ಕಾಮಗಾರಿಗಳಿಗಾಗಿ ಹಾಗೂ ನರೇಗಾದ ಸೂಕ್ತ ಅನುಷ್ಠಾನಗೊಳಿಸಿ. ಮಧ್ಯ ಹಾಗೂ ಉತ್ತರಕರ್ನಾಟಕದ ಜಿಲ್ಲೆಗಳ ನೀರಿನ ಕೊರತೆಯನ್ನು ನೀಗಿಸಲು ಶಾಶ್ವತ ನೀರಾವರಿ ಯೋಜನೆಯನ್ನು ಜಾರಿಗೊಳಿಸಿ. ಬಗರ್ ಹುಕುಂ ರೈತರಿಗೆ ಭೂಮಿ ಹಕ್ಕು ನೀಡಿ, ಬಡ–ಮಧ್ಯಮ ರೈತರ ಸಾಲ ಮನ್ನಾ ಮಾಡಿ, ರೈತ ಬೆಳೆದ ಬೆಳೆಗೆ ಸೂಕ್ತ ಬೆಂಬಲ ಬೆಲೆ ನೀಡಿ, ಅಗ್ಗ ದರದಲ್ಲಿ ಬೀಜ, ಗೊಬ್ಬರ, ಕೀಟನಾಶಕಗಳ ಒದಗಿಸಿ, ನಿರಂತರ ವಿದ್ಯುತ್‌ಗಾಗಿ, ಕಬ್ಬು–ಭತ್ತ–ತೆಂಗು ಬೆಳೆಗಾರರ ಬಿಕ್ಕಟ್ಟನ್ನು ಶೀಘ್ರ ಪರಿಹರಿಸಿ.
3) ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ತಡೆಯಿರಿ, ಮರ್ಯಾದಾ ಹತ್ಯೆಗಳಿಗೆ ಕೊನೆಹಾಕಿ, ಮಹಿಳಾ ವಿರೋಧಿ ಕೃತ್ಯಗಳಲ್ಲಿ ತೊಡಗಿರುವ ಎಲ್ಲಾ ಅಪರಾಧಿಗಳಿಗೆ ಸೂಕ್ತ ಶಿಕ್ಷೆ ನೀಡಿ, ಮಹಿಳೆಯರಿಗೆ ಉದ್ಯೋಗ–ಶಿಕ್ಷಣಗಳ ಹಕ್ಕನ್ನು ಖಾತ್ರಿ ಪಡಿಸಿ.
4) ಎಲ್ಲರಿಗೂ ಸಾರ್ವತ್ರಿಕ ಶಿಕ್ಷಣ ಹಾಗೂ ಆರೋಗ್ಯ ಖಾತ್ರಿ ಪಡಿಸಿ. ಉನ್ನತ ಶಿಕ್ಷಣವೂ ಸಹ ಬಡವರಿಗೆ–ಮಧ್ಯಮ ವರ್ಗದವರಿಗೆ ಕೈಗೆಟುಕುವಂತೆ ಮಾಡಿ. ಎಲ್ಲ ರೀತಿಯ ಡೊನೇಶನ್ ಕ್ಯಾಪಿಟೇಶನ್ ಫೀ ಪದ್ಧತಿಗೆ ಕೊನೆಹಾಕಿ. ಶಿಕ್ಷಣದ ಕೋಮುವಾದೀಕರಣ–ಕೇಸರೀಕರಣಗಳನ್ನು ತಡೆಗಟ್ಟಿ. ವಿಶ್ವವಿದ್ಯಾಲಯಗಳ ಸ್ವಾಯತ್ತತೆ ಹಾಗೂ ಸ್ವಾತಂತ್ರ್ಯದ ವಾತಾವರಣವನ್ನು ಉಳಿಸಿ.
5) ಎಲ್ಲರಿಗೂ ಉದ್ಯೋಗ ಒದಗಿಸಿ, ಅಲ್ಲಿಯವರೆಗೂ ನಿರುದ್ಯೋಗ ಭತ್ಯೆ ನೀಡಿ, ಸರ್ಕಾರದಲ್ಲಿ ಖಾಲಿ ಇರುವ ಎರಡೂವರೆ ಲಕ್ಷ ಹುದ್ದೆಗಳನ್ನು ಭರ್ತಿ ಮಾಡಿ.
6) ದಲಿತರ, ಅಲ್ಪಸಂಖ್ಯಾತರ, ಮಹಿಳೆಯರ ಮೇಲಿನ ದಮನಕಾರಿ ಧೋರಣೆಗಳನ್ನು ಮಟ್ಟಹಾಕಿ, ಕೋಮುವಾದಿ–ಜಾತಿವಾದಿ ಶಕ್ತಿಗಳಿಗೆ ಕಡಿವಾಣ ಹಾಕಿ. ಸಾಂಸ್ಕೃತಿಕ ಕ್ಷೇತ್ರ–ಕ್ಕೆ ಸಂಬಂಧಿಸಿದಂತೆ ಸೂಕ್ತ ನೀತಿ ರೂಪಿಸಿ. ಎಲ್ಲಾ ಸಾಂಸ್ಕೃತಿಕ–ಪಾರಂಪರಿಕ ತಾಣಗಳ ಖಾಸಗೀಕರಣವನ್ನು ನಿಲ್ಲಿಸಿ.
7) ಭ್ರಷ್ಟಾಚಾರ ನಿಗ್ರಹ ದಳ(ಎಸಿಬಿ)ವನ್ನು ಕೈಬಿಟ್ಟು ಲೋಕಾಯುಕ್ತವನ್ನು ಬಲಪಡಿಸಿ.

ಕಾಂಗ್ರೆಸ್ ಸರಕಾರದ ಮೂರು ವರುಷಗಳು ನುಡಿ ಭರಪೂರ – ನಡೆ ಸಪೂರ

ಎಸ್.ವೈ. ಗುರುಶಾಂತ್

2013 ಮೇ 13, ಕರ್ನಾಟಕದಲ್ಲಿ ಹೊಸ ವಾತಾವರಣ. ಜನರಲ್ಲಿ ಏನೋ ಒಂದು ಬಗೆ–ಯ ಉತ್ಸಾಹ, ಹೊಸ ಸರಕಾರದ ಬಗೆಗಿನ ಹೊಸ ಆಶಯಗಳು, ಸಾಕಾರವಾಗುವ ನಂಬಿಕೆ, ನಿರೀಕ್ಷೆ. ಆ ಹಿಂದಿನ ಐದು ವರುಷಗಳಲ್ಲಿ ತಮಗೆ ದ್ರೋಹವೆಸಗಿ, ಹುರಿದು ಮುಕ್ಕಿದ್ದ ಭ್ರಷ್ಟ ಬಿಜೆಪಿ ಸರಕಾರದಲ್ಲಿ ತಾವು ಅನುಭವಿಸಿದ ಬವಣೆ, ತತ್ತರಗಳಿಗೆ, ಮಳಲುತ್ತಿದ್ದ ಆಕ್ರೋಶವನ್ನು ಚುನಾವಣೆಯಲ್ಲಿ ಮತದ ಮೂಲಕ ಸಾಧಿಸಿದ ತೃಪ್ತಿ. ವಂಚಕ, ವಿಶ್ವಾಸದ್ರೋಹಿಗಳಿಗೆ ತಕ್ಕ ಉತ್ತರ ಕೊಟ್ಟ ಸಮಾಧಾನ!

ನಿಜ, ಭಾರೀ ಭ್ರಷ್ಟಾಚಾರದ ಕ್ರಿಮಿನಲ್ ಹಗರಣಗಳು, ಪರಿಣಾಮ ಜೈಲಿಗೆ ಹೋದ ಮುಖ್ಯಮಂತ್ರಿ, ಎಲ್ಲೆಡೆ ಕೋಮುತ್ವೇಷ, ಹಿಂಸೆಯ ದಳ್ಳುರಿ, ಸಂವಿಧಾನ, ಕಾನೂನು ರೀತಿ ರಿವಾಜುಗಳನ್ನು ಗಾಳಿಗೆ ತೂರಿದ ದುರಾಡಳಿತ, ಅಧಿಕಾರ ದಾಹಿಗಳ ಕಲಹಗಳು, ಇಂತಹ ಸರಕಾರ ತೊಲಗಬೇಕೆಂಬ ಪ್ರಬಲ ಆಕಾಂಕ್ಷೆ ಜನರಲ್ಲಿ ಇದ್ದದ್ದು ಸಹಜ. ಆದರ ಪರಿಣಾಮ ಪರ್ಯಾಯವಾಗಿ ಕಂಡದ್ದು ಕಾಂಗ್ರೆಸ್‌ನಲ್ಲಿ. ಆಗ ಬಿಜೆಪಿ ವಿರೋಧ ಪಕ್ಷದ ಸ್ಥಾನವನ್ನೂ ಪಡೆಯಲಾಗದಂತೆ ಸೋಲಿಸಿದ್ದರು ಜನ. ಮೂರನೆಯ ಪ್ರಾದೇಶಿಕ ಪರ್ಯಾಯವೆಂದು ಪ್ರಚಾರಿಸಿದ್ದ ಜೆ.ಡಿ ಎಸ್‌ನ ಮಾತುಗಳನ್ನೂ ಅದರ ಸಂದರ್ಭಸಾಧಕ ರಾಜಕಾರಣದಿಂದಾಗಿ ಜನರು ನಂಬಿರಲಿಲ್ಲ. ಇಂತಹ ರಾಜಕೀಯ ವಾತಾವರಣದಲ್ಲಿಯೇ 'ಪುನರುಜ್ಜೀವನ' ಗೊಂಡ 'ಅಹಿಂದ'ದ ನಾಯಕ ಸಿದ್ಧರಾಮಯ್ಯನವರು ಮುಖ್ಯಮಂತ್ರಿಯಾದದ್ದು.

ಅಂದು ಸಿದ್ಧರಾಮಯ್ಯ, ಮಲ್ಲಿಕಾರ್ಜುನ ಖರ್ಗೆಯಂತಹ ಹಿರಿಯ ಕಾಂಗ್ರೆಸ್ ನಾಯಕರು ಆಡಿದ ಭರವಸೆಗಳ ಮಾತು 'ಸ್ಥಿರ ಸರಕಾರ, ಶುದ್ಧ ಆಡಳಿತದ ಸರಕಾರ' ಮುಂದೆ ಅದು ಅಭಿವೃದ್ಧಿ ಸಾಧಿಸುವ, ' ನುಡಿದಂತೆ ನಡೆವ ಸರಕಾರ' ದ ಘೋಷಣೆಯಾಗಿ ಮಾರ್ಪಟ್ಟು ಜಾಹೀರಾತಿನಲ್ಲಿ ಆದ್ಯತೆ ಪಡೆದು ಇದೀಗ ಮೂರು ತುಂಬುವ ಒಳಗೇ ಸವಕಲಾಗಿ ತೆವಳುತ್ತಿದೆ.

ತಾವು ಆಡಿದ ಮಾತುಗಳಿಗೆ ಕಾಂಗ್ರೆಸ್ ನಾಯಕರು ಬದ್ಧರಾಗಿಲ್ಲ. ಕೊಟ್ಟ ಭರವಸೆಗಳ ಜಾರಿಯಲ್ಲಿ ಈ ಸರಕಾರ ಸಫಲವಾಗಲಿಲ್ಲ. ಇದು ಈ ಮೂರು ವರುಷಗಳ ಆಡಳಿತದ ಒಟ್ಟು ಸ್ಥಿತಿ! ಮೂಲಭೂತ ಪ್ರಶ್ನೆಗಳಿಗೆ ಒಂದಿಷ್ಟೂ ಪರಿಹಾರ ಕಾಣಲಿಲ್ಲ.

ಕುಸಿದ ಅಭಿವೃದ್ಧಿ, ಏರಿದ ಸಾಲ

ಬಿಜೆಪಿಯ ದುರಾಡಳಿತದಿಂದಾಗಿ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಸರಿ ದಾರಿಗೆ ತರುವುದಾಗಿ ಕಾಂಗ್ರೆಸ್ ಪಕ್ಷ ಹೇಳಿತ್ತು. ಆದರೆ ಈ ಮೂರು ವರುಷಗಳಲ್ಲಿ ಆಗಿರುವುದೇ ಬೇರೆ! ರಾಜ್ಯ ಸಾಲದ ಹೊರೆಯಿಂದ ಸರಕಾರ ಪಾರಾಗಲಿಲ್ಲ, ಹೋಗಲಿ ಅದರ ಭಾರವಾದರೂ ಕಡಿಮೆಯಾಯಿತೇ ಅಂ–ದರೆ ಇಲ್ಲ. ಹಣಕಾಸು ಖಾತೆಯನ್ನೂ ಹೊಂದಿರುವ ಸಿದ್ಧರಾಮಯ್ಯನವರ ಆಡಳಿತದ ಅವಧಿಯಲ್ಲೇ ಸಾಲದ ಹೊರೆ ಹೆಚ್ಚಿತು. ಒಟ್ಟು ಸಾಲಕ್ಕೆ ಬಡ್ಡಿ ಕಟ್ಟಲು ಮತ್ತೇ ಸಾಲ ಮಾಡಲೇ ಬೇಕಾದ ದುಃಸ್ಥಿತಿಯಲ್ಲಿ ಕುಳಿತಿದೆ. ಹಣ ಅಲ್ಲಿ ಸೋರುತ್ತದೆ. ಬಜೆಟ್ ಗಾತ್ರವೇನೋ ಹಿಗ್ಗಿಸಲಾಗಿದೆ. ಆದರೆ ಮೂಲಭೂತ ಅಭಿವೃದ್ಧಿಗೆ ಹಣದ ಕೊರತೆ ಅನುಭವಿಸುತ್ತಿದೆ. ಸುಸ್ಥಿರ ಆರ್ಥಿಕತೆಯ ಪ್ರಮುಖ ಕ್ಷೇತ್ರಗಳಾದ ಕೃಷಿ ಮತ್ತು ಮೂಲ ಕೈಗಾರಿಕಾ ಬೆಳವಣಿಗೆ ಸ್ಥಗಿತಗೊಂಡು ಇದೀಗ ಹಿನ್ನಡೆ ಅನುಭವಿಸುತ್ತಿದೆ. ಆದರೂ ಸೇವಾ ಕ್ಷೇತ್ರದ ಆದಾಯವನ್ನು ಸೇರಿಸಿ ಪ್ರಗತಿಯ ಭ್ರಮೆ ಮೂಡಿಸಲಾಗುತ್ತಿದೆ. ಆಂತರಿಕ ಆರ್ಥಿಕತೆ–ಯ ಬಲವರ್ಧನೆ, ಬಂಡವಾಳದ ಕ್ರೋಢಿಕರಣ, ಸಾರ್ವಜನಿಕ ವಲಯದ ರಕ್ಷಣೆ ಹಾಗೂ ವಿಸ್ತರಣೆಗೆ ಬದಲಾಗಿ ವಿದೇಶಿ ಮತ್ತು ಸ್ವದೇಶಿ ಬಂಡವಾಳ ಹೂಡಿಕೆಯನ್ನೇ ಅವಲಂಬಿಸಲಾಗುತ್ತಿದೆ. ಕಳೆದ ಎರಡು ವರುಷಗಳಲ್ಲಿ ಕರ್ನಾಟಕ ಸರಕಾರ ನಡೆಸಿದ ಹೂಡಿಕೆದಾರರ ಸಮಾವೇಶಗಳಲ್ಲಿ ಭಾರೀ ಬಂಡವಾಳವನ್ನು ಸೆಳೆಯಲಾಗಿದೆ ಎನ್ನಲಾಗುತ್ತಿದೆ. ಈ ವರ್ಷದ 'ಇನ್‌ವೆಸ್ಟ್ ಕರ್ನಾಟಕ' ಸಮಾವೇಶದಲ್ಲಿ ಒಟ್ಟು ಸುಮಾರು 177 ಯೋಜನೆಗಳಲ್ಲಿ 1 ಲಕ್ಷ 70 ಸಾವಿರ ಕೋಟಿ ರೂಪಾಯಿಗಳ ಬಂಡವಾಳ ಹೂಡಿಕೆಯಾಗಲಿದೆ ಎಂದು ಹೇಳಲಾಯಿತು. ಕಳೆದ ವರುಷದ್ದೂ ಸೇರಿದರೆ ಅದು ಸುಮಾರು 3 ಲಕ್ಷ ಕೋಟಿ ರೂ.ಗಳಾಗುತ್ತದೆ. ಆದರೆ ಬಂದ ಹಣ ಎಷ್ಟು? ನಿಜಕ್ಕೂ ಹಣ ಹೂಡಿಕೆ ಹರಿದು ಬಂತೆ? ಬರಲಿಲ್ಲ. ಸಮಾವೇಶಕ್ಕೆ ಬಂದವರೆಲ್ಲಾ ಹೂಡುವವರಲ್ಲ. ಅದರಲ್ಲಿ ಯೋಜನೆಗಳ ಅಂಗೀಕಾರವೇ ಹೂಡಿಕೆ ಎಂಬ ಹುಸಿ ಪ್ರದರ್ಶನವೂ ಇದೆ. ಅಂದರೆ ಬರೀ ಸಂಖ್ಯೆಗಳನ್ನು ತೋರಿಸಿ ಭ್ರಮೆ ಸೃಷ್ಟಿಸುವ ಕಸರತ್ತು! ನಿಜಕ್ಕೂ ಬಂಡವಾಳ ಹರಿದು ಬಂದಿದ್ದರೆ ಅಪಾರ ಉದ್ಯೋಗಗಳ ಸೃಷ್ಟಿಯಾಗಬೇಕಿತ್ತು. ಸರಕಾರದ ಬೊಕ್ಕಸ ಹಣದ ಹರಿವಿನಿಂದ ತುಂಬಿ ಹರಿಯಬೇಕಿತ್ತು! ಇದಾವೂದೂ ಆಗುತ್ತಿಲ್ಲ. ಒಂದು ವೇಳೆ ಖಜಾನೆ ತುಂಬಿದ್ದರೆ ಉಪನ್ಯಾಸಕರ ನ್ಯಾಯ ನಿರೀಕ್ಷೆಯ ಒಂದು ಸಣ್ಣ ಬೇಡಿಕೆಗೆ 50 ಕೋಟಿ ಹಣವೂ ಇಲ್ಲ ಎನ್ನುವ ಉತ್ತರವಾದರೂ ಯಾಕೆ? ಹೀಗಿರುವಾಗ ಹೂಡಿಕೆ ಸೆಳೆಯುವ ಉತ್ಸಾಹವೇನೋ ಸಾರ್ವಜನಿಕವಾಗಿ ನಿಂತಿಲ್ಲ. ಆದ್ದರಿಂದಲೇ ಬಂಡವಾಳಗಾರರನ್ನು ಆಹ್ವಾನಿಸಲು 'ಉದ್ಯೋಗ ಮಿತ್ರ' ಇರುವಾಗಲೂ 'ಇನ್ವೆಸ್ಟ್ ಕರ್ನಾಟಕ' ವೆಂಬ ಹೊಸ ಕಂಪನಿಯನ್ನು ಹುಟ್ಟು ಹಾಕಿ ಸಾಧನೆಯ ಹಾದಿಯಲ್ಲಿ ತಾವು ಗಂಭೀರ ಯತ್ನದಲ್ಲಿ ಇದ್ದೇವೆ ಎಂದು ಭ್ರಮೆ ಹುಟ್ಟಿಸಲಾಗುತ್ತಿದೆ. ಇಲ್ಲಿ ಹಣ ಹೂಡುವವರ ಅಣತಿಯಂತೆ ಕಾರ್ಮಿಕ ಕಾನೂನುಗಳಿಗೆ ಕರಾಳ ತಿದ್ದುಪಡಿ ಮಾಡಿ ಬಂಡವಾಳದಾರರನ್ನು ಓಲೈಸಲಾಗುತ್ತಿದೆ. ಇದೇ ಹಿನ್ನೆಲೆಯಲ್ಲಿಯೆ ಸಿದ್ಧರಾಮಯ್ಯನವರ ಸರಕಾರ ಚರ್ಚೆಯೂ ಇಲ್ಲದೆ, ವಿರೋಧಕ್ಕೆ ಬೆಲೆಯೂ ನೀಡದೇ ಎಸ್ಮಾ ಕಾಯಿದೆಗೆ ಕರಾಳ ತಿದ್ದುಪಡಿ ಮಾಡಿತು. ಕೇಂದ್ರದ ಅಂತಹ ಕಾಯಿದೆಗಳಿಗೆ ಪ್ರತಿರೋಧವೂ ಇಲ್ಲದಂತೆ ನಡೆಯಿತು.

ಉದ್ಯೋಗ ವಿನಾಶ!

ಮೂರು ವರುಷಗಳ ಪೂರೈಕೆಯ ಸಂದರ್ಭದಲ್ಲಿ ಹೊರ ಬಂದಿರುವ ಸಂಗತಿ ಸರಕಾರದ ಹಾದಿಯನ್ನು ತೋರಿಸುವಂತಹುದು. ರಾಜ್ಯ ಸರಕಾರದ ವಿವಿಧ ಇಲಾಖೆಗಳಲ್ಲಿ ಸುಮಾರು 2 ಲಕ್ಷದ 70 ಸಾವಿರ ಹುದ್ದೆಗಳು ಖಾಲಿಯಿವೆ. ಅತ್ಯಂತ ಹಿಂದುಳಿದ ಆದರೆ ಅದನ್ನು ಅಭಿವೃದ್ಧಿ ಪಡೆಇಸುತ್ತೇವೆಂದು ಪಣ ತೊಡಲಾಗುತ್ತಿರುವ ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲೇ 70 ಸಾವಿರ ಖಾಲಿ ಬಿದ್ದಿವೆ! ಈ ವರುಷದ ಕೊನೆಯಲ್ಲಿ ನಿವೃತ್ತರಾಗುವ ಸಂ–ಖ್ಯೆ ಗಣಿಸಿದರೆ ಒಟ್ಟು 3 ಲಕ್ಷ ಹುದ್ದೆಗಳು ಖಾಲಿ ಬೀಳಲಿವೆ. ಅಂದರೆ ಸರಕಾರದಲ್ಲಿ ಅಗತ್ಯವಿರುವ ನೌಕರ–ಸಿಬ್ಬಂದಿಯೇ ಇಲ್ಲದಿರುವಾಗ ಜನರ ಸಮಸ್ಯೆಗಳು ಇತ್ಯರ್ಥ ಆಗುವುದಾದರೂ ಹೇಗೆ? ಆಡಳಿತದಲ್ಲಿ ದಕ್ಷತೆ ಇರಲು ಸಾಧ್ಯವೇ ಇಲ್ಲ. ಖಾಲಿ ಹುದ್ದೆ ಭರ್ತಿ ಮಾಡುವುದಾಗಿ ಬಾಯಿಯಲ್ಲಿ ಹೇಳಲಾಗುತ್ತಿದೆಯಾದರೂ ನೇಮಕಗೊಳಿಸದೇ ವಂಚಿಸಲಾಗುತ್ತಿದೆ. ವಾಸ್ತವೆಂದರೆ ಉದಾರೀಕರಣದ ನೀತಿಗಳನ್ನು ಅನುಸರಿಸುತ್ತಿರುವ ಕೇಂದ್ರ ಮತ್ತು ಈ ರಾಜ್ಯ ಸರಕಾರಗಳು ವಿಶ್ವ ಹಣಕಾಸು ಸಂಸ್ಥೆಗಳ ನಿರ್ದೇಶನದಂತೆ ನೇಮಕಾತಿಗೆ ನಿರ್ಭಂದವನ್ನು ವಿಧಿಸಿರುವುದಲ್ಲದೇ ಆರ್ಥಿಕ ನಿರ್ವಹಣೆ ನಿರ್ಭಂಧದ ಕಾಯ್ದೆ/ ಹಣಕಾಸು ನಿರ್ಭಂ ಧ, ನಿರ್ವಹಣಾ ಕಾಯ್ದೆಯನ್ನು ಅಂಗೀಕರಿಸಿದೆ. ಅದರಂತೆ ಪ್ರತಿ ವರುಷವೂ ಕನಿಷ್ಠ ಶೇ.10–35 ರಷ್ಟು ಹುದ್ದೆಗಳನ್ನು ಕಡಿತಗೊಳಿಸಬೇಕಿದೆ. ಮೇಲಾಗಿ ಖಾಲಿಯಿರುವ ಹುದ್ದೆಗಳು ಇಂತಿಷ್ಟು ವರ್ಷದೊಳಗೆ ತುಂಬದೇ ಹೋದರೆ ಆ ಹುದ್ದೆಗಳೇ ಇಲಾಖೆಗಳೇ ನಿರ್ಮೂಲನೆಗೊಳ್ಳುತ್ತವೆ. ಹೀಗಾಗಿ ಆಗುವ ಅನಾಹುತದ ತೀವ್ರತೆಯನ್ನು ಕಡಿಮೆ ಮಾಡಿ ಜನರನ್ನು ಸಮಾಧಾನ ಪಡಿಸಲು ಗುತ್ತಿಗೆ ಆಧಾರದಲ್ಲಿ ನೇಮಿಸಿ ನಿರುದ್ಯೋಗಿಗಳನ್ನು ಶೋಷಿಸಲಾಗುತ್ತಿದೆ. ಈಗ ಆಗುತ್ತಿರುವುದು ಅದೇ.

ಕಾರ್ಷಿಕ ರಂಗದತ್ತ ನಿರ್ಲಕ್ಷ

ಅದೆ ರೀತಿ ಕಾಂಗ್ರೆಸ್ ಸರಕಾರ ಕಾರ್ಷಿಕ ಬಿಕ್ಕಟ್ಟನ್ನು ಪರಿಹರಿಸಲು ಕಿಂಚಿತ್ತೂ ಯತ್ನಿಸಲಿಲ್ಲ. ರೈತರ ಆತ್ಮಹತ್ಯೆಗಳು ನಿಲ್ಲದೇ ಹೆಚ್ಚುತ್ತಲೇ ಸಾಗಿದೆ. ಗ್ರಾಮೀಣ ಜನತೆ ದಿವಾಳಿ ಸ್ಥಿತಿ ಮತ್ತು ತೀವ್ರಗೊಂಡ ಬರದ ಭೀಕರತೆಯಿಂದಾಗಿಯಲ್ಲಿ ಉದ್ಯೋಗ ಅರಸಿ ಗುಳೆ ಹೋಗುತ್ತಿದ್ದಾರೆ. ಆದರೆ ಉದ್ಯೋಗ ಖಾತ್ರಿ ಯೋಜನೆಯನ್ನು ಜಾರಿಗೊಳಿಸಿ ರಕ್ಷಿಸಲು ಕಿಂಚಿತ್ತೂ ಮತುವರ್ಜಿ, ಕಾಳಜಿಗಳೇ ಇಲ್ಲ. ಇನ್ನು ತಾನೇ ಬಾರೀ ಅಬ್ಬರದಲ್ಲಿ ಮಾತನಾಡಿದ್ದ ಬಗರ್ ಹುಕುಂ ರೈತರಿಗೆ ಭೂಮಿ ಖಾತ್ರಿಗೊಳಿಸಲು ಕಿರು ಹೆಜ್ಜೆಯೂ ಇಲ್ಲ. ಅರಣ್ಯವಾಸಿಗಳಿಗೆ, ಆದಿವಾಸಿಗಳಿಗೆ ಅವರ ಮೂಲ ಹಕ್ಕಾದ ಭೂಮಿಯಾಗಲೀ, ಸಮುದಾಯದ ಹಕ್ಕಾಗಲೀ ಕೊಡುತ್ತಲೇ ಇಲ್ಲ. ಕೃಷಿಕೂಲಿಕಾರರ ದನಿಗೆ ಕಿವಿಗೊಡುತ್ತಿಲ್ಲ. ಭೀಕರ ಬರದ ಬಾಧೆಗಳನ್ನು ನಿವಾರಿಸಲು ಪರಿಹಾರ ಕ್ರಮ ಕೈಗೊಳ್ಳುವುದರತ್ತ ಪ್ರಾಮಾಣಿಕ ಕ್ರಮಗಳಿಲ್ಲ. ಬರ ಎಂದರೆ ಈ ಸರಕಾರಕ್ಕೂ ಇಷ್ಟ!

ಈ ಒಟ್ಟು ಅವಧಿಯಲ್ಲಿ ಬಹಳ ಪ್ರಮುಖ ಬೆಳವಣಿಗೆಯೆಂದರೆ ಕಾರ್ಮಿಕರಲ್ಲಿ ಬೆಳೆಯುತ್ತಿರುವ ತೀವ್ರ ಅಶಾಂತಿ, ಅತೃಪ್ತಿ. ಇತ್ತೀಚೆಗಿನ ಬೆಂಗಳೂರಿನ ಗಾರ್ಮೆಂಟ್ ಕೆಲಸಗಾರರ ಉಗ್ರ ಪ್ರತಿಭಟನೆ ಕೇಂದ್ರ ಮತ್ತು ರಾಜ್ಯ ಸರಕಾರಗಳ ನೀತಿಗಳ ವಿರುದ್ಧ ಎಂಬುದನ್ನು ಅವರು ಅರಿಯಬೇಕು. ಅದೇ ರೀತಿ ಅಂಗನವಾಡಿ ಬಿಸಿಯೂಟದಂತಹ ಸ್ಕೀಮ್ ನೌಕರರು–ಕೆಲಸಗಾರರು, ಪಂಚಾಯತ್, ನೌಕರರು, ಬೀಡಿ, ತೋಟ ಕಾರ್ಮಿಕರು, ಹಾಸ್ಟೆಲ್ ನೌಕರರು ಹೀಗೆ ಅಸಂಖ್ಯಾತ ಅಸಂಘಟಿತರ ಸಂಕಟಗಳಿಗೆ, ಮೂಲ ಬೇಡಿಕೆಗಳ ಈಡೇರಿಕೆಗೆ ಗಮನವನ್ನೇ ಕೊಡದೇ ನಿರ್ಲಕ್ಷಿಸುತ್ತಿದೆ. ಇದೂ ಸಹ ಬಂಡವಾಳ ಸ್ನೇಹಿ ಸರಕಾರವಲ್ಲವೇ?

ಹೀಗೆ ಸಿದ್ಧರಾಮಯ್ಯನವರ ಸರಕಾರ ಕೇಂದ್ರದ ಮೋದಿ ಸರಕಾರದೊಂದಿಗೆ ಸಂಘರ್ಷ ನಡೆಸಿದ್ದೇವೆ, ಭಿನ್ನ ಎಂದು ಹೇಳಿಕೊಂಡರೂ ಅದರ ಆರ್ಥಿಕ ಮತ್ತು ಆಡಳಿತಾತ್ಮಕ ನೀತಿಗಳಲ್ಲಿ ಯಾವುದೇ ಬಿನ್ನತೆಯನ್ನು ಹೊಂದಿಲ್ಲ. ಇವರಿಬ್ಬರದ್ದೂ ಒಂದೇ ನೀತಿಗಳು.

ಗುಂಪುಗಳ ಕಿತ್ತಾಟ

ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ಆರಂಭದಿಂದಲೂ ಆಂತರಿಕ ಭಿನ್ನಾಭಿಪ್ರಾಯ, ಗುಂಪುಗಾರಿಕೆಯಿಂದ ಕೂಡಿದೆ. ಮೂಲ ಕಾಂಗ್ರೆಸ್ಸಿಗರು ಮತ್ತು ವಲಸಿಗ (ಸಿದ್ಧರಾಮಯ್ಯ ಮುಂತಾಂದವರು) ಕಾಂಗ್ರೆಸ್ಸಿಗರೆಂಬ ವಿಭಜನೆಯೂ ನಡೆದು ಅದು ಕಾಲಕ್ರಮೇಣ ಬಹಿರಂಗ ಕಿತ್ತಾಟಗಳಿಗೂ ಎಡೆ ಮಾಡಿತು. ಮೂರಾಗಿ ಬೆಳೆದ ಈ ಕೆಲ ಪ್ರಬಲ ಗುಂಪುಗಳು ಹೈಕಮಾಂಡ್‌ನ ನೆರವಿನಿಂದ ಸಿದ್ಧರಾಮಯ್ಯನವರನ್ನು ನಿಯಂತ್ರಿಸುವ, ಆ ಮೂಲಕ ರಾಜಕೀಯವಾಗಿ, ಪಕ್ಷದೊಳಗಿನ ಬಲಹೀನಗೊಳಿಸುವ ಮೂಲಕವೂ ಅತಂತ್ರ ಸ್ಥಿತಿಯನ್ನು ಸೃಷ್ಟಿಸಿತು. ಈಗಲೂ ಮೂರು ವರುಷಗಳು ತುಂಬಿದ ಸಂದರ್ಭದಲ್ಲಿ ಸಿದ್ಧರಾಮಯ್ಯನವರನ್ನು ಬದಲಾಯಿಸಿ ಬೇರೆ ಮುಖ್ಯಮಂತ್ರಿಯನ್ನಾಗಿಸಲು ಹೊರ–ಒಳಗೆ ರಾಜಕೀಯ ವರಸೆಗಳು ನಡೆದಿವೆ. ಅದರ ಒಂದು ಭಾಗ ಗಂಭೀರತೆಯೇ ಇಲ್ಲದೇ ದಲಿತ ಮುಖ್ಯಮಂತ್ರಿ ಮಾಡುವ ಚರ್ಚೆಗೆ ಚಾಲನೆ. ಇವೆಲ್ಲವುಗಳ ಪರಿಣಾಮ ಅಸಮರ್ಥ ಸಚಿವರನ್ನು ಕೈಬಿಡಲಾಗಲೀ, ಹೊಸಬರನ್ನು ಒಳಗೊಂಡು ಪುನರ್ ರಚನೆ ಮಾಡಲಾಗಲೀ ಸಾಧ್ಯವಾಗದೇ ಕಾಲ ತಳ್ಳಲಾಗುತ್ತಿದೆ. ಹೀಗಾಗಿ ಅಧಿಕಾರಿಗಳ ಸಭೆಯಲ್ಲಿ ಪರಿಣಾಮಕಾರೀ ಆಡಳಿತದ ಬಗ್ಗೆ ಒಣ ಭಾಷಣವೇ

ಪುಟ 6 ಕ್ಕೆ



ನಾಳಿನ ಕಾರ್ಯಕ್ರಮಗಳು

ಜೂನ್ 06 – ಎಡಪಕ್ಷಗಳ
ರಾಜ್ಯ ಮಟ್ಟದ ಪ್ರತಿಭಟನಾ ಸಭೆ, ಬೆಂಗಳೂರು.
ಸಿಐಟಿಯು ಜಿಲ್ಲಾ ಸಮ್ಮೇಳನಗಳು

ಮೇ 15–16	: ಉಡುಪಿ ಜಿಲ್ಲೆ
ಜೂನ್ 5, 6, 7	: ದಕ್ಷಿಣ ಕನ್ನಡ ಜಿಲ್ಲೆ
ಜೂನ್ 11–12	: ಬೆಂಗಳೂರು ಉತ್ತರ ಜಿಲ್ಲೆ
ಜೂನ್ 19	: ಧಾರವಾಡ ಜಿಲ್ಲೆ
ಜೂನ್ 24–25	: ಬೆಂಗಳೂರು ದಕ್ಷಿಣ ಜಿಲ್ಲೆ
ಜೂನ್ 26–27	: ಬಳ್ಳಾರಿ ಜಿಲ್ಲೆ
ಜುಲೈ 8–9	: ಚಿಕ್ಕಬಳ್ಳಾಪುರ ಜಿಲ್ಲೆ
ಜುಲೈ 16–17	: ಮೈಸೂರು ಜಿಲ್ಲೆ
ಜುಲೈ 21–22	: ದಾವಣಗೆರೆ ಜಿಲ್ಲೆ
ಜುಲೈ 29–30	: ಕಲಬುರಗಿ ಜಿಲ್ಲೆ
ಜುಲೈ 30	: ಯಾದಗಿರಿ ಜಿಲ್ಲೆ
ಜುಲೈ 31– ಆಗಸ್ಟ್ 01:	ಕೋಲಾರ ಜಿಲ್ಲೆ
ಆಗಸ್ಟ್ 6–7	: ತುಮಕೂರು ಜಿಲ್ಲೆ
ಆಗಸ್ಟ್ 6–7	: ಹಾಸನ ಜಿಲ್ಲೆ

ನಿವೇಶನ ಮಂಜೂರಾತಿಗೆ ಆಗ್ರಹಿಸಿ ಉಡುಪಿಯಲ್ಲಿ ಪ್ರತಿಭಟನೆ

ವಾಸುದೇವ ಉಚ್ಚಿಲ

ಉಡುಪಿ ನಗರಸಭಾ ವ್ಯಾಪ್ತಿಯ ನಿವೇಶನ ರಹಿತರಿಗೆ ಪುತ್ತೂರು ಗ್ರಾಮದಲ್ಲಿ 1.91 ಎಕ್ರೆ ಜಮೀನನ್ನು ಕುಂದಾಪುರ ಉಪವಿಭಾಗಾಧಿಕಾರಿಗಳು 2013 ರಲ್ಲೇ ಕಾಯ್ದಿರಿಸಿ ನಿವೇಶನ ರಹಿತರಿಗೆ 2 ವರ್ಷದೊಳಗೆ ಹಂಚಬೇಕು ಎಂಬ ಷರತ್ತು ಹಾಕಿದ್ದರು. ಆದರೆ ವರ್ಷ 2 ಕಳೆದರೂ ನಿವೇಶನ ರಹಿತರ ಅರ್ಹ ಫಲಾನುಭವಿಗಳಿಗೆ ಉಡುಪಿ ನಗರಸಭೆ ನಿವೇಶನ ಹಂಚಿಕೆ ಮಾಡದೆ ಸುಮ್ಮನಾಗಿದೆ. ಪುತ್ತೂರು ಗ್ರಾಮದ 1.91 ಎಕ್ರೆ ಅಲ್ಲದೆ ಶಿವಳ್ಳಿ ಗ್ರಾಮದ 1.05 ಎಕ್ರೆ ಭೂಮಿ ಮಂಜೂರಾಗಿದೆ ಎಂದು ಪೌರಾಯುಕ್ತರು ಹೇಳುತ್ತಿದ್ದರೂ, ಭೂಮಿ ಹಸ್ತಾಂತರದ ಪ್ರಕ್ರಿಯೆಯಲ್ಲಿದೆ ಎಂದು ಹೇಳಿ ವಿಳಂಬ ಮಾಡುತ್ತಿದ್ದಾರೆ.

ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ಉಡುಪಿ ತಾಲೂಕು ಸಮಿತಿಯ ನೇತೃತ್ವದಲ್ಲಿ ಉಡುಪಿ ನಗರದ ನಿವೇಶನ ರಹಿತರು ಮೇ 05ರಂದು ಉಡುಪಿ ನಗರ ಸಭೆಯ ಎದುರು ಪ್ರತಿಭಟನೆ ನಡೆಸಿದರು. ನಗರ ಸಭೆಯ ಮೂಲಕ 2461 ನಿವೇಶನ ರಹಿತರ ಅರ್ಜಿ ಉಡುಪಿ ತಾಶೀಲ್ದಾರರಿಗೆ ಕಳುಹಿಸಿ ಒಂದು ವರ್ಷವಾದರೂ ಪ್ರಥಮ ಹಂತದ 457 ಅರ್ಜಿಗಳ ಎ ಪಟ್ಟಿ ಸಿದ್ಧವಾಗಿದೆ. ಉಳಿದ ನಿವೇಶನ ರಹಿತರ ಅಂತಿಮ ಪಟ್ಟಿ ಇನ್ನೂ ಸಿದ್ಧವಾಗಿಲ್ಲದಿರುವ ಬಗ್ಗೆ ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು. ಅಲ್ಲದೆ ನಗರಸಭಾ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಅತಿಕ್ರಮಿಸಿಕೊಂಡಿರುವ ಸರ್ಕಾರಿ ಭೂಮಿಯನ್ನು ಕೂಡಲೇ ತೆರವುಗೊಳಿಸಿ ನಿವೇಶನ ರಹಿತ ಬಡಜನರಿಗೆ ಹಂಚಬೇಕು ಎಂದು ಆಗ್ರಹಿಸಿದರು.

ಕೃಷಿಕೂಲಿಕಾರರ ಸಂಘದ ಉಡುಪಿ ತಾಲೂಕು ಸಮಿತಿ ಅಧ್ಯಕ್ಷ ಎಚ್.ವಿಠಲ ಪೂಜಾರಿ, ರಾಜ್ಯ ಸಮಿತಿ ಸದಸ್ಯ ಕವಿರಾಜ್, ಮುಖಂಡರಾದ ಉಮೇಶ್ ಕುಂದರ್, ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ಮುಖಂಡರಾದ ಕೆ.ಶಂಕರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಕೊಟ್ಟಾರದ ಹಿರಿಯ ಕಮ್ಯೂನಿಸ್ಟ್ ಡಿ.ಸುಂದರ್ ನಿಧನ

ಡಿ.ಸುಂದರ ಮಂಗಳೂರು ಕೊಟ್ಟಾರದಲ್ಲಿ ಪಕ್ಷದ ಸಂಘಟನೆಯಲ್ಲಿ ಸಕ್ರಿಯರಾಗಿದ್ದ ಸದಸ್ಯ. ಕಳೆದ ಎಪ್ರಿಲ್ 11 ರಂದು ಕೊಟ್ಟಾರದ ಪಕ್ಷದ ಕಚೇರಿಗೆ ಬಂದು ಸಂಗಾತಿಗಳೊಡನೆ ಮಾತನಾಡಿ ಮನೆಯ ದಾರಿ ಸಾಗುತ್ತಿರುವಾಗ ಬೈಕ್ ಡಿಕ್ಕಿ ಹೊಡೆದು ತೀವ್ರ ಗಾಯಗೊಂಡು ಸ್ಥಳದಲ್ಲೇ ಮೃತರಾಗಿದ್ದಾರೆ. ಅವರಿಗೆ 75 ವರ್ಷ ವಯಸ್ಸಾಗಿತ್ತು.

ಅವಿಭಜಿತ ಕಮ್ಯೂನಿಸ್ಟ್ ಪಕ್ಷದಲ್ಲಿ ಅವರು ಸದಸ್ಯರಾಗಿದ್ದರು. ಬಳಿಕ ಸಿಪಿಐ(ಎಂ)ನಲ್ಲೇ ಮುಂದುವರಿದರು. ಆ ವೇಳೆಗೆ ಅವರಿಗೆ ಕೇಂದ್ರ ಸರಕಾರದ ಇಲಾಖೆಯಲ್ಲಿ ನೌಕರರಾದುದರಿಂದ ಪಕ್ಷದ ನಿತ್ಯ ಚಟುವಟಿಕೆಗಳಿಂದ ದೂರ ಉಳಿದರು. ಆದರೂ ಪಕ್ಷದ ಸಾರ್ವಜನಿಕ ಸಭೆಗಳಲ್ಲಿ ಕೇಳುಗರಾಗಿ ಮಂಗಳೂರಲ್ಲಿ ಭಾಗವಹಿಸುತ್ತಿದ್ದರು. 2000ನೇ ಇಸವಿಯಲ್ಲಿ ಸರ್ಕಾರಿ ಸೇವೆಯಿಂದ ನಿವೃತ್ತರಾದ ಮೇಲೆ ಪಕ್ಷದ ಸದಸ್ಯತ್ವ ಪಡೆದುಕೊಂಡುದಲ್ಲದೆ, ಪಕ್ಷದಲ್ಲೂ ಸಾಮೂಹಿಕ ಸಂಘಟನೆಗಳಲ್ಲೂ ಸಕ್ರಿಯರಾಗಿದ್ದರು.

ದೇರೆಬೈಲ್ ಸಂಖೇಶ ಶಾಖೆಯಿಂದ ಎಪ್ರಿಲ್ 24 ರಂದು ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ಬ್ಯಾಂಕ್ ನೌಕರರ ಸಂಘದ ಮಾಜಿ ಮುಂದಾಳು ಕೆ.ಸುಕುಮಾರ್, ಮಂಗಳೂರು ನಗರ ಉತ್ತರ ಸಿಪಿಐ(ಎಂ) ಸಮಿತಿ ಕಾರ್ಯದರ್ಶಿ ಕೃಷ್ಣಪ್ಪ ಕೊಂಚಾಡಿ ಮತ್ತಿತರರು ಭಾಗವಹಿಸಿದ್ದರು.

ಡೊನೇಷನ್ ಹಾವಳಿ ವಿರುದ್ಧ ಪ್ರತಿಭಟನೆ

2016–17 ನೇ ಸಾಲಿನಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿನ ಪ್ರವೇಶಾತಿಯ ದಿನಾಂಕವನ್ನು ರಾಜ್ಯ ಸರಕಾರ ಇನ್ನೂ ನಿಗದಿ ಪಡಿಸಿಲ್ಲ. ಹೀಗಿರುವಾಗಲೇ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪ್ರಕ್ರಿಯೆಗಳು ನಡೆಯುತ್ತಿವೆ. ಖಾಸಗಿ ಶಿಕ್ಷಣ ಸಂಸ್ಥೆಗಳು ಸರಕಾರದ ನೀತಿ–ನಿಯಮಗಳನ್ನು ಮೀರಿ ಡೊನೇಷನ್ ವಸೂಲಿಯಲ್ಲಿ ತೊಡಗಿವೆ ಎಂದು ಬೆಂಗಳೂರಿನ ರಾಜಾಜಿನಗರ ಕ್ಷೇತ್ರ ಶಿಕ್ಷಣಾಧಿಕಾರಿ ಕಛೇರಿ ಎದುರು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.) ನೇತೃತ್ವದಲ್ಲಿ ರಾಜ್ಯದ ವಿವಿದೆಡೆ ಪ್ರತಿಭಟನೆ ನಡೆದಿದೆ.

ಸೀಟುಗಳ ಲಭ್ಯತೆ, ಸಂಗ್ರಹಿಸಬೇಕಾದ ಶುಲ್ಕ, ಪಾಲಿಸಬೇಕಾದ ಮೀಸಲಾತಿ, ನಿಯಮಗಳ ಕುರಿತು ಶಿಕ್ಷಣ ಇಲಾಖೆ ಅನೇಕ ಸುತ್ತೋಲೆ ಹೊರಡಿಸಿದರೂ ಖಾಸಗಿ ಶಾಲೆಗಳು ಎಗ್ಗಿಲ್ಲದೆ ವಸೂಲಿಯಲ್ಲಿ ತೊಡಗುವ ಮೂಲಕ ನಿಯಮಗಳನ್ನು ಉಲ್ಲಂಘಿಸಿ ಆದೇಶಗಳಿಗೆ ಬೆಲೆ ನೀಡದೆ ಸರ್ವಾಧಿಕಾರಿ ಧೋರಣೆ ಅನುಸರಿಸುತ್ತಿವೆ.

1983 ರ ಕರ್ನಾಟಕ ಶಿಕ್ಷಣ ಕಾಯಿದೆ ಅನ್ವಯ ಮತ್ತು 1995 ರ ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಕ್ಲಾಸಿಫಿಕೇಶನ್, ರೆಗ್ಯುಲೇಶನ್ ಮತ್ತು ಪ್ರಿಸ್ಕಿಪೇಶನ್ ಕರಿಕ್ಯುಲಂ) ರ ಕಾಯಿದೆಯ ನಿಯಮಗಳು 28.10.1999 ರಂದು ಜಾರಿಗೆ ಬರುವ ಮೂಲಕ ಶಿಕ್ಷಣದ ವ್ಯಾಪಾರೀಕರಣಕ್ಕೆ ಕಡಿವಾಣ ಹಾಕಲು ಉದ್ದೇಶಿಸಲಾಗಿತ್ತು. ಶಿಕ್ಷಣ ಕಾಯಿದೆ ಅನ್ವಯ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿ ಪ್ರತಿನಿಧಿಗಳು, ಪೋಷಕರು, ಶಿಕ್ಷಣ ತಜ್ಞರನ್ನೊಳಗೊಂಡಂತೆ ಸಮಿತಿ ರಚಿಸಿ ಅಲ್ಲಿ ಈ ಕುರಿತು ಚರ್ಚಿಸಬೇಕು. ಆದರೆ ಅದು ಎಲ್ಲಿಯೂ ಜಾರಿಯಾಗುತ್ತಿಲ್ಲ ಎಂದು ಪ್ರತಿಭಟನೆ ಮೂಲಕ ಆಗ್ರಹಿಸಲಾಗಿದೆ.

ಡೊನೇಷನ್ (ವಂತಿಗೆ) ವಸೂಲಿಯನ್ನು ನಿಯಂತ್ರಿಸಲು ಜಿಲ್ಲಾ ಶಿಕ್ಷಣ ರೆಗ್ಯುಲೇಟಿಂಗ್ ಪ್ರಾಧಿಕಾರವನ್ನು ರಚಿಸಬೇಕೆಂದು ನಿಯಮವಿದ್ದರೂ ಅದು ಕಾರ್ಯಗತವಾಗಿಲ್ಲ. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿರುವ ಈ ಪ್ರಾಧಿಕಾರಕ್ಕೆ ಡಿ.ಡಿ.ಪಿ.ಐ, ಜಿಲ್ಲಾ ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ, ಡಿ.ಡಿ.ಪಿ.ಯು. ಜಿಲ್ಲಾ ಮುಖ್ಯ ಇಂಜಿನೀಯರ್, ಸೇರಿದಂತೆ ಪೋಷಕರು, ಶಿಕ್ಷಣ ಆಸಕ್ತರು, ವಿದ್ಯಾರ್ಥಿ ಪ್ರತಿನಿಧಿಗಳು ಸದಸ್ಯರುಗಳಾಗಿರುವರು. ಲಕ್ಷ ರೂ. ವರೆಗೆ ಡೊನೇಷನ್ ವಸೂಲಿ ಮಾಡುತ್ತಿರುವ ಶಿಕ್ಷಣ ಸಂಸ್ಥೆಗಳ ಮೇಲೆ ಸರ್ಕಾರ ನಿಯಂತ್ರಣಕ್ಕೆ ಮುಂದಾಗುವುದರ ಬದಲು, ಪರೋಕ್ಷವಾಗಿ ಶಿಕ್ಷಣ ವ್ಯಾಪಾರೀಕರಣಕ್ಕೆ ಮುಂದಾಗುತ್ತಿದೆ.

ಆರ್.ಟಿ.ಇ ಕಾಯ್ದೆಯನ್ನು ಸಮರ್ಪಕವಾಗಿ ಜಾರಿ ಮಾಡದೆ ವಿದ್ಯಾರ್ಥಿ – ಪೋಷಕರೊಡನೆ ಚೆಲ್ಲಾಟವಾಡಲಾಗುತ್ತಿದೆ. ಕಾಯ್ದೆಯ ಜಾರಿಗೆ ತಡ ಮಾಡಿದ್ದರ ಪರಿಣಾಮ ಸಮರ್ಪಕವಾಗಿ ಜಾರಿ ಮಾಡಲಾಗುತ್ತಿಲ್ಲ. ಸರ್ವರ್ ದೋಷ, ಮತ್ತು ಲೋಡಶೆಡ್ಡಿಂಗಗಳ ಕಾರಣದಿಂದಾಗಿ ದಾಖಲೆಗಳನ್ನು ಸರಿಯಾಗಿ ಅಪ್ಪಲೋಡ್ ಮಾಡಲು ಪಾಲಕರಿಗೆ ಸಾಧ್ಯವಾಗಿಲ್ಲ. ಕಳೆದ ವರ್ಷ ಆರ್.ಟಿ.ಇ ಪ್ರವೇಶ ಪಡೆದ ಮಕ್ಕಳಿಗೆ ಖಾಸಗಿ ಶಿಕ್ಷಣ ಸಂಸ್ಥೆಗಳು ಹಣ ಕೇಳುತ್ತಿವೆ. ಕೊಡದೆ ಹೋದಲ್ಲಿ ಫಲಿತಾಂಶವನ್ನು ತಡೆ ಹಿಡಿಯುವದಗಿ ಹೆದರಿಸುತ್ತಿವೆ. ಕೂಡಲೆ ಅಂತಹ ಶಿಕ್ಷಣ ಸಂಸ್ಥೆಗಳ ಮೇಲೆ ಕಾನೂನು ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು.

ಬೆಂಗಳೂರು

ಮೇ 5ರಂದು ಬೆಂಗಳೂರಿನ ರಾಜಾಜಿನಗರದಲ್ಲಿ ನಾಗರಿಕ ಹೋರಾಟ ಸಮಿತಿ ಮತ್ತು ಎಸ್.ಎಫ್.ಐ. ನೇತೃತ್ವದಲ್ಲಿ ಬಿಇಓ ಕಛೇರಿಯ ಮುಂದೆ ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ಎಸ್.ಎಫ್.ಐ ರಾಜ್ಯ ಕಾರ್ಯದರ್ಶಿ ಗುರುರಾಜ ದೇಸಾಯಿ, ಜೆ.ಎಂ.ಎಸ್ ಸಂಘಟನೆಯ ಕೆ.ಎಸ್.ಶಾರದ, ಆಟೋ ರಿಕ್ಷಾ ಚಾಲಕರ ಸಂಘದ ಮುಖಂಡರಾದ ರುದ್ರಮೂರ್ತಿ, ಗಂಗರಾಜು, ಸಿ.ಎನ್.ಶ್ರೀನಿವಾಸ್, ನವೀನ್ ಶೆಣೈ, ನರಸಿಂಹಮೂರ್ತಿ, ಕಾರ್ಮಿಕ ಮುಖಂಡರಾದ ಗೋಪಾಲಕೃಷ್ಣ ಅರಳಹಳ್ಳಿ, ಡಿ.ಚಂದ್ರಶೇಖರ, ಕೆ.ವೀರಮಣಿ, ಎನ್.ಪಾರ್ಥಿಬನ್ ಮುಂತಾದವರು ಭಾಗವಹಿಸಿದ್ದರು.

ದಕ್ಷಿಣ ಕನ್ನಡ

ಮೇ 7ರಂದು ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಕಛೇರಿ ಮುಂಭಾಗ ಎಸ್.ಎಫ್.ಐ. ನೇತೃತ್ವದಲ್ಲಿ ಧರಣಿ ನಡೆಸಲಾಯಿತು. ಧರಣಿಯಲ್ಲಿ ಜಿಲ್ಲಾ ಕಾರ್ಯದರ್ಶಿ ಚರಣ್ ಶೆಟ್ಟಿ, ಮುಖಂಡರಾದ ತುಳಸಿದಾಸ್, ಮಾಧುರಿ ಬೋಳಾರ್, ಅಶ್ವಿದ್ ಉಳ್ಳಾಲ್, ಹಂಝು ಕಿನ್ಯಾ, ಮಯೂರಿ, ಚಸ್ಮಿತ, ಅಭಿಷೇಕ್ ಮತ್ತು ಡಿವೈಎಫ್ಐ ಮುಖಂಡರಾದ ಬಿ.ಕೆ.ಇಮ್ತಿಯಾಜ್ ಉಪಸ್ಥಿತರಿದ್ದರು.

ಹಾವೇರಿ

ಹಾವೇರಿಯಲ್ಲಿ ನಡೆದ ಪ್ರತಿಭಟನೆಯಲ್ಲಿ ಎಸ್ಎಫ್ಐ ರಾಜ್ಯ ಉಪಾಧ್ಯಕ್ಷರಾದ ಬಸವರಾಜ ಪೂಜಾರ್, ಜಿಲ್ಲಾ ಅಧ್ಯಕ್ಷರಾದ ರೇಣುಕಾ ಕಹಾರ, ಕಾರ್ಯದರ್ಶಿ ಸುಭಾಸ ಎಂ., ಮುಖಂಡರಾದ ಬಸನಗೌಡ ಭರಮಗೌಡ್ರ, ಆಂಜನೇಯ ಸಮತಂಗಿ, ರಾಕೇಶ, ಆದಿತ್ಯ ಎ ಕೆ, ಮಲ್ಲನಗೌಡ ಪಾಟೀಲ, ನಾಗರಾಜ ಬಿದರಗಟ್ಟಿ, ಸಚೀನ್ ಜಿನ್ನೂರ, ಮಾಲತೇಶ ಕರೆಗೊಂಡ, ಹಾಲೇಶ ಗೊಲ್ಲರ, ಶಿವರಾಜ ಕೋರಿ, ಶರಣಬಸಪ್ಪ ಜಗಟಗೇರಿ, ಕಾಂತೇಶ ಈಳಗೇರ, ಪ್ರಶಾಂತ ಅಂಗಡಿ, ಕಿರಣ ಶಾಡಗುಪ್ಪಿ, ಮಲ್ಲಿಕ್‌ಸಾಬ ಸುಂಕದ, ಫಕ್ಕಿರೇಶ ಊಪಳೆ, ನಾಗರಾಜ, ಅಶೋಕ ಪೂಜಾರ ಹಾಗೂ ಕೀರ್ತಿ ಐಟಿಐ ಹಾಗೂ ವಿವೇಕಾನಂದ ಐಟಿಐ ಕಾಲೇಜಿನ ವಿದ್ಯಾರ್ಥಿಗಳು ಪ್ರತಿಭಟನೆಯಲ್ಲಿ ಭಾಗವಹಸಿದ್ದರು.

ಸಾರ್ವಜನಿಕ ಶಿಕ್ಷಣ ಇಲಾಖೆಯ ಜಿಲ್ಲಾ ಉಪನಿರ್ದೇಶಕರಾದ ಮಾನ್ಯ ಶಿವನಗೌಡ ಪಾಟೀಲರ ಮೂಲಕ ಮಾನ್ಯ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು. ಜಿಲ್ಲಾಧಿಕಾರಿಗಳೊಂದಿಗೆ ಮಾತನಾಡಿ ಶೀಘ್ರದಲ್ಲಿಯೆ ಸಭೆ ಕರೆಯುವುದಾಗಿ ತಿಳಿಸಿದರು.



ಫೇಸ್ ಬುಕ್‌ನಲ್ಲಿ

"ಯಾವುದೇ ಭ್ರಾಹ್ಮಣ ನಿಮ್ಮ ಮನೆಯ ಮುಂದೆ ಬಂದು ನಿಮ್ಮಿಂದ ಸವಲತ್ತು ಕೇಳಿದ್ರಾ? ನೀವಾಗಿಯೇ ಅವರ ಬಳಿ ಬರುತ್ತೀರಲ್ಲವೇ?" ಎಂದು ಫೇಸ್ಬುಕ್ ನ ಸ್ನೇಹಿತರೊಬ್ಬರು ಬೇಸರದಿಂದ ಕೇಳುತ್ತಾರೆ. ಅದಕ್ಕೆ ನನ್ನ ಪ್ರತಿಕ್ರಿಯೆ: >ಮನೆಯ ಮುಂದೆ ಬರುವುದಿಲ್ಲ. ಮನೆಯೊಳಕ್ಕೇ ಬರುತ್ತಾರೆ, ಟಿವಿಗಳ ಪರದೆಯ ಮೇಲೆ ಕಾಣಿಸಿಕೊಳ್ಳುತ್ತಾರೆ. ಅದಕ್ಕಾಗಿ ಟಿವಿಯವರಿಗೆ ಲಕ್ಷಾಂತರ ರೂ ಜಾಹಿರಾತಿನ ಶುಲ್ಕ ಕೊಡುತ್ತಾರೆ. ನಿಮ್ಮ ಕಷ್ಟಗಳಿಗೆ ಪರಿಹಾರ ಕೊಡಿಸುತ್ತೇವೆ ನಮ್ಮ ಬಳಿ ಬನ್ನಿ ಎನ್ನುತ್ತಾರೆ.

– ಸಿ. ಸಿದ್ದಯ್ಯ

ಉತ್ತರಾಖಂಡ: ಪ್ರಜಾಪ್ರಭುತ್ವದ ಪರ ತೀರ್ಪು

ಸರಕಾರ ಉರುಳಿಸುವವರಿಗೆ ಒಂದು ಖಡಕ್ ಪಾಠ

ಉತ್ತರಾಖಂಡದಲ್ಲಿ ಹರೀಶ್ ರಾವತ್ ಸರಕಾರವನ್ನು ಉರುಳಿಸಿ ಪಕ್ಷಾಂತರಿಗಳ ನೆರವಿನಿಂದ ಬಿಜೆಪಿ ನೇತೃತ್ವದ ಸರಕಾರವನ್ನು ಸ್ಥಾಪಿಸುವ ಮೋದಿ ಸರಕಾರದ ನೀಚ ಪ್ರಯತ್ನವನ್ನು ಜಾಗೃತ ನ್ಯಾಯಾಂಗವು ವಿಫಲಗೊಳಿಸಿದೆ. ಮೇ 10ರಂದು ನಡೆದ ಅಭೂತಪೂರ್ವ ನ್ಯಾಯಾಲಯದ ಮೇಲುಸ್ತುವಾರಿಯ ಶಾಸಕರ ಮತದಾನದಲ್ಲಿ ಹರೀಶ್ ರಾವತ್ ವಿಶ್ವಾಸಮತದಲ್ಲಿ ಗೆಲವು ದಾಖಲಿಸಿದ್ದಾರೆ. ಈ ಪ್ರಕ್ರಿಯೆಗಾಗಿ ಸುಪ್ರೀಂಕೋರ್ಟ್ ಅಂದು ಎರಡು ಗಂಟೆ ಕಾಲ ರಾಷ್ಟ್ರಪತಿ ಆಡಳಿತವನ್ನು ಅಮಾನತುಗೊಳಿಸಿತ್ತು.

ಇದಕ್ಕೂ ಮುನ್ನ, ಉತ್ತರಾಖಂಡ ಹೈಕೋರ್ಟ್‌ನ ಮುಖ್ಯ ನ್ಯಾಯಾಧೀಶರು ನೀಡಿದ ಪ್ರಮುಖ ತೀರ್ಪು, ರಾಜ್ಯಪಾಲರ ನಿರ್ದೇಶನದ ಮೇರೆಗೆ ವಿಶ್ವಾಸಮತ ಕೋರಬೇಕಾದ ಕೇವಲ ಒಂದು ದಿನದ ಮುನ್ನ ರಾಷ್ಟ್ರಪತಿ ಆಡಳಿತ ಹೇರಿದ ಕ್ರಮವನ್ನು ಕಟುವಾಗಿ ಟೀಕಿಸಿತ್ತು. ಆ ತೀರ್ಪು ಹೀಗೆ ಹೇಳಿತ್ತು:

"ರಾಷ್ಟ್ರಪತಿ ಆಡಳಿತದ ಹೇರಿಕೆಯನ್ನು ಒಂದು ವಿಶಾಲ ಹಿನ್ನೆಲೆಯಲ್ಲಿ ನೋಡಬೇಕಾಗುತ್ತದೆ. ಭಾರತ ಒಂದು ರಾಜ್ಯಗಳ ಒಕ್ಕೂಟ ಮತ್ತು ಒಂದು ಒಕ್ಕೂಟ ವ್ಯವಸ್ಥೆಯಲ್ಲಿ 'ಂದ್ರ ಮತ್ತು ರಾಜ್ಯಗಳ ಅಧಿಕಾರವು ಆಯಾಯ ಕ್ಷೇತ್ರಗಳಲ್ಲಿ ಸಾರ್ವಭೌಮವಾಗಿರುತ್ತವೆ. ...ತುಂಬಾ ಸ್ಪಷ್ಟವಾಗಿ ಗಮನಿಸಬೇಕಾದ ಸಂಗತಿಯೆಂದರೆ ರಾಷ್ಟ್ರಪತಿ ಆಡಳಿತವನ್ನು ಕಟ್ಟಕಡೆಯ ಅವಕಾಶವನ್ನಾಗಿ ಹಾಗೂ ತುಂಬಾ ಜಾಗರೂಕತೆಯಿಂದ ಬಳಸಬೇಕಾಗುತ್ತದೆ".

ಎಪ್ರಿಲ್ 29ರಂದು ವಿಶ್ವಾಸಮತ ಕೋರಬೇಕು ಎಂದು ಹೈಕೋರ್ಟ್ ತನ್ನ ಆದೇಶದಲ್ಲಿ ತಿಳಿಸಿತ್ತು. ಆದರೆ ಈ ಆದೇಶಕ್ಕೆ ತಡೆ ನೀಡುವಂತೆ ಕೋರಿ ಕೇಂದ್ರ ಸರಕಾರ ಸುಪ್ರೀಂಕೋರ್ಟ್ ಮೊರೆಹೋಗಿತ್ತು. ಅದನ್ನು ಆಲಿಸಿದ ಎರಡು ಸದಸ್ಯರ ಪೀಠವು ವಿಶ್ವಾಸಮತ ಪ್ರಕ್ರಿಯೆಗೆ ತಡೆ ನೀಡಿತ್ತು. ಹೈಕೋರ್ಟ್‌ನ ಲಿಖಿತ ಆದೇಶವನ್ನು ಸಲ್ಲಿಸಿಲ್ಲ, ಅದರ ಆಧಾರದಲ್ಲಿ ಸಂಬಂಧಪಟ್ಟ ಪಕ್ಷಗಳು ಮನವಿ ಮಾಡಬಹುದಾಗಿದೆ ಎಂಬ ಆಧಾರದಲ್ಲಿ ಈ ತಡೆಯನ್ನು ನೀಡಲಾಗಿತ್ತು.

ಅದರ ನಂತರ ವಿಷಯದ ವಿಚಾರಣೆ ನಡೆಸಿದ



ವ್ಯಂಗ್ಯಚಿತ್ರ: ಮಂಜುಲ್ ಡಿ.ಎನ್.ಎ

ಕೋರ್ಟ್, ಈ ಪ್ರಕರಣದಲ್ಲಿ ಕೇಂದ್ರ ಸರಕಾರ ನಡೆದುಕೊಂಡ ರೀತಿ ಮತ್ತು ರಾಷ್ಟ್ರಪತಿ ಆಡಳಿತವನ್ನು ಹೇರಿದ ರೀತಿಯನ್ನು ಕಟುವಾಗಿ ಟೀಕಿಸಿತ್ತು. ವಿವಾದವನ್ನು ಬಗೆಹರಿಸಲು ಸದನದಲ್ಲಿ ಬಲಾಬಲ ಪರೀಕ್ಷೆಗೆ ಸಮ್ಮತಿಯಿದೆಯೇ ಎಂದು ಸುಪ್ರೀಂಕೋರ್ಟ್ ಕೇಂದ್ರ ಸರಕಾರವನ್ನು ಪ್ರಶ್ನಿಸಿತು. ಇಕ್ಕಟ್ಟಿಗೆ ಸಿಲುಕಿದ ಕೇಂದ್ರ ಸರಕಾರ ವಿಶ್ವಾಸಮತಕ್ಕೆ ಸಮ್ಮತಿ ಸೂಚಿಸಿತು. ಅದಾದ ಮೇಲೆ, ಸರ್ವೋನ್ನತ ನ್ಯಾಯಾಲಯವು ಮೇ 10ರಂದು ವಿಶ್ವಾಸಮತ ನಡೆಸಬೇಕೆಂದು ಆದೇಶಿಸಿತು ಹಾಗು ಅದಕ್ಕಾಗಿ ಎರಡು ಗಂಟೆ ಅವಧಿಗೆ ರಾಷ್ಟ್ರಪತಿ ಆಡಳಿತವನ್ನು ಅಮಾನತು ಮಾಡಬೇಕೆಂದು ಸೂಚಿಸಿತು. ಮಾತ್ರವಲ್ಲದೆ, ಸದನದ ಕಲಾಪಗಳ ಉಸ್ತುವಾರಿಗಾಗಿ ಕೋರ್ಟ್ ಒಬ್ಬ ಅಧಿಕಾರಿಯನ್ನೂ ನೇಮಿಸಿತು. ಇದೊಂದು ಅಭೂತಪೂರ್ವವಾದ

ಚುನಾಯಿತ ಸರಕಾರಗಳನ್ನು ಉರುಳಿಸಲು 356ನೇ ವಿಧಿಯನ್ನು ಭವಿಷ್ಯದಲ್ಲಿ ಬಳಸಲು ಬಯಸುವ ಎಲ್ಲರಿಗೂ ಉತ್ತರಾಖಂಡ ಪ್ರಕರಣ ಒಂದು ಖಡಕ್ ಎಚ್ಚರಿಕೆಯ ಪಾಠವಾಗಿದೆ. ಕಾಂಗ್ರೆಸ್ ಪಕ್ಷ ಕೂಡ ಇದರಿಂದ ಸಂದೇಶವನ್ನು ಪಡೆದಿದೆ ಎಂದು ಆಶಿಸಬೇಕಾಗಿದೆ. ಮೋದಿ ಸರಕಾರದ ಪ್ರತಿಷ್ಠೆಗಂತೂ ಭಾರೀ ಧಕ್ಕೆಯಾಗಿದೆ. ಮೋದಿ–ಷಾ ಜೋಡಿಯ ಪ್ರಜಾಪ್ರಭುತ್ವ–ವಿರೋಧಿ ನಡೆಗಳಿಗೆ ದೊಡ್ಡ ತಡೆ ಉಂಟಾಗಿದೆ. ಆದರೂ ಅವರು ತಮ್ಮ ದಾರಿಯನ್ನು ತಿದ್ದಿ ಕೊಳ್ಳುತ್ತಾರೆ ಎಂದು ಹೆಚ್ಚು ನಿರೀಕ್ಷೆ ಇಟ್ಟು ಕೊಳ್ಳುವುದು ತಪ್ಪಾಗಬಹುದು.



ಪ್ರಕಾಶ ಕಾರಟ್

ಕ್ರಮವಾಗಿತ್ತು.

ಸರಕಾರವನ್ನು ಉರುಳಿಸಲಿಕ್ಕಾಗಿ ಪಕ್ಷಾಂತರ ಗೊಂಡಿದ್ದಕ್ಕಾಗಿ ಸ್ಪೀಕರ್‌ರಿಂದ ಅನರ್ಹಗೊಂಡ ಕಾಂಗ್ರೆಸ್‌ನ ಒಂಬತ್ತು ಶಾಸಕರನ್ನು ಬಳಸಿಕೊಳ್ಳುವ ತಂತ್ರವನ್ನು ಅವರ ಅನರ್ಹತೆಯನ್ನು ಎತ್ತಿಹಿಡಿಯುವ ಮೂಲಕ ಉತ್ತರಾಖಂಡ ಹೈಕೋರ್ಟ್ ವಿಫಲಗೊಳಿಸಿತ್ತು;. ಹೈಕೋರ್ಟ್‌ನ ಈ ತೀರ್ಪಿಗೆ ತಡೆ ನೀಡಲು ಸುಪ್ರೀಂಕೋರ್ಟ್ ನಿರಾಕರಿಸಿತ್ತು.

ನ್ಯಾಯಾಂಗದ ಸಕಾಲಿಕ ಮಧ್ಯಪ್ರವೇಶವು 1994ರ ಬೊಮ್ಮಾಯಿ ತೀರ್ಪನ್ನು ಎತ್ತಿಹಿಡಿದಿದೆ. ಒಂದು ರಾಜ್ಯ ಸರಕಾರವು ಸದನದ ವಿಶ್ವಾಸವನ್ನು ಹೊಂದಿದೆಯೇ ಇಲ್ಲವೇ ಎಂದು ತಿಳಿಯಲು ವಿಧಾನಸಭೆಯಲ್ಲಿ ವಿಶ್ವಾಸಮತ ಕೋರುವುದೇ ಏಕೈಕ ಮಾರ್ಗ ಎಂದು ಆ ತೀರ್ಪು ಹೇಳಿತ್ತು. ಸರಕಾರಕ್ಕೆ ಬಹುಮತ ಇದೆಯೋ ಇಲ್ಲವೋ ಎನ್ನುವುದನ್ನು ರಾಜ್ಯಪಾಲರಾಗಲೀ ಕೇಂದ್ರ ಸರಕಾರವಾಗಲೀ ಇತರ ಯಾವುದೇ ವಿಧಾನವನ್ನು ಬಳಸಿ ತೀರ್ಮಾನಿಸುವಂತಿಲ್ಲ. ಇನ್ನೂ ಬಹುಮತ ಹೊಂದಿರುವ ಸರಕಾರವೊಂದನ್ನು ಮರಳಿ ಸ್ಥಾಪಿಸುವುದನ್ನು ಖಾತರಿಪಡಿಸಲು ಸಂವಿಧಾನದ 356ನೇ ವಿಧಿಯನ್ನು ಮನಬಂದಂತೆ ಬಳಸುವುದನ್ನು ತಡೆಯುವುದು ಕೂಡ ಹೈಕೋರ್ಟ್ ಮತ್ತು ಸುಪ್ರೀಕೋರ್ಟ್ ತೀರ್ಪುಗಳ ಉತ್ತಮ ಅಂಶ.

ಚುನಾಯಿತ ಸರಕಾರಗಳನ್ನು ಉರುಳಿಸಲು 356ನೇ ವಿಧಿಯನ್ನು ಭವಿಷ್ಯದಲ್ಲಿ ಬಳಸಲು ಬಯಸುವ ಎಲ್ಲರಿಗೂ ಉತ್ತರಾಖಂಡ ಪ್ರಕರಣ ಒಂದು ಖಡಕ್ ಎಚ್ಚರಿಕೆಯ ಪಾಠವಾಗಿದೆ. ಕಾಂಗ್ರೆಸ್ ಪಕ್ಷ ಕೂಡ ಇದರಿಂದ ಸಂದೇಶವನ್ನು ಪಡೆದಿದೆ ಎಂದು ಆಶಿಸಬೇಕಾಗಿದೆ. ಹಿಂದೆ ಕಾಂಗ್ರೆಸೇತರ ರಾಜ್ಯ ಸರಕಾರಗಳನ್ನು ಉರುಳಿಸಲು ರಾಷ್ಟ್ರಪತಿ ಆಡಳಿತದ ಪ್ರಕ್ರಿಯೆಯನ್ನು ಅತಿ ಹೆಚ್ಚು ಬಾರಿ ಬಳಸಿದ್ದು ಕೇಂದ್ರಲ್ಲಿನ ಕಾಂಗ್ರೆಸ್ ಸರಕಾರಗಳು ಎನ್ನುವುದನ್ನು ಮರೆಯಬಾರದು. ಅದೇ ಕುತಂತ್ರಕ್ಕೆ ಕಾಂಗ್ರೆಸ್ ಈ ಬಾರಿ ಬಲಿಪಶುವಾಗಿತ್ತು.

ಮೋದಿ ಸರಕಾರಕ್ಕೆ ಸಂಬಂಧಿಸಿ ಹೇಳುವುದಾದರೆ, ಅದರ ಪ್ರತಿಷ್ಠೆಗೆ ಭಾರೀ ಧಕ್ಕೆಯಾಗಿದೆ. ಮೋದಿ–ಷಾ ಜೋಡಿಯ ಪ್ರಜಾಪ್ರಭುತ್ವ–ವಿರೋಧಿ ನಡೆಗಳಿಗೆ ದೊಡ್ಡ ತಡೆ ಉಂಟಾಗಿದೆ. ಏನೇ ಇದ್ದರೂ ಸರಕಾರದ ಹೆಚ್ಚುತ್ತಿರುವ ಸರ್ವಾಧಿಕಾರಿ ಧೋರಣೆಯನ್ನು ಗಮನಿಸಿದರೆ ಅವರು ತಮ್ಮ ದಾರಿಯನ್ನು ತಿದ್ದಿಕೊಳ್ಳುತ್ತಾರೆ ಎಂದು ಹೆಚ್ಚು ನಿರೀಕ್ಷೆ ಇಟ್ಟುಕೊಳ್ಳುವುದು ತಪ್ಪಾಗಬಹುದು. ನ್ಯಾಯಾಂಗದ ಮೇಲೆ ಮಾತ್ರ ಅವಲಂಬಿತರಾಗದೆ ಎಲ್ಲಾ ಜಾತ್ಯತೀತ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ಪ್ರಜಾಪ್ರಭುತ್ವ ಮತ್ತು ಒಕ್ಕೂಟ ವ್ಯವಸ್ಥೆ ಮೇಲೆ ನಡೆಯುವ ಎಲ್ಲಾ ದಾಳಿಗಳನ್ನು ಒಗ್ಗಟ್ಟಿನಿಂದ ಪ್ರತಿರೋಧಿಸಬೇಕು.

ನುಡಿ ಭರಪೂರ – ನಡೆ ಸಪೂರ .... ಪುಟ 4 ರಿಂದ

ಹೊರತು ಬೇರೇನೂ ಸಾಧ್ಯವಾಗುತ್ತಿಲ್ಲ.

ಬದಲಾಗದ ಆಡಳಿತ ವೈಖರಿ

ಹಿಂದಿನ ಬಿಜೆಪಿ ಸೃಷ್ಟಿ ಮಾಡಿದ್ದ ಲಂಚಖೋರತನದ ದಂಧೆಗೆ ಕಛೇರಿಗಳಲ್ಲಿ ಕಡಿವಾಣವೇ ಇಲ್ಲ. ಅವರು ಸೃಷ್ಟಿಸಿ ಹೋದ 'ಮೂಲ ಸೌಕರ್ಯದಲ್ಲೇ ಅಭಿವೃದ್ಧಿ'ಯ ಲಾಭವನ್ನು ಸಿದ್ದು ಸರಕಾರದ ಎಲ್ಲರೂ ಉಣ್ಣುತ್ತಿದ್ದಾರೆ. ಭ್ರಷ್ಟಾಚಾರದ ವಿರುದ್ಧ ರಾಜಿ ಇಲ್ಲದೇ ಹೋರಾಡುವುದಾಗಿ, ಗಣಿ–ಭೂ ಹಗರಣದಲ್ಲಿ ಅಪರಾಧಿಗಳನ್ನು ಜೈಲಿಗಟ್ಟಿ ಶಿಕ್ಷೆ ಕೊಡಿಸುವುದಾಗಿ ಭಾರೀ ಹೇಳಿದ್ದ ಕಾಂಗ್ರೆಸ್ ಪಕ್ಷದ ನಾಯಕರು ಇದೀಗ ಅದಕ್ಕೆ ಕಾರಣವಾಗಿದ್ದ ಕರ್ನಾಟಕ ಲೋಕಾಯುಕ್ತವನ್ನೇ ದುರ್ಬಲಗೊಳಿಸಿ, ಎ.ಸಿ.ಬಿ. ಎಂಬ ಸರಕಾರದ ಅಡಿಯಲ್ಲಿರುವ ಸಂಸ್ಥೆಯೊಂದನ್ನು ಸೃಷ್ಟಿಸಿ ತನ್ನನ್ನು, ತನ್ನಂಥವರನ್ನು ರಕ್ಷಿಸಲು ಹೊರಟಿರುವುದು ತನ್ನ ಮುಖಕ್ಕೇ ಮಸಿ ಬಳಿದುಕೊಂಡಿದೆ. ಬೆಂಗಳೂರಿನಲ್ಲಿ ನಡೆದ ಭೂ ಒತ್ತುವರಿ ವಿಷಯ ಸರಕಾರಕ್ಕೆ ನೆನಪೇ ಇಲ್ಲವಾಗಿದೆ. ವಕ್ಫ್ ಆಸ್ತಿ ಪ್ರಕರಣದಲ್ಲಿ ಕಾಂಗ್ರೆಸ್ ನಡೆ ಅನುಮಾನಾಸ್ಪದವಾಗಿದೆ. ಇತ್ತೀಚಿಗೆ ಬಯಲುಗೊಂಡ ಶಿಕ್ಷಣ ರಂಗದಲ್ಲಿನ ಪ್ರಶ್ನೆಪತ್ರಿಕೆಯ ಹಗರಣದಲ್ಲಿ ಅದೆಷ್ಟು ನಿಷ್ಟುರ ಕ್ರಮ ಜರುಗಿಸಲಿದೆ ಎಂಬುದನ್ನು ನೋಡಬೇಕಿದೆ. ಖಾಸಗಿ ಶಿಕ್ಷಣ ಸಂಸ್ಥೆಗಳ ತಿಮಿಂಗಿಲಗಳನ್ನು ಒಡಲಲ್ಲಿ ಇರಿಸಿಕೊಂಡಿರುವ ಕಾಂಗ್ರೆಸ್ ಅವುಗಳಿಗೆ ಕಡಿವಾಣ ಹಾಕಿತಾದರೂ ಹೇಗೆ? ಹೀಗಾಗಿ ಅವುಗಳ ಅಟ್ಟಹಾಸ, ಸುಲಿಗೆಗೆ ಮಿತಿಯೇ ಇಲ್ಲವಾಗಿದೆ.

ದೌರ್ಜನ್ಯಗಳು

ಇನ್ನು ಮುಖ್ಯವಾದ ಪ್ರಶ್ನೆಗಳೆಂದರೆ ಮಹಿಳೆಯರು, ದಲಿತರು, ಆದಿವಾಸಿಗಳ ಮೇಲಿನ ದೌರ್ಜನ್ಯಗಳು ನಿಂತಿಲ್ಲ ಮಾತ್ರವಲ್ಲ ಹೆಚ್ಚುತ್ತಿರುವ ಇವನ್ನು ತಡೆಯಲು, ಕಠಿಣ ಕ್ರಮ ಕೈಗೊಂಡು ನಿರ್ಭಂಧಿಸಲು, ಶಿಕ್ಷಿಸಲು 'ಅಹಿಂದ' ಸರಕಾರದ ವಿಫಲವಾಗಿದೆ. ರಾಘವೇಶ್ವರ ಸ್ವಾಮಿಯ ಪ್ರಕರಣದಲ್ಲಿ, ಕೊಪ್ಪಳದ ಮರಕುಂಬಿ ದಲಿತರ ಮೇಲಿನ ದಬ್ಬಾಳಿಕೆ, ಕೊಲೆಯಂತಹುಗಳ ಪ್ರಶ್ನೆಯಲ್ಲಿ ಸರಕಾರ ಸ್ಥಾಪಿತ ಹಿತಾಸಕ್ತಿಗಳ ಪರವಾಗಿಯೇ ವರ್ತಿಸಿತು. ಬೆಳ್ತಂಗಡಿ ತಾಲೂಕಿನ ನೆರಿಯದ ಆದಿವಾಸಿ ಸುಂದರ ಮಲೆಕುಡಿಯ ಪ್ರಕರಣದಲ್ಲೂ ಅಂತಿಮವಾಗಿ ಭೂಮಾಲೀಕನನ್ನೇ ರಕ್ಷಿಸುವ ಕ್ರಮಗಳನ್ನೇ ಕೈಗೊಂಡಿತು. ರಾಜ್ಯದಲ್ಲಿ ಜಾತಿ ತಾರತಮ್ಯ, ಮರ್ಯಾದೆ ಹೆಸರಿನಲ್ಲಿ ಕೊಲೆಗಳು, ನಡೆದಾಗ ಶೋಷಿತರ ನೆರವಿಗೆ ಈ ಸರಕಾರವು ಬರುತ್ತಿಲ್ಲ. ಅಂದರೆ ಈ ಸರಕಾರ ಯಾವ ಅರ್ತದಲ್ಲಿ ಅಹಿಂದ ಆದೀತು? ಅಂದರೆ ಅಧಿಕಾರದಲ್ಲಿ ಉಳಿದು ಮುಂದುವರಿಯಲು ಜಾತಿಯನ್ನು ಗುರಾಣಿಯಾಗಿ ದುರ್ಬಳಕೆ ಮಾಡುವಲ್ಲಿ ಕಾಂಗ್ರೆಸ್ ಪಕ್ಷವೂ ಹಿಂದೆ ಬಿದ್ದಿಲ್ಲ.

ಕೋಮುವಾದಿಗಳ ಅಟ್ಟಹಾಸದೆದುರು

ಇಂತಹ ಆಡಳಿತ, ಸರಕಾರದ ವೈಫಲ್ಯಗಳಿಂದ ಬೆಳೆಯುತ್ತಿರುವ ಅತೃಪ್ತಿಯನ್ನು ಸಂಘಪರಿವಾರ–ಬಿಜೆಪಿ ಬಳಸಿಕೊಳ್ಳುತ್ತಿವೆ. ಅದಕ್ಕೆ ಕಾಂಗ್ರೆಸ್ ದಿವಾಳಿತನದಿಂದ ಪೂರ್ಣ ಅವಕಾಶಗಳನ್ನು ನೀಡುತ್ತಿದೆ. ಜೆಡಿ ಎಸ್ ನಂತಹ ಪಕ್ಷವೂ ಸಹ ಬಿಜೆಪಿಯ ಸಖ್ಯತೆಯನ್ನು ಬಯಸಿ ಹೆಚ್ಚು ಹತ್ತಿರವಾಗುತ್ತಿರುವುದೂ ರಾಜ್ಯದಲ್ಲಿ ಕೋಮುವಾದೀ ಶಕ್ತಿಗಳ ಧಾಳಿಗಳು ಮತ್ತಷ್ಟೂ ಹೆಚ್ಚುವ ಅಪಾಯಕಾರಿ ಸನ್ನಿವೇಶವನ್ನು ಸೃಷ್ಟಿಸಿದೆ. ಈಗಿನ ಕೋಮುವಾದಿಗಳ ಪಿತೂರಿ, ಹಿಂಸಾಚಾರಗಳನ್ನು ಮಟ್ಟ ಹಾಕುವಲ್ಲಿ ಸರಕಾರ ಹಿಂದೆ ಬಿದ್ದಿದೆ.

ಮತ್ತೊಂದು ಮುಖ್ಯ ಅಂಶವೆಂದರೆ ಕೋಮುವಾಧಿಗಳ ಕೃತ್ಯಗಳು ಮತ್ತಷ್ಟೂ ಅಪಾಯಕಾರಿ ಮಟ್ಟದಲ್ಲಿ ಬೆಳೆದಿರುವುದನ್ನು ಹಿರಿಯ ಸಂಶೋಧಕ ಡಾ.ಎಂ.ಎಂ.ಕಲಬುರ್ಗಿಯವರ ಹತ್ಯೆಯಲ್ಲಿ ನಿಚ್ಚಳವಾಗಿ ಕಂಡಿತು. ಆದರೆ ಇದುವರೆಗೂ ಕೊಲೆಗಾರರನ್ನು ಪತ್ತೆ ಹಚ್ಚಲಾಗಿಲ್ಲ. ಇದು ಗಂಭೀರ ವಿಷಯ. ಅದೇ ಹೊತ್ತಿನಲ್ಲಿ ಅಲ್ಪಸಂಖ್ಯಾತ ಹೆಸರಿನ ಮೂಲಭೂತವಾದೀ ಶಕ್ತಿಗಳೂ ರಾಜ್ಯದಲ್ಲಿ ನೆಲೆಯೂರಲು ಹವಣಿಸುತ್ತಿವೆ. ಹೀಗಾಗಿ ಎಲ್ಲಾ ಮತನಿರಪೇಕ್ಷ ಶಕ್ತಿಗಳು ಇನ್ನಷ್ಟೂ ಎಚ್ಚರದಿಂದ ಜನ ಸಮೂಹಗಳನ್ನು ಎಚ್ಚರಿಸಿ ದೃಡತೆಯಿಂದ ಹೋರಾಡಬೇಕಿದೆ. ಮೌಢ್ಯತೆ, ಕಂದಾಚಾರ ವಿರೋಧಿ ಕಾಯ್ದೆಯನ್ನು ತರಲು ಸಿದ್ಧರಾಮಯ್ಯನವರ ಸರಕಾರ ಹಿಂದೇಟು ಹಾಕುವುದನ್ನು ಬಿಟ್ಟು ಮಸೂದೆ ರೂಪಿಸಿ ಅಂಗೀಕರಿಸಬೇಕು.

ಒಟ್ಟಾರೆ ಈಗಲೂ ಸಿದ್ಧರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರಕಾರಕ್ಕೆ ಇನ್ನೆರಡು ವರುಷಗಳ ಅವಧಿಯಿದೆ. ವ್ಯರ್ಥ ವಿಷಯಗಳಲ್ಲಿ ಕಾಲಹರಣ ಮಾಡದೇ ಜನರ ನಿರೀಕ್ಷೆಗಳನ್ನು ಈಡೇರಿಸಲು ಶ್ರಮಿಸಬೇಕು. ಒಂದು ವೇಳೆ ವಚನಭ್ರಷ್ಟವಾಗಿ, ಜನಾದೇಶದ ವಿರುದ್ಧ ಹೋದಲ್ಲಿ ಪತನ ಕಟ್ಟಿಟ್ಟ ಬುತ್ತಿ.

ನಮ್ಮ ... ಟ್ವೀಟ್

Ajith ‏@ajith27 May 10
ಕೇರಳದವರು ಬೀಫ್, ಮದ್ಯ ಇಷ್ಟ ಪಡ್ತಾರೆ. ಅಲ್ಲಿ ಸುಶಿಕ್ಷಿತ ಮಹಿಳೆಯರಿದ್ದಾರೆ. ಎಲ್ಲಾ ಧರ್ಮಗಳನ್ನು ಆಚರಿಸುತ್ತಾರೆ. ಮೋದಿಗೆ ಇದೆಲ್ಲಾ ಅರ್ಥವಾಗಲ್ಲ
#PoMoneModi

Vinay Dokania ‏@vinaydokania May 10
ಕೇರಳದ ಗ್ಣಣಿತ ಬಹಳ ಸರಳ. ಕೇರಳದ ಸಾಕ್ಷರತೆ 94%, ಬಿಜೆಪಿಯ ಮತಗಳಿಕೆ ಶೇ. 6. ಒಟ್ಟು ಸೇರಿಸಿದರೆ 100.
#PoMoneModi

JESSEN K VARUGHESE ‏@iamjkv May 10
ದೇಶದ ಚುನಾಯಿತ ಪ್ರಧಾನಿ ದೇಶದ ಅತ್ಯುತ್ತಮ ರಾಜ್ಯವನ್ನು ಸೊಮಾಲಿಯಾಕ್ಕೆ ಹೊಲಿಸುತ್ತಾರೆ. ಎಲ್ಲಾರೂ ಅವರ ಡಿಗ್ರಿಯನ್ನು ಪ್ರಶ್ನಿಸುತ್ತಿರುವುದರಲ್ಲಿ ಆಶ್ಚರ್ಯವೇನಿಲ್ಲ #PoMoneModi

ಉಡುಪಿ ಜಿಲ್ಲಾ ಪುರವಣಿ



ಈ ಬಾರಿಯ ಜನಶಕ್ತಿ ಸಂಚಿಕೆಯೊಂದಿಗೆ 'ಉಡುಪಿ ಜಿಲ್ಲಾ ಪುರವಣಿ' ನಿಮ್ಮ ಕೈಯಲ್ಲಿದೆ. ಪ್ರತಿ ತಿಂಗಳು ರಾಜ್ಯದ ಒಂದು ಜಿಲ್ಲೆಯ ವಿದ್ಯಮಾನಗಳ ಮೇಲೆ ಒತ್ತು ಕೊಡುವ ಒಂದು ಪುರವಣಿಯನ್ನು ಕೊಡುವ ಯೋಜನೆಯ ಭಾಗವಾಗಿ, ಇದು ಮೊದಲನೆಯ ಪುರವಣಿ.

ಎಂಟು ಪುಟಗಳ 'ಉಡುಪಿ ಜಿಲ್ಲಾ ಪುರವಣಿ'ಯಲ್ಲಿ ಇತ್ತೀಚೆಗೆ ನಿಧನರಾದ ಉಡುಪಿಯ ದುಡಿಯುವ ಜನತೆಯ ಹಿರಿಯ ನೇತಾರರಾದ ಕಾ. ಅಬ್ರಹಾಂ ಕರ್ಕಡ ಮತ್ತು ಕಾ. ಸಿ ನಾರಾಯಣ ಅವರ ಬಗ್ಗೆ ವಿಶಿಷ್ಟ ಆಪ್ತ ನೆನಕೆಗಳಿವೆ. "ಉಡುಪಿಯ ಕೋಮುವಾದೀಕರಣ: ಕಾರಣಗಳು, ಸವಾಲುಗಳು, ಹಿಮ್ಮೆಟ್ಟಿಸುವ ಬಗೆ" ಬಗ್ಗೆ ಜಿಲ್ಲೆಯ ಇಬ್ಬರು ಪ್ರಮುಖ ಎಡ ಚಿಂತಕರಾದ ಕೆ. ಫಣಿರಾಜ್ ಮತ್ತು ಡಾ, ಕೆ. ರಾಜೇಂದ್ರ ಉಡುಪ ಅವರ ಸಂದರ್ಶನಗಳಿವೆ. ಉಡುಪಿಯ ಪ್ರಮುಖ ಆರ್ಥಿಕ ಚಟುವಟಿಕೆಗಳು (ಮೀನುಗಾರಿಕೆ ಮತ್ತು ಬೀಡಿ, ಹಂಚು ಮುಂತಾದ ಕೈಗಾರಿಕೆಗಳು) ಮತ್ತು ದುಡಿಯುವ ಜನರ ಪರಿಸ್ಥಿತಿಯ ಬಗ್ಗೆ, ಕಾ. ಕೆ. ಶಂಕರ್ ಮತ್ತು ಕಾ. ಬಾಲಕೃಷ್ಣ ಶೆಟ್ಟಿ ಅವರ ಲೇಖನಗಳಿವೆ. ಉಡುಪಿ ಅಭಿವೃದ್ಧ ಜಿಲ್ಲೆ ಎಂದು ಹೇಳಲಾಗುತ್ತದೆ. ಇದು ನಿಜವೇ? ಎಂದು ಪರಿಶೀಲಿಸುವ 'ಉಡುಪಿ ಅಭಿವೃದ್ಧ ಜಿಲ್ಲೆಯೇ?' ಎಂಬ ವಸಂತರಾಜ್ ಅವರ ಲೇಖನ ಇದೆ. ವಿಶೇಷ ಪುರವಣಿಯೊಂದಿಗೆ ಈ ಸಂಚಿಕೆಯನ್ನು ಉಡುಪಿಯಲ್ಲಿ ಮೇ 15-16 ರಂದು ಬಿಡುಗಡೆ ಮಾಡಲಾಗುವುದು. ಇದನ್ನು ನಮ್ಮ ಓದುಗರು ಸ್ವಾಗತಿಸಿ ಬೆಂಬಲಿಸಿ, ನಮ್ಮ 'ಜಿಲ್ಲಾ ಪುರವಣಿ' ಯೋಜನೆಯನ್ನು ಪ್ರೋತ್ಸಾಹಿಸುತ್ತಾರೆಂದು ನಮ್ಮ ನಿರೀಕ್ಷೆ.



ಅಬ್ರಾಹಂ ಕರ್ಕಡ ಮತ್ತು ಕೊಲ್ಲೂರು ಕಬ್ಬಿಣ



[ಇತ್ತೀಚೆಗೆ ನಮ್ಮನ್ನು ಅಗಲಿದ ಉಡುಪಿಯ ಇಬ್ಬರು ಹಿರಿಯ ನಾಯಕರಾದ ಅಬ್ರಹಂ ಕರ್ಕಡ ಮತ್ತು ಸಿ.ನಾರಾಯಣ ಅವರ ಜತೆ ಕೊಲ್ಲೂರು ಕಬ್ಬಿಣದ ಬಗ್ಗೆ ಡಾ. ಕೆ. ರಾಜೇಂದ್ರ ಉಡುಪ ನಡೆಸಿದ ಸಂಶೋಧನೆಯ ವಿಶಿಷ್ಟ ಆಪ್ತ ಕತೆ ಇದು. ಜನರ ಜತೆ ಈ ಇಬ್ಬರು ನಾಯಕರ ಸಂಪರ್ಕ, ಅವರನ್ನು ಮುಟ್ಟುವ ರೀತಿ ಮುಂತಾದವುಗಳ ಬಗ್ಗೆ ಉತ್ತಮ ಒಳನೋಟ ನೀಡುವ ಪ್ರಸಂಗ.]

-ಡಾ. ಕೆ. ರಾಜೇಂದ್ರ ಉಡುಪ

ನಾನು ಇವರನ್ನು ನನ್ನ ಯುವ ಪ್ರಾಯದಿಂದ ಬಲ್ಲೆ. ಅಜಾನುಬಾಹು ವ್ಯಕ್ತಿತ್ವ, ಕುಂದಾಪುರ ಪೇಟೆಯಲ್ಲಿ ಕಂಬಾವುಟ ಹಿಡಿದವರ ಉದ್ದ ಮೆರವಣಿಗೆ, ಇದರ ಮುಂದೆ ನಡೆಯುತ್ತಿದ್ದವರು ಅಬ್ರಾಹಂ ಕರ್ಕಡ. ಅವರದ್ದು ಯಾವಾಗಲೂ ಸೈಕಲ್ ಸವಾರಿ. ಭೂಮಿ ಹೋರಾಟದ ತೀವ್ರ ಸಮಯವದು. ಬಸ್ರೂರಿನಲ್ಲಿ ಭೂಮಾಲಕರೊಂದಿಗೆ ಮುಖಾ ಮುಖಿ. ಅಲ್ಲಲ್ಲಿ ಹಿಂಸಾತ್ಮಕ ದಾಳಿಯನ್ನು ಹಿಮ್ಮೆಟ್ಟಿಸಿದ ರೈತ ಸಂಘ. ಅದರ ಬೆನ್ನಿಗೆ ಕಾರ್ಮಿಕರ ಯೂನಿಯನ್. ನಾನು ಎಸ್.ಎಫ್.ಐ. ಸೇರಿದ ನಂತರ ನನಗೆ ಕರ್ಕಡ ಆಪ್ತರಾದರು.

ಅನೇಕ ವರ್ಷಗಳ ನಂತರ ಅವರೊಡನೆ ಒಂದು ದಿನ ಚರ್ಚಿಸುತ್ತಿದೆ. ವಿಚಾರ ಕೊಲ್ಲೂರಿನ ಕಡೆಗೆ ತಿರುಗಿತು. "ಕೊಲ್ಲೂರು ಬೆಟ್ಟ ಕಾಡುಗಳಲ್ಲಿ ತುಂಬಾ ಬುಡ ಕಟ್ಟಿನ ಜನರು ವಾಸಿಸುತ್ತಾರೆ. ಅವರ ಜೀವನ ಕ್ರಮವೇ ಬೇರೆ. ಕಾಡುತ್ಪತ್ತಿ ಸಂಗ್ರಹಿಸುವುದರೊಂದಿಗೆ ಬೇಸಾಯವನ್ನೂ ಮಾಡುತ್ತಾರೆ. ಉಳಿದಲ್ಲಿರುವಂತೆ ಅವರಲ್ಲಿ ಭೂಮಾಲಿಕ ಒಕ್ಕಲುಗಳ ಸಂಬಂಧ ಇಲ್ಲ. ತಮಗೆ ಬೇಕಾದ ಕಬ್ಬಿಣದ ಹತಾರಗಳನ್ನು ಅವರೇ ತಯಾರಿಸುತ್ತಾರೆ".

ಹಳ್ಳಿಬೇರು ಪ್ರಸಂಗ

ಕಬ್ಬಿಣ್ಣದ ವಿಷಯ ಕೇಳಿದಾಗ ನನ್ನ ಕಿವಿ ಚುರುಕಾಯಿತು. ಕಬ್ಬಿಣ ಮಾನವ ಚರಿತ್ರೆಯಲ್ಲಿ ಒಂದು ಕ್ರಾಂತಿಯನ್ನೆ ಹುಟ್ಟು ಹಾಕಿತ್ತು. ನೇಗಿಲಿನ ತುದಿಗೆ ಕಬ್ಬಿಣದ ತುಂಡನ್ನು ಸಿಕ್ಕಿಸಿದ್ದರಿಂದ, ಆಳವಾಗಿ ಭೂಮಿಯನ್ನು ಊಳಲು ಸಾಧ್ಯವಾಯಿತು. ಇದರಿಂದ ವ್ಯವಸಾಯದ ಉತ್ಪಾದಕತೆ ಹೆಚ್ಚಿ ಮಿಗುತಾಯದಿಂದ ಕೃಷಿ ಸಮಾಜದಲ್ಲಿ ಒಂದು ಮಹತ್ತರ ಬದಲಾವಣೆ ಆಯಿತು. ಕಾಡನ್ನು ಕಡಿದು ಭೂಮಿಯನ್ನು



ಹಸನು ಮಾಡುವುದರಲ್ಲಿ, ಬೆಳೆಯನ್ನು ಕಟಾವು ಮಾಡುವುದರಲ್ಲಿ, ಬಾವಿಯನ್ನು ತೋಡುವುದರಲ್ಲಿ, ಗಾಡಿ-ಸಾರಿಗೆಯಲ್ಲಿ ಮತ್ತು ಯುದ್ಧ ಶಸ್ತ್ರಾಸ್ತ್ರಗಳ ಉತ್ಪಾದನೆಯಲ್ಲಿ ಕಬ್ಬಿಣದ ಹಿರಿಮೆ ಇದ್ದದ್ದೇ. ಆಧುನಿಕ ಜಗತ್ತಿನಲ್ಲಿಂದು ಉಕ್ಕು ಮತ್ತು ಕಬ್ಬಿಣಗಳಿಲ್ಲದೆ ನಾಗರಿಕತೆಯೇ ಇಲ್ಲ ಎಂಬಂತಾಗಿದೆ. ಆದ್ದರಿಂದ ಅನಾದಿಕಾಲದ ಕಬ್ಬಿಣದ ಬಗ್ಗೆ ಅಭ್ಯಸಿಸುವುದು ಚಾರಿತ್ರಿಕವಾಗಿ ಮುಖ್ಯವಾಗಿರುತ್ತದೆ

ವಿಶೇಷ ಎಂದರೆ ಕೊಲ್ಲೂರಿನ ಹಿಂದೆ ಕೊಡಚಾದ್ರಿ ಬೆಟ್ಟವಿದೆ. ಇದು ಶಿವಮೊಗ್ಗ ಜಿಲ್ಲೆಯಲ್ಲಿದೆ, (ಕೊಲ್ಲೂರು ಉಡುಪಿ ಜಿಲ್ಲೆಯಲ್ಲಿದೆ) ಇದರ ಮೇಲೊಂದು ಕಬ್ಬಿಣದ ಕಂಬವಿದೆ. ಇದರ ಎತ್ತರ 32 ಅಡಿಗಳಷ್ಟಿದ್ದು, ಅದಕ್ಕೆ ಟ್ರಾಪಿಸಿಯಂ ಆಕಾರದ ಛೇದ (cross section) ಇದೆ. ಈ ಪ್ರದೇಶದಲ್ಲಿ 5 ಸಾವಿರ ಮಿ.ಮಿ ಗಿಂತ ಹೆಚ್ಚು ಮಳೆ ಬಿದ್ದು ವರ್ಷವಿಡೀ ವಾತಾವರಣ ತೇವಾಂಶದಿಂದ ಕೂಡಿದ್ದರೂ, ಕಂಬದ ಮೇಲ್ಮೈಯಲ್ಲಿ ಸ್ವಲ್ಪವೇ ತುಕ್ಕು ಹಿಡಿದಿದೆ. ಈ ಕಂಬ ಇರುವ ಗಿರಿಯ ಸುತ್ತಲೂ ದಟ್ಟವಾದ ಕಾಡುಗಳಿವೆ, ಕಡಿದಾದ ಕಂದಕ ಮತ್ತು ಗುಡ್ಡಗಳಿಂದ ಸುತ್ತು ವರಿದಿದೆ. ಇಂತಹ ದೊಡ್ಡ ಕಂಬವನ್ನು ಬೇರೆಡೆಯಿಂದ ಸಾಗಿಸುವ ಸಾ ಧ್ಯತೆ ಇದ್ದಂತೆ ತೋರುವುದಿಲ್ಲ. ಈ ಬೆಟ್ಟದ ಸುತ್ತಲು ವಾಸಿಸುವ ಬುಡಕಟ್ಟು ಜನಾಂಗ, ಅವರೇ ಹೇಳಿಕೊಳ್ಳುವಂತೆ ಕುಡುಬಿ ಜೋಗಿ, ಈ ಕಂಬವನ್ನು ಈ ಸ್ಥಳದಲ್ಲೆ ತಯಾರಿಸಿ ಸ್ಥಾಪಿಸಿರಬಹುದೆಂದು ತರ್ಕಿಸಬಹುದು. ಗಿರಿಯ ಮೇಲೆ ಬುಡಕಟ್ಟು ಜನಾಂಗದ ದೇವಸ್ಥಾನ(?)ದ ಮುಂದೆ ಈ ಕಂಬ ಇರುವುದರಿಂದ ತರ್ಕಕ್ಕೆ ಪುಷ್ಟಿ ಕೊಟ್ಟಂತಾಗುತ್ತದೆ.

"ಹೌದೇ, ಅವರು ಕಬ್ಬಿಣ ತಯಾರಿಸುವರೆಂದು ನಿಮಗೆ ಹೇಗೆ ತಿಳಿದಿದೆ?" ಎಂದು ನಾನು ಕರ್ಕಡರನ್ನು ಪ್ರಶ್ನಿಸಿದೆ. "ಹೌದು, ಹಳ್ಳಿಬೇರು ಎನ್ನುವಲ್ಲಿ ನಾನು ನೋಡಿದ್ದೆ. ಅವರಲ್ಲಿ ಭೂಸಂಬಂಧ ಉಳಿದ ರೈತರಲ್ಲಿ ಇದ್ದಂತಿರುವುದಿಲ್ಲ ಅಂದೆನಲ್ಲ. ಅದರಲ್ಲಿ ಒಂದು ಸಮಸ್ಯೆಯು ಉಂಟು. ಅವರು ಕೃಷಿ ಮಾಡುವ ಭೂಮಿಯ ಹಕ್ಕು ಪತ್ರಗಳು ಸರಿಯಾಗಿರುವುದಿಲ್ಲ. ಅದನ್ನು ಉಪಯೋಗಿಸಿ ಹೊರಗಿನ ಒಂದು ದುರಾಸೆಯ ಜನ ಇವರ ಸ್ಥಳವನ್ನು ಆಕ್ರಮಿಸಿಕೊಂಡು ಮತ್ತು ಗೂಂಡಾಗಳನ್ನು ಉಪಯೋಗಿಸಿ ಬುಡಕಟ್ಟು ಜನರನ್ನು ಹೆದರಿಸಿದ್ದಾರೆ. ಬುಡಕಟ್ಟಿನ ಜನರು ಪೋಲಿಸರನ್ನು ನಂಬುವುದಿಲ್ಲ. ಆದಷ್ಟು ಅವರಿಂದ ದೂರ ಇರಲು ಬಯಸುತ್ತಾರೆ. ಸಂಕಷ್ಟಕ್ಕೆ ಸಿಲುಕಿದ ಇವರು ಸಹಾಯಕ್ಕಾಗಿ ನನ್ನ ಹತ್ತಿರ ಬಂದರು. ಅವರ ಕೋರಿಕೆ ಮೇರೆಗೆ ನಾನು ಮತ್ತು ಕಾ. ಸಿ. ನಾರಾಯಣ ಸೈಕಲ್ಲಿನಲ್ಲಿ ಹಳ್ಳಿ ಬೇರಿಗೆ (ಕುಂದಾಪುರದಿಂದ ಸುಮಾರು 25 ಕಿ.ಮೀ.) ಹೋದೆವು. ಆ ಹಳ್ಳಿಗೆ ಒಂದೋ ನಡೆದು ಹೋಗಬೇಕು, ಇಲ್ಲವೇ ಕಷ್ಟಪಟ್ಟು ಸೈಕಲ್ಲಿನಲ್ಲಿ ಹೋಗಬಹುದು. ನಾವು ಅಲ್ಲಿಗೆ ಹೋಗಿ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡೆವು. ಮೊದಲು ಕುಂದಾಪುರಕ್ಕೆ ಹೋಗಿ ಅಸಿಸ್ಟೆಂಟ್ ಕಮಿಷನರ್ (ಎ.ಸಿ)ನ್ನು ನೋಡಿದೆವು. ಅವರಿಗೆ ಪರಿಸ್ಥಿತಿಯ ಗಂಭೀರತೆ ಮನವರಿಕೆ ಮಾಡಿಕೊಟ್ಟೆವು. ಪೋಲಿಸ್ ಸಹಾಯ ಕಳಿಸುವಂತೆ ಕೋರಿದೆವು. ಎ.ಸಿ. ಅದಕ್ಕೆ ಒಪ್ಪಿಕೊಂಡರು. ನಾವು ಹಳ್ಳಿಬೇರಿಗೆ ಪುನಃ ಹೋಗಿ ಯುವ ಜನರ ಒಂದು ಪಡೆಯನ್ನು ಕಟ್ಟಿದೆವು. ಗೂಂಡಾಗಳನ್ನು ಹೊರದಬ್ಬಿದೆವು. ಹಳ್ಳಿಬೇರಿಗಿದ್ದ ಒಂದೇ ಒಂದು ಸಂಪರ್ಕ ಸೇತುವೆ (ಹಗ್ಗ ಮತ್ತು ಬೀಳಿನಿಂದ ಮಾಡಿದ್ದು) ಯನ್ನು ಕಳಚಿಸಿ ಇಟ್ಟೆವು. ನಮ್ಮ ವಕೀಲರನ್ನು ನೋಡಿ ಅವರ ರೆಕಾರ್ಡುಗಳನ್ನು ಸರಿಯಾಗಿ ಹೊಂದಿಸಿಕೊಟ್ಟೆವು. ಈ ಪ್ರಯುಕ್ತ ನಾವಿಬ್ಬರೂ ಎರಡು ದಿನ ಹಳ್ಳಿಬೇರಿನಲ್ಲಿ ಉಳಿಯಬೇಕಾಯಿತು. ಬುಡಕಟ್ಟು ಜನಾಂಗದವರು ಸಂಜೆಯ ನಂತರ ಊರಿನಲ್ಲಿ ಯಾವ ಪರರನ್ನು ಇರಗೊಡುವುದಿಲ್ಲ. ಆದರೆ ನಮ್ಮನ್ನು ಮಾತ್ರ ರಾತ್ರಿ ಉಳಿಸಿಕೊಂಡರು. ಆ ರಾತ್ರಿ ಅವರು ಕಬ್ಬಿಣವನ್ನು ಮಾಡಿದರು. ಕಬ್ಬಿಣ ಮಾಡಲು ಅದೇ ಸರಿ ಯಾದ ದಿನವಾಗಿತ್ತು.

ದಾಖಲೆಯಾಗದ ಕೊಲ್ಲೂರು ಕಬ್ಬಿಣ

ಇಲ್ಲಿವರೆಗೆ ಕೊಲ್ಲೂರಿನ ಬುಡಕಟ್ಟು ಜನಾಂಗದವರು ಕಬ್ಬಿಣ ಮಾಡಿದ ಉಲ್ಲೇಖ ಎಲ್ಲೂ ಇರಲಿಲ್ಲ. ಕೊಡಚಾದ್ರಿಯ ಕಂಬದ ವಿಚಾರವಾಗಿ ನಾವು ಕೆಲವು ಹಳೆಯ ಕಡತಗಳನ್ನು ಕೆದಕಿದೆವು. ನಮಗೆ ಯಾವ ದಾಖಲೆಯೂ ಸಿಕ್ಕಿರಲ್ಲಿಲ್ಲ. ಆದರೂ ನನಗೊಂದು ಅನುಮಾನವಿತ್ತು. ಕೊಲ್ಲನ್ ಎಂದ-ರೆ ತಮಿಳಿನಲ್ಲಿ ಕಬ್ಬಿಣದ ಕೆಲಸ ಮಾಡುವವ; ಸುತ್ತಲಿನ ಅನೇಕ ಪ್ರದೇಶಗಳಿಗೆ ಕಬ್ಬಿಣದ ಹೆಸರಿದೆ: ಕಮ್ಮಾರಪಾಲ, ಕಮ್ಮರ ಶೆಟ್ಟಿ, ಕಮಾರಸಾಲೆ (ಈಗ ಸಂಸ್ಕೃತೀಕರಣಗೊಂಡು ಕಮಲಶಿಲೆ ಆಗಿದೆ). ಮಧ್ಯ ಭಾರತದ ಬುಡಕಟ್ಟು ಜನರು ಮಾಡುವ ಕಬ್ಬಿಣದ ತಯಾರಿಕಾ ಕ್ರಮವನ್ನು ಮುಂಬೈ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಐ.ಐ.ಟಿ.) ಯ ಪ್ರೋ. ಭರತ ಬಲ್ಲಾಳ್ ದಾಖಲಿಸಿರುತ್ತಾರೆ. ಹಾಗೇ ರಾಂಚಿಯ ಬುಡಕಟ್ಟಿನವರು ಮಾಡುವ ಕಬ್ಬಿಣದ ತಯಾರಿಕಾ ಕ್ರಮವನ್ನು ನೇಶನಲ್ ಮೆಟಲರ್ಜಿಕಲ್ ಲ್ಯಾಬೊರೆಟರಿ (ಎನ್.ಎಮ್.ಎಲ್.), ಜೆಮಶೆಡ್ ಪುರನವರು ದಾಖಲಿಸಿದ್ದಾರೆ. ಆದರೆ ಕೊಲ್ಲೂರಿನಲ್ಲಿ ಇದು ಆಗಲಿಲ್ಲ. ಕರ್ನಾಟಕದ ಬೇರೆ ಭಾಗಗಳಲ್ಲಿ ಕಬ್ಬಿಣವನ್ನು ತಯಾರಿಸಿದ ಕುರುಹುಗಳಿವೆ.

ಒಂದಾನೊಂದು ಕಾಲದಲ್ಲಿ ನಮ್ಮ ದೇಶದ ಕಬ್ಬಿಣ ಮತ್ತು ಉಕ್ಕು ವಿದೇಶಗಳಲ್ಲಿ, ಮುಖ್ಯವಾಗಿ ಯುರೋಪಿನಲ್ಲಿ ಪ್ರಸಿದ್ಧಿ ಹೊಂದಿತ್ತು. ಅರಬ್ಬರು ಈ ಉಕ್ಕನ್ನು ಯುರೋಪಿನಲ್ಲಿ ಮಾರುತಿದ್ದರು. ಅದರಿಂದ ಇದಕ್ಕೆ ಡೆಮಾಸ್ಕಸ್ ಉಕ್ಕು ಎಂಬ ಹೆಸರು ಬಂದಿತ್ತು. ನಮ್ಮವರು ಕಬ್ಬಿಣ ಮತ್ತು ಉಕ್ಕಿನ ತಯಾರಿ-ಕೆ, ಅದಕ್ಕೆ ರೂಪ ಕೊಡುವುದು, ಆಯುಧಗಳನ್ನು ಮಾಡುವುದು, ಅದನ್ನು ಉಷ್ಣ-ಹದ (heat treat) ಮಾಡುವುದು ಇತ್ಯಾದಿ ವಿದ್ಯೆಗಳನ್ನು ಕರಗತ ಮಾಡಿಕೊಂಡಿದ್ದರು. ಯುರೋಪಿನಲ್ಲಿ ನಡೆದ ಎಷ್ಟೊ ಯುದ್ಧಗಳಲ್ಲಿನ ಆಯುಧಕ್ಕೆ ನಮ್ಮಲ್ಲಿನ ಉಕ್ಕನ್ನು ಉಪಯೋಗಿಸಲಾಗಿತ್ತು. ನಮ್ಮ ಕಬ್ಬಿಣ ಮತ್ತು ಉಕ್ಕಿಗೆ ಒಂದು ಚರಿತ್ರೆಯೇ ಇದೆ.

"ಕರ್ಕಡರೇ, ಹಳ್ಳಿಬೇರಿನ ಬುಡಕಟ್ಟಿನವರು ತಯಾರಿಸುವ ಕಬ್ಬಿಣದ ಬಗ್ಗೆ ಮಾಹಿತಿ ಕೊಡುವಿರಾ?" ಎಂದೆ.

ಕರ್ಕಡರು ಅದನ್ನು ಸಂಶೋಧಕರ ದೃಷ್ಟಿಯಲ್ಲಿ ನೋಡಿಲಿಲ್ಲ. ಆದರೆ ಕುತೂಹಲದಿಂದ ನೋಡಿದ್ದರು. ತನಗೆ ತಿಳಿದ ಎಲ್ಲಾ ವಿಚಾರಗಳನ್ನು ನನಗೆ ವಿವರಿಸಲು ಪ್ರಯತ್ನ ಪಟ್ಟರು. "ಅವರ ಕುಲುಮೆ ಎದೆಯ ಮಟ್ಟದವರೆಗೆ ಬರಬಹುದು." ಕರ್ಕಡರು ಎತ್ತರದ ಆಳು. ಅವರ ಎದೆಯ ಮಟ್ಟ ಎಂದರೆ 4-5 ಅಡಿಗಳಷ್ಟು ಇರಬಹುದೆಂದು ಅಂದಾಜಿಸಿದೆ. "ಕುಲುಮೆಗೆ ಎರಡು ತಿದಿಗಳಿರುತ್ತವೆ. ತಿದಿಯ ಮೇಲೆ ನಿಂತು ತಾಳಕ್ಕೆ ಕುಣಿದವರಂತೆ ತಿದಿಯನ್ನು ಒತ್ತುತ್ತಾರೆ. ಪೂಜೆ ಮಾಡಿ, ಮೊದಲು ತಿದಿಯ ಮೇಲೆ ಹೆಂಗಸೊಂದು ಹತ್ತಿ ತುಳಿದ ನಂತರ ಗಂಡಸರು ಒಬ್ಬೊಬ್ಬರಾಗಿ ತುಳಿಯಲು ಪ್ರಾರಂಭಿಸುತ್ತಾರೆ. ಗಂಡಸರು ತಾವೇ ತಯಾರಿಸಿದ ಮಧ್ಯವನ್ನು ಸೇವಿಸಿರುತ್ತಾರೆ. ಬೆಳಗಿನ ಜಾವದವರೆಗೆ ತಿದಿಯನ್ನು ತುಳಿಯುತ್ತಿರುತ್ತಾರೆ. ಹೀಗೆ ಅವರು ಕುಲುಮೆಗೆ ಹಾಕಿದ ಮಣ್ಣು ಮತ್ತು ಮಸಿಕೆಂಡದಿಂದ ಕಬ್ಬಿಣ ಬರುತ್ತದೆ. ಕೆಂಪು ಹಳದಿ ಬಣ್ಣದ ಕಾದ ಕಬ್ಬಿಣದ ಉಂಡೆಗಳನ್ನು ಅವರೇ ತಯಾರಿಸಿಟ್ಟಿರುವ ಕೋಲಿನಿಂದ ಹೊರತೆಗೆದು ಅದಕ್ಕೆ ಕಬ್ಬಿಣದ ಸುತ್ತಿಗೆಯಿಂದ ಇಬ್ಬರು ಎಡೆಬಿಡದೆ ಬಡಿಯುತ್ತಾ-ರೆ. ಬಡಿಯುವಾಗ ಉಂಡೆಯನ್ನು ತಿರುಗಿಸುತ್ತಾ ಇರುತ್ತಾರೆ. ಉಂಡೆ ಕೆಂಪು ಬಣ್ಣಕ್ಕೆ ತಿರುಗಿದಾಗ ಬಡಿಯುದನ್ನು ನಿಲ್ಲಿಸುತ್ತಾರೆ".

ಪುಟ 12 ಕ್ಕೆ

ಉಡುಪಿಯ ಕೋಮುವಾದೀಕರಣ – ಸಂವಾದ



ಈ ಬಗ್ಗೆ ಜಿಲ್ಲೆಯ ಇಬ್ಬರು ಎಡ ಚಿಂತಕರೊಂದಿಗೆ ಸಂವಾದ ನಡೆಸಿದ್ದೇವೆ. ಕೆಳಗಿನ 4 ಪ್ರಶ್ನೆಗಳಿಗೆ ಪ್ರಾಧ್ಯಾಪಕರುಗಳಾದ ಮಣಿಪಾಲದ ಎಂ.ಐ.ಟಿ.ಯ ಕೆ. ಫಣಿರಾಜ್ ಮತ್ತು ಸುರತ್ಕಲ್ಲಿನ ಎನ್.ಐ.ಟಿ.ಕೆ.ಯ ಡಾ. ಕೆ. ರಾಜೇಂದ್ರ ಉಡುಪ ಉತ್ತರಿಸಿ ಸಂವಾದದಲ್ಲಿ ಭಾಗವಹಿಸಿದ್ದಾರೆ.

1. ಕರಾವಳಿ ಕರ್ನಾಟಕದಲ್ಲಿ (ಅಥವಾ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ) ಕೋಮುವಾದೀಕರಣದ ಪ್ರಕ್ರಿಯೆ ಯಾವಾಗ ಆರಂಭವಾಯಿತು? ಅದಕ್ಕೆ ಕಾರಣಗಳೇನು? ಕರ್ನಾಟಕ ರಾಜ್ಯದಲ್ಲಿ ಕೋಮುವಾದಿ ಶಕ್ತಿಗಳು ಕರಾವಳಿಯಲ್ಲಿಯೇ ಬೇರು ಬಿಡಲು ಕಾರಣಗಳೇನು?
2. ಅದರಲ್ಲಿ ಈಗ ಉಡುಪಿ ಜಿಲ್ಲೆಯಾಗಿರುವ ಪ್ರದೇಶದ ಪಾತ್ರವೇನು? ಈಗಿನ ದ.ಕ. ಮತ್ತು ಉಡುಪಿ ಜಿಲ್ಲೆಗಳ ಕೋಮುವಾದೀಕರಣದ ಸ್ವರೂಪ ಮತ್ತು ತೀವ್ರತೆಯಲ್ಲಿ ಏನಾದರೂ ವ್ಯತ್ಯಾಸವಿದೆಯೇ?
3. ಕೋಮುವಾದೀಕರಣ ಎಡ–ಪ್ರಜಾಸತ್ತಾತ್ಮಕ ಶಕ್ತಿಗಳಿಗೆ ಒಡ್ಡಿರುವ ಸವಾಲುಗಳು ಯಾವುವು?
4. ಕೋಮುವಾದೀಕರಣದ ವಿರುದ್ಧ ಪ್ರತಿರೋಧ ಒಡ್ಡುವ ಮತ್ತು ಹಿಮ್ಮೆಟ್ಟಿಸುವ ಬಗೆ ಹೇಗೆ? ಈ ವರೆಗಿನ ಇಂತಹ ಪ್ರಯತ್ನಗಳ ನ್ಯೂನತೆಗಳೇನು?



ಪ್ರೊ. ಕೆ. ಫಣಿರಾಜ್

1. ಕಾರಣಗಳು, ಇಲ್ಲೇ ಏಕೆ?

ಈ ಪ್ರಕ್ರಿಯೆ 1980ರ ದಶಕದ ಮಧ್ಯಾವಧಿಯಲ್ಲಿ ಕಣ್ಣಿಗೆ ಕಾಣುವ ಹಾಗೆ ಆರಂಭವಾಯಿತು. ರಾಮಜನ್ಮ ಭೂಮಿ ಚಳುವಳಿಯ (ಇದನ್ನು ಚಳುವಳಿ ಎಂದೇ ಗುರುತಿಸಿ ಬೇಕು–ಅದಕ್ಕೆ ಚಳುವಳಿಯ ಎಲ್ಲಾ ಲಕ್ಷಣಗಳು ಇದ್ದವು) 'ಹಿಂದುತ್ವ ರಾಜಕೀಯ'ವೇ ಇದಕ್ಕೆ ಕಾರಣ. ಈಗಾಗಲೇ ತಿಳಿದಿರುವ ಹಾಗೆ ರಾಮಜನ್ಮಭೂಮಿ ಚಳುವಳಿಯು ಬಾಬರಿ ಮಸೀದಿ ಕೇಂದ್ರಿತವಾಗಿತ್ತು ಹಾಗು ಮುಸಲ್ಮಾನರನ್ನು 'ಹಿಂದು'ಗಳ ಚಾರಿತ್ರಿಕ ಶತ್ರುಗಳು ಎಂಬುದನ್ನು ಸಾಮಾನ್ಯರ ಬುದ್ಧಿಭಾವಗಳಲ್ಲಿ ಬೇರೂರಿಸುವ ಇತಿಹಾಸದ ಉದ್ದೇಶಿತ ನಿರೂಪಣೆಯಾಗಿತ್ತು (ಇಂಸ್ಟ್ರುಮೆಂಟಾಲಿಸ್ಟ್ ಹಿಸ್ಟೋರಿಸೈಜೇಷನ್). ಇದು ತಪ್ಪೋ ಸರಿಯೋ, ಆಧುನಿಕ ಚರಿತ್ರೆಯಲ್ಲಿ ಈ ಬಗೆಯ ನಿರೂಪಣೆ ಜಗತ್ತಿನಾದ್ಯಂತ ನಡೆದಿದೆ–ಅದು ಭಾರತವೆಂಬ ರಾಷ್ಟ್ರದಲ್ಲಿ ಹತ್ತೊಂಬತ್ತನೇ ಶತಮಾನದ ಕೊನೆಯಿಂದಲೇ ಚಾಲ್ತಿಯಲ್ಲಿತ್ತು; ರಾಮಜನ್ಮಭೂಮಿ ಚಳುವಳಿಯಲ್ಲಿ ತನ್ನ ಉತ್ತುಂಗವನ್ನು ಸಾಧಿಸಿತು.

ಮಾರ್ಕ್ಸ್ ತನ್ನ ಪ್ರಖ್ಯಾತ ಪ್ರಬಂಧ 'ಯಟಿಂನ್ತ್ ಬ್ರುಮಿಯೇರ್ ಆಫ್ ಲೂಯಿಸ್ ಬೋನಾಪಾರ್ಟೆ'ಯಲ್ಲಿ– ಒಂದು ಚಾರಿತ್ರಿಕ ಸನ್ನಿವೇಶದಲ್ಲಿ ಗತದ ಗೋರಿಯಿಂದೆದ್ದ ಪಾತ್ರಗಳು ಹಳೆಯ ಪೋಷಾಕು ತೊಟ್ಟು ವರ್ತಮಾನದ ರಂಗದಲ್ಲಿ ಹೊಸ ಆಟವನ್ನು ಆಡುತ್ತವೆ; ಮನುಷ್ಯರು ತಮ್ಮ ಚರಿತ್ರೆಯನ್ನು ತಾವೇ ನಿರೂಪಿಸುತ್ತಾರೆ; ಆದ–ರೆ ನಾವು ಎಣಿಸಿದ ಬಗೆಯಲ್ಲಿ, ನಾವು ಇಚ್ಛಿಸುವ ಪರಿಣಾಮಗಳಿಗಾಗಿಯಲ್ಲ – ಎಂಬ ಮಾತುಗಳನ್ನು ಹೇಳಿದ್ದಾನೆ. ಈ ಮಾತುಗಳು, ಸ ಧ್ಯದ ಯಥಾಸ್ಥಿತಿಯನ್ನು ಬದಲಾಯಿಸುವ ಕ್ರಾಂತಿಕಾರಿ ಕಾರ್‍ಯಾಚರಣೆಗಳಿಗೆ ಹೇಗೆ ಅನ್ವಯವಾಗುತ್ತವೋ, ಹಾಗೆಯೇ ಯಥಾಸ್ಥಿತಿಯನ್ನು ಭದ್ರವಾಗಿಡುವ ಕಾರ್‍ಯಾಚರಣೆಗಳಿಗೂ ಲಗವಾಗುತ್ತವೆ. ಈ ಎರಡನೇ ಬಗೆಯ ಕಾರ್‍ಯಾಚರಣೆ ಕರಾವಳಿಯಲ್ಲಿ ಮಾತ್ರವಲ್ಲ, ಇಡಿ ದೇಶಾದ್ಯಂತ ಹಲವಾರು ಬಗೆಗಳಲ್ಲಿ ಸಾಧಿತವಾಯಿತು.

ಇದನ್ನೇ, ಮತ್ತೊಬ್ಬ ಪ್ರತಿಭವಂತ ಮಾರ್ಕ್ಸ್‌ವಾದಿ ರಾಜಕಾರಣಿ ಅಂಟೋನಿಯೋ ಗ್ರಾಂಷ್ಚಿ 'ನಿಷ್ಕ್ರಿಯ ಕ್ರಾಂತಿ' ಎನ್ನುತ್ತಾನೆ. ಅವನ ಪ್ರಕಾರ, ಚರಿತ್ರೆ ಯ ಒಂದು ಘಟ್ಟದಲ್ಲಿ ಹಳೆಯ ವಿಚಾರ–ಸಾಮಾಜಿಕ ಆಚರಣೆಗಳು ಜಡ್ಡಾಗಿ, ಕ್ರಾಂತಿಕಾರಿ ಬದಲಾವಣೆಗಳನ್ನು ಬೇಡುತ್ತಿರುವ ಗಳಿಗೆಯಲ್ಲಿ, ಕ್ರಾಂತಿ ಸಾಧಿಸುವ ರಾಜಕೀಯ ಶಕ್ತಿಗಳು ಗೈರು ಹಾಜರಾಗಿರುವಾಗ, ಯಥಾಸ್ಥಿತಿಯನ್ನು ಭದ್ರಗೊಳಿಸುವ ಶಕ್ತಿಗಳು, ಬದಲಾವಣೆಯನ್ನು ತರುವ ನಾಯಕತ್ವದ ಸ್ಥಾನವನ್ನು ವಶಪಡಿಸಿಕೊಂಡು, ಹೊಸತಾಗಿ ತೋರುವ ಭಾಷೆಯಲ್ಲಿ ಯಥಾಸ್ಥಿತಿಯನ್ನು ಭದ್ರವಾಗಿಡಲು ಸಫಲವಾಗುತ್ತವೆ–ಅದೇ 'ನಿಷ್ಕ್ರಿಯ ಕ್ರಾಂತಿ'; ಯುರೋಪಿನ ಫ್ಯಾಸಿಸಂ ಅಂತಹ ಒಂದು ಸಫಲ 'ನಿಷ್ಕ್ರಿಯ ಕ್ರಾಂತಿ' ಎನ್ನುತ್ತಾನೆ. 1980ರ ಮಧ್ಯದ ಕರಾವಳಿ ಹಾಗು ಭಾರತದಲ್ಲಿ 'ಹಿಂದುತ್ವ ರಾಜಕೀಯ', ಅಂತಹ 'ನಿಷ್ಕ್ರಿಯ ಕ್ರಾಂತಿ'ಯನ್ನು ಸಾಧಿಸಿತು ಎನ್ನುವುದು ನನ್ನ ಅರಿವು.

ಇನ್ನು ಕರಾವಳಿಯಲ್ಲಿ ಈ 'ನಿಷ್ಕ್ರಿಯ ಕ್ರಾಂತಿ'ಯ ಪರಿಣಾಮ ಹೆಚ್ಚು ಪ್ರಭಾವಶಾಲಿಯಾಗಲು ಕಾರಣವೇನು? ಎನ್ನುವುದಕ್ಕೆ ಹಲವು ವಿದ್ವಾಂಸರು ಹಲವು ಕಾರಣಗಳನ್ನು ನೀಡುತ್ತಾರೆ. ಎಲ್ಲರ ನಿರೂಪಣೆಯಲ್ಲಿ ಸಾಮಾನ್ಯವಾಗಿರುವ ಅಂಶವೆಂದರೆ: ಕರಾವಳಿಯಲ್ಲಿ ಮುಸಲ್ಮಾನರ ಸಂಖ್ಯೆ ದೇಶದ ಸರಾಸರಿಗಿಂತ ಹೆಚ್ಚಿರದಿದ್ದರೂ, 'ಹಿಂದು'ಗಳಿಗೆ ಸಮನಾಗಿರದಿದ್ದರೂ, ಸಾಮಾಜಿಕ ಜೀವನದಲ್ಲಿ ಎದ್ದು ಕಾಣುವಷ್ಟಿದೆ; ಸಾಮಾಜಿಕ ಬದುಕಿನ ಎಲ್ಲಾ ವಲಯಗಳಲ್ಲೂ ಮುಸಲ್ಮಾನರ ಉಪಸ್ಥಿತಿ ಇದೆ; ನಿತ್ಯದ ಬದುಕಿನ ವ್ಯವಹಾರ ಮುಸಲ್ಮಾನರ ಮುಖ ಕಾಣದೇ ನಡೆಯದು. ಲೌಕಿಕ ಬದುಕಿನಲ್ಲಿ ಇಷ್ಟು ಹಾಸುಹೊಕ್ಕಾಗಿರುವ ಮುಸಲ್ಮಾನರ ಬದುಕು, ಸಹಬಾಳ್ವೆಯ ಸೋದಾಹರಣ ನಿರೂಪಣೆಗೆ ಒದಗಿದಂತೆಯೇ, ಶತ್ರುತ್ವ ಸ್ಥಾಪನೆಯ ನಿರೂಪಣೆಗೂ ಒದಗಿ ಬರುವುದು ವಿಲಕ್ಷಣವಾದರೂ ವಾಸ್ತವ!

ಈ ಸಾಮಾನ್ಯ ಅರಿವನ್ನು ಆಧರಿಸಿ ಕೆಲವು ವಾದಗಳನ್ನು ಕಟ್ಟಲಾಗಿದೆ: (1) ಲೌಕಿಕ ವ್ಯಾಪಾರದಲ್ಲಿ ಪ್ರತಿಸ್ಪರ್ಧಿಗಳಾಗಿರುವ ಮುಸಲ್ಮಾನರನ್ನು ಬಗ್ಗುಬಡಿಯುವ ವ್ಯಾಪಾರಿ ಹಿತಾಸಕ್ತಿ (2) ಮುಸಲ್ಮಾನರು, ಕೊಲ್ಲಿ ರಾಷ್ಟ್ರಗಳ ಔದ್ಯೋಗಿಕ ವಾತಾವರಣದಲ್ಲಿ ಹೆಚ್ಚು ಸಂಪತ್ತನ್ನು ಗಳಿಸುವವರಾಗಿದ್ದು, ಹಾಗೆ ಗಳಿಸಿದ ಸಂಪತ್ತನ್ನು ಕರಾವಳಿಯ ಊರುಗಳಿಗೆ ತಂದು ಮೆರೆಸುವುದರಿಂದ, ಸಾಧರಣ ಸಂಪನ್ಮೂಲದ ಹಿಂದುಗಳಿಗೆ ಕಣ್ಣುರಿಯಾಗುವ ಸಹಜ ಆಸ್ತಿ ಹಿತಾಸಕ್ತಿ (3) ಕರಾವಳಿಯ ಮೀನುಗಾರಿಕೆ ಉದ್ಯಮದಲ್ಲಿ, ಸಮುದ್ರದಿಂದ ಮೀನು ಮೊಗೆದು ತರುವವರು 'ಹಿಂದು' ಗಂಡಸರು; ಮೀನನ್ನು ಮಾರುಕಟ್ಟೆಯಲ್ಲಿ ಮಾರಾಟಕ್ಕೆ ತರುವವರು 'ಹಿಂದು' ಹೆಂಗಸರು; ದಲ್ಲಾಳಿಗಳಾಗಿ ಸಗಟು ವ್ಯಾಪಾರ ಮಾಡಿ ಬಿಡಿ ಮಾರಾಟ ಮಾಡುವವರು ಮುಸಲ್ಮಾನ ಗಂಡಸರು. ಈ ಹೆಣಿಗೆಯಲ್ಲಿ ಮುಸಲ್ಮಾನ ಗಂಡಸರು, 'ಹಿಂದು' ಹೆಂಗಸರ ದೈನಂದಿನ ಮುಖಾಮುಖಿಯ ಸಲುಗೆಯ ಬಗ್ಗೆ, 'ಹಿಂದು' ಗಂಡಸರು ಹೊಂದಿರುವ ಲೈಂಗಿಕ ಮತ್ಸರದ ಸಂದೇಹದ ಮಾನಸಿಕ ಕಾರಣ.

ಸಮಸ್ಯೆಎಂದರೆ, ಈ ವಾದಗಳನ್ನು ವಾಸ್ತವಿಕವೆಂದು ಸಾಬೀತು ಮಾಡುವ ಪುರಾವೆಗಳಿಲ್ಲದಿರುವುದು. ಜೊತೆಗೆ ಈ ವಾದಗಳನ್ನು ಒಡೆಯುವ ಜನಾನುರಾಗಿ ಸಾಮಾಜಿಕ ಆಚರಣೆಗಳೂ, ರಾಜಕೀಯ ಜಾಗೃತಿಗಳ ಗೈರು ಹಾಜರಿ. 'ಹಿಂದುತ್ವ ವಾದಿ' ರಾಜಕೀಯ ಇವುಗಳನ್ನೆಲ್ಲವನ್ನೂ ತನ್ನ ಉದ್ದೇಶಿತ ಚರಿತ್ರೆಯ ನಿರೂಪಣೆಗೆ ಸಫಲವಾಗಿ ಬಳಸಿಕೊಂಡಿದೆ; ಆ ಕಲ್ಪಿತ ನಿರೂಪಣೆಯನ್ನು ಮನೆ ಮನೆಗಳಿಗೂ ಹಂಚುವ ಕಾರ್ಯಕರ್ತರ ದೊಡ್ಡ ಪಡೆಯನ್ನು ಕಟ್ಟಿದೆ; ಜನರ ಬುದ್ಧಿಭಾವಗಳಲ್ಲಿ ಶತ್ರುತ್ವದ ಬೀಜ ಬಿತ್ತುವಲ್ಲಿ ಸಫಲವಾಗಿದೆ.

ಐದತ್ತು ವರ್ಷಗಳಲ್ಲಿ 'ಹಿಂದುತ್ವವಾದಿ ರಾಜಕೀಯ' ಇಷ್ಟು ಶಕ್ತಿ ಪಡೆಯಿತೇ? ಖಂಡಿತ ಇಲ್ಲ. ಕರಾವಳಿಯಲ್ಲಿ, ಆರೆಸ್ಸೆಸ್ 1925ರಿಂದಲೂ ತನ್ನ ಸಂಘಟನಾ ಜಾಲವನ್ನು ಕಟ್ಟುತ್ತಲಿದೆ. ಸಾಮಾಜಿಕ ಜೀವನದ ಸಾಮಾನ್ಯ ಅವಕಾಶಗಳಲ್ಲೆಲ್ಲಾ– ವಿದ್ಯಾಸಂಸ್ಥೆಗಳು, ಸಹಕಾರಿ ಕ್ಷೇತ್ರ, ಸಮಾಜಸೇವ ಘಟಕಗಳು, ಧಾರ್ಮಿಕ ಕೇಂದ್ರಗಳು, ಜಾತಿ ಸಂಘಟನೆಗಳು–ತನ್ನ ಇರುವಿಕೆಯನ್ನು ಭದ್ರವಾಗಿ ಹಬ್ಬಿಸಿದೆ. ಸಾಮಾಜಿಕ ವಲಯದ ಬಹಳಷ್ಟು ಕ್ಷೇತ್ರಗಳಲ್ಲಿ ತನ್ನ ಯಜಮಾನಿಕೆಯನ್ನು ಬಹಳ

ಪುಟ 14 ಕ್ಕೆ



ಡಾ. ಕೆ. ರಾಜೇಂದ್ರ ಉಡುಪ

1. ಕಾರಣಗಳು, ಇಲ್ಲೇ ಏಕೆ?

ಕರಾವಳಿಯ ದ.ಕ. (ಕೂಡು) ಕೋಮುವಾದೀಕರಣ ದೇಶ/ರಾಜ್ಯದ ಕೋಮುವಾದೀರಣದ ಭಾಗವೇ ಆಗಿದೆ. ಹಾಗಿದ್ದರೂ ಕರಾವಳಿಯ ಕೋಮುವಾದೀಕರಣಕ್ಕೆ ಕೆಲವು ವಿಶಿಷ್ಟತೆಗಳಿವೆ. ಈ ಕೂಡು ಜಿಲ್ಲೆಯ ಸಾಮಾಜಿಕ ಚರಿತ್ರೆ ತುಂಬಾ ಸಂಕೀರ್ಣವಾಗಿದೆ. ಈ ಭೂಪ್ರದೇಶದಲ್ಲಿ ಬೌದ್ಧ, ಜೈನ, ಮುಸ್ಲಿಂ ಹಾಗೂ ಕ್ರೈಸ್ತಧರ್ಮಗಳು ಇಲ್ಲಿ ಪೂರ್ತಿ 'ಹಿಂದೂ' ಕರಣಗೊಳ್ಳದ ಜನಾಂಗಗಳೊಡನೆ ಮೆಳೈಸಿದ್ದರಿಂದ ಇದು ಕೋಮು ಸೌಹಾರ್ದದ ನೆಲೆ ಆಗಿತ್ತು. ಅದರೆ ಇಲ್ಲಿ ಪ್ರಬಲ ಉಳಿಗಮಾನ್ಯ ಪದ್ಧತಿಯ ಪ್ರತೀಕಗಳಾದ ಧರ್ಮಸ್ಥಳ, ಉಡುಪಿ, ಸುಬ್ರಹ್ಮಣ್ಯ, ಕೊಲ್ಲೂರಿನಂತಹ ಪ್ರತಿಗಾಮಿ ಕೇಂದ್ರಗಳಿದ್ದವು. ಇವುಗಳೊಂದಿಗೆ ಈಗ ಆಧುನಿಕ ಬಂಡವಾಳಶಾಹಿ ಶಕ್ತಿಯ ಪ್ರತೀಕವಾದ ಮಣಿಪಾಲದಂತಹ ಅನೇಕ ಪ್ರತಿಗಾಮಿ ಕೇಂದ್ರಗಳು ಸೇರಿಕೊಂಡಿವೆ. ಸ್ವಾತಂತ್ರ್ಯ ನಂತರ ರಾಜಕೀಯವಾಗಿ, ಭೂಮಾಲಕ ಕಾಂಗ್ರೆಸ್ ಪಕ್ಷಕ್ಕೆ ರೈತಾಪಿ ಜನರ ಸಮಾಜವಾದಿ (ಪಿಎಸ್‌ಪಿ) ಪಕ್ಷ ಎದುರಾಳಿಯಾಯಿತು. ಕಮ್ಯೂನಿಸ್ಟ್ ಪಕ್ಷ ಸಣ್ಣದಿದ್ದರೂ ಅದರ ಸೈದ್ಧಾಂತಿಕ ಪ್ರಭಾವ ಜನ ಸಾಮಾನ್ಯರ ಮೇಲೆ ಸಾಕಷ್ಟು ಇದ್ದಿತ್ತು. ಭೂಮಸೂದೆ ಬರುವ ಸಂದರ್ಭದಲ್ಲಿ ವರ್ಗ ಹೋರಾಟ ತೀಕ್ಷ್ಣ ರೂಪ ಪಡೆಯಿತು. ರಾಜಕೀಯವಾಗಿ ಇದರ ಲಾಭ ದೇವರಾಜ ಅರಸು ನೇತೃತ್ವದ ಕಾಂಗ್ರೆಸಿಗೆ ಹೋಯಿತು. ಆದರೂ, ರೈತ ಕಾರ್ಮಿಕರಲ್ಲಿ ಬಂದ ಹೊಸ ಪ್ರಜ್ಞೆಯಿಂದ ಈವರೆಗೆ ಅಧಿಕಾರದಲ್ಲಿದ್ದ ವರ್ಗ/ಜಾತಿಗಳು ದಂಗಾದವು. ಭೂಮಸೂದೆಯಿಂದ ಶಕ್ತಿ ಕುಂದಿಸಿಕೊಂಡ ಈ ವರ್ಗ ತನ್ನನ್ನು ತಾನೇ ವ್ಯಾಪಾರಿ ಆಗಿಯೋ ಅಥವ ಅರೆಬರೆ ಬಂಡವಾಳ ಶಾಹಿಯಾಗಿಯೇ ರೂಪಿಸಿಕೊಂಡಿತ್ತು. ಈ ಪ್ರತಿಗಾಮಿ ವರ್ಗಕ್ಕೆ ತುರ್ತಾಗಿ ಒಂದು ತಾತ್ವಿಕ ನೆಲೆಬೇಕಿತ್ತು. ಇವರ ಅವಶ್ಯಕತೆಗೆ ಆರ್‌ಎಸ್‌ಎಸ್ ನಂತಹ ಸಂಸ್ಥೆಗಳು, ಕೋಮುರಾಜಕೀಯದ ಬಿಜೆಪಿ ಪಕ್ಷ ಸ್ವಾಭಾವಿಕ ನೆಲೆಗಳಾದವು.

ಇದಕ್ಕೆ ಪೂರಕವಾಗಿ ಬೇರೆ ಸಾಮಾಜಿಕ ಹಾಗೂ ಸಾಂಸ್ಕೃತಿಕ ವಿದ್ಯಮಾನಗಳು ನಡೆದವು. ಭೂಮಸೂದೆಯಿಂದ ರೈತಾಪಿ ಹಾಗೂ ದಲಿತವರ್ಗಗಳು ಉಸಿರಾಡುವಷ್ಟು ಅನುಕೂಲಸ್ಥರಾದರೂ, ಜಾತಿ ಸಮಾನತೆ ಅವರಿಗೆ ಗಗನ ಕುಸುಮವಾಗಿತ್ತು. ಕೆಳಜಾತಿಯವರೆಂಬ ಅವಮಾನದಿಂದ ತಪ್ಪಿಸಿಕೊಳ್ಳಲು ಅವರು ಬೇರೆ ಧರ್ಮಕ್ಕೆ ಮತಾಂತರ ಹೊಂದಬೇಕು ಇಲ್ಲವೇ, ತಮ್ಮ ಜಾತಿಯನ್ನು ಮೇಲ್‌ಸ್ತರಕ್ಕೆ ಒಯ್ಯಬೇಕು ಅಥವಾ ತಮ್ಮ ಜಾತಿಯ ಗುರುತಿನಿಂದ ಹೊರ ಬಂದು ತಮ್ಮನ್ನು ಹಿಂದೂ ಧರ್ಮದಿಂದ ಗುರುತಿಸಿಕೊಳ್ಳಬೇಕು. ಇವುಗಳಲ್ಲಿ ಕೊನೆಯ ಎರಡು ಪ್ರಕ್ರಿಯೆಗಳು ಧಾರಾಳವಾಗಿ ನಡೆದವು. ದೈವ, ಭೂತಗಳೆಲ್ಲ ಬ್ರಹ್ಮಕಲಶ ಮಾಡಿಸಿಕೊಂಡು ಉನ್ನತ ಮಟ್ಟಕ್ಕೇರಿದವು. ಪಿಲಿಚಂಡಿ ಭೂತ ಪಿಲಿಚಂಡೇಶ್ವರ ಆಯಿತು. ಕೆಲವು ಭೂತಗಳಿಗೆ ಕೊಡುತ್ತಿದ್ದ ಕೋಳಿ ಬಲಿ ರದ್ದಾಯಿತು. ಎಲ್ಲಾ ಭೂತಗಳು ಆರ್ಥಿಕವಾಗಿ ಉದ್ದಾರವಾದವು. ಇದಕ್ಕೆ ಮುಂಬೈ/ಕೊಲ್ಲಿದೇಶಗಳಿಂದ ಅನುಮಾನಾಸ್ಪದ ರೀತಿಯಲ್ಲಿ ಗಳಿಸಿದ ಹಣದ ಹೊಳೆ ಹರಿಯಿತು. ಕೆಲವು ಕೆಳಜಾತಿಗಳು ಬ್ರಾಹ್ಮಣ ಕರ್ಮಗಳನ್ನು ಅನುಸರಿಸಿದವು ಹಾಗೂ ತಮ್ಮ ಜಾತಿಯ ಮುಂದೆ ಬ್ರಾಹ್ಮಣ ಸೂಚಕ ಪದಗಳನ್ನು ಬಳಸಿದರು. ಕೆಲವು ಜಾತಿಗಳು ಮಠಗಳನ್ನು ಕಟ್ಟಿಕೊಂಡು ಮಠಾಧೀಶರನ್ನು ಪೋಷಿಸಿದವು. ಕೆಳಜಾತಿಯ ಜನ ತಮ್ಮನ್ನು ಪೂಜಾರಿ, ಮೊಗವೀರ ಎಂದು ಗುರುತಿಸಿಕೊಳ್ಳುವುದಕ್ಕಿಂತ ತನ್ನನ್ನು ಹಿಂದು ಎಂದು ಗುರುತಿಸಿಕೊಳ್ಳಲು ಇಷ್ಟಪಟ್ಟರು. ಇವುಗಳಿಂದ ಇವರು ಕೆಳಜಾತಿಯ ಅವಮಾನದಿಂದ ಹೊರಬರಹುದೆಂದು ಅಂದಾಜಿಸಿದರು. ಈ ಎಲ್ಲಾ ಪ್ರಕ್ರಿಯೆಗಳನ್ನು ಪ್ರತೀಗಾಮಿ ವರ್ಗ, ಅವರ ಹಿಡಿತದಲ್ಲಿರುವ ಧಾರ್ಮಿಕ ಸಂಸ್ಥೆ ಮತ್ತು ಕೋಮುವಾದೀ ರಾಜಕೀಯ ಪಕ್ಷ ಪೋಷಿಸುತ್ತಲೇ ಬಂತು ಮತ್ತು ಅವರೊಂದಿಗೆ ರಾಜಕೀಯ ಸಖ್ಯ ಬೆಳೆಯಿಸಿಕೊಂಡಿತು. ಇದರಿಂದಾಗಿ ಎಡಪಂಥಿಯ ತತ್ವಗಳು ಜನರಿಂದ ದೂರ ಉಳಿಯಿತು.

ಇದೇ ಕಾಲದಲ್ಲಿ ಮುಂಬೈ, ಪೂನಾದಂತಹ ಪಟ್ಟಣಗಳಲ್ಲಿ ಎಡಪಂಥೀಯ ಶಕ್ತಿಕುಂದಿ ಬಲಪಂಥೀಯ ಕೋಮುವಾದಿ ಶಕ್ತಿಗಳು ಬೆಳೆಯುತ್ತಿದ್ದವು. ಈ ಜಿಲ್ಲೆಗೆ ಮುಂಬೈ ನಗರದೊಂದಿಗೆ ನಿಕಟ ಸಂಪರ್ಕ ಇರುವುದರಿಂದ ಕೆಲವು ಮೌಢ್ಯಗಳು, ಪ್ರತಿಗಾಮಿ ಕೇಸರಿ ತತ್ವಗಳು ಅಲ್ಲಿಂದ ಆಮದಾದವು.

60 ರ ದಶಕದಲ್ಲಿ ಆರ್‌ಎಸ್‌ಎಸ್ ಕೇವಲ ಗೌಡಸಾರಸ್ವತ (ಮುಖ್ಯವಾಗಿ ವ್ಯಾಪಾರೀವರ್ಗ) ಹವ್ಯಕ (ಲಾಭದಾಯಕ, ಅಡಿಕೆ ಕೃಷಿಕರು) ಮತ್ತು ಇತರ ಬ್ರಾಹ್ಮಣರ ಸ್ವತ್ತಾಗಿತ್ತು. ಇವರಿಗೆ ಕೆಳಜಾತಿಯವರ ಸಾಮಾಜಿಕ ಕೊಂಡಿ ಇಲ್ಲದೆ

ಪುಟ 14 ಕ್ಕೆ

ಉಡುಪಿ ಅಭಿವೃದ್ಧಿ ಹೊಂದಿರುವ ಜಿಲ್ಲೆಯೇ?

– ವಸಂತರಾಜ ಎನ್.ಕೆ.



ಉಡುಪಿ ಕರ್ನಾಟಕದ ಅಭಿವೃದ್ಧ ಜಿಲ್ಲೆಗಳಲ್ಲಿ ಒಂದು ಎಂದು ಹೆಸರಾಗಿದೆ. ವಿಶ್ವಸಂಸ್ಥೆ ಇದಕ್ಕಾಗಿ ರೂಪಿಸಿದ ಮಾನವ ಅಭಿವೃದ್ಧಿ ಸೂಚಕಗಳನ್ನು ಆಧಾರವಾಗಿ ತೆಗೆದು-ಕೊಂಡು 'ಇದು ನಿಜವೇ?' ಎಂದು ಇಲ್ಲಿ ಪರಿಶೀಲಿಸಲಾಗಿದೆ. ಇದಕ್ಕೆ ಕರ್ನಾಟಕ ಸರಕಾರ 2014ರಲ್ಲಿ ಪ್ರಕಟಿಸಿದ 'ಜಿಲ್ಲಾ ಮಾನವ ಅಭಿವೃದ್ಧಿ ವರದಿ'ಯನ್ನು ಆಧಾರವಾಗಿ ತೆಗೆದುಕೊಳ್ಳಲಾಗಿದೆ. ಈ ವರದಿ 2011 ಜನಗಣತಿ, ಕೆಲವು ಆ ಮೇಲಿನ ಮಾಹಿತಿ, ಕೆಲವು ವಿಶೇಷ ಸಮೀಕ್ಷೆ/ವರದಿಗಳ ಮೇಲೆ ಆಧಾರಿತವಾಗಿದೆ.

ಈ ವರದಿಯಲ್ಲಿ ಉಡುಪಿ ಜಿಲ್ಲೆಯ 7 ಅಭಿವೃದ್ಧಿ ಸೂಚಕಗಳನ್ನು ಕೊಡಲಾಗಿದೆ. ಇವುಗಳಲ್ಲಿ 5 ಸೂಚಕಗಳನ್ನು ಇಲ್ಲಿ ಪರಿಶೀಲಿಸಲಾಗುತ್ತದೆ.


ಮಾನವ ಅಭಿವೃದ್ಧಿ ಸೂಚಕ (ಎಚ್.ಡಿ.ಐ.)

ಇದು ಮೂರು (ಶಿಕ್ಷಣ, ಆರೋಗ್ಯ, ಜೀವನ ಮಟ್ಟ) ಆಯಾಮಗಳ ಮೇಲೆ ಅವಲಂಬಿಸಿದೆ. ಆರೋಗ್ಯ ಸೂಚಕ ತಾಯಂದಿರ ಮರಣ ಪ್ರಮಾಣ, 1–5 ಮಕ್ಕಳ ಆರೋಗ್ಯ ಪ್ರಮಾಣದ ಮೇಲೆ ಆಧಾರಿತವಾಗಿರುತ್ತದೆ. ಶಿಕ್ಷಣದ ಸೂಚಕ ಸಾಕ್ಷರತೆಯ ಪ್ರಮಾಣ ಮತ್ತು ಶಾಲೆಯಲ್ಲಿ ದಾಖಲಾತಿಯ ಮೇಲೆ ಅವಲಂಬಿಸಿದೆ. ಜೀವನಮಟ್ಟ ಸೂಚಕ ತಲಾ ಆದಾಯದ ಜತೆಗೆ ಅಡುಗೆ ಅನಿಲ, ನೀರು, ವಿದ್ಯುತ್, ಪಕ್ಕಾ ಮನೆ, ಶೌಚಾಲಯಗಳ ಲಭ್ಯತೆ ಹಾಗೂ ಕೃಷಿಯೇತರ ಕೆಲಸಗಾರರ ಪ್ರಮಾಣಗಳಿಂದ ಲೆಕ್ಕ ಹಾಕಲಾಗುತ್ತದೆ. ತಾಲೂಕುವಾರು, ಆಯಾಮವಾರು ಸೂಚಕಗಳನ್ನು ಕೋಷ್ಟಕ 3.3ದಲ್ಲಿ ಕೊಡಲಾಗಿದೆ.

ಎಚ್.ಡಿ.ಐ. 0.750ರಿಂದ 1.000ವರೆಗೆ ಇದ್ದರೆ 'ಅತ್ಯುತ್ತಮ' ಮತ್ತು 0.500ರಿಂದ 0.750ವರೆಗೆ ಇದ್ದರೆ 'ಉತ್ತಮ' ಎಂದು ಪರಿಗಣಿಸಲಾಗುತ್ತದೆ. 0.300ರಿಂದ 0.500ವರೆಗೆ ಇದ್ದರೆ 'ಸಾಮಾನ್ಯ' ಎಂದಾಗುತ್ತದೆ. 0.300ಕ್ಕಿಂತ ಕಡಿಮೆ ಇದ್ದರೆ 'ಕಳಪೆ' ಎಂದಾಗುತ್ತದೆ.

ಈ ರೀತಿ ಲೆಕ್ಕ ಹಾಕಿದ ಎಚ್.ಡಿ.ಐ.ಯಲ್ಲಿ ಉಡುಪಿ 0.674 ಪಡೆದಿದೆ. 1991, 2001, 2005, 2008ರ ಸಮೀಕ್ಷೆಗಳಲ್ಲಿ 'ಅತ್ಯುತ್ತಮ' ಮಟ್ಟದಲ್ಲಿ ಇತ್ತು. ಜಿಲ್ಲೆಯ ಎಚ್.ಡಿ.ಐ ಸೂಚಕ 'ಅತ್ಯುತ್ತಮ" ಶಿಕ್ಷಣದ ಸೂಚಕ(0.898)ದಿಂದಾಗಿ ಸಾಕಷ್ಟು ಮೇಲೆತ್ತಲ್ಪಟ್ಟಿದೆ. ಆರೋಗ್ಯ 'ಸಾಮಾನ್ಯ' (0.300–0.500) ಮಟ್ಟದಲ್ಲಿದೆ. ಆರೋಗ್ಯ ಹಿಂದಿನ ದಶಕಗಳ 'ಉತ್ತಮ' ಮಟ್ಟದಿಂದ ಕುಸಿದಿದೆ ಎಂಬುದು ಗಂಭೀರ ಬೆಳವಣಿಗೆ. ಜೀವನಮಟ್ಟ (0.683) 'ಉತ್ತಮ' ಮಟ್ಟದಲ್ಲಿ ಮುಂದುವರೆದಿದೆ. ಇದೇ ರೀತಿ ತಾಲೂಕುವಾರು ಅಸಮಾನತೆಯು ಗಂಭೀರವಾಗಿದೆ. ಉದಾಹರಣೆಗೆ ಜೀವನಮಟ್ಟದಲ್ಲಿ ಕುಂದಾಪುರ (0.322) ಮತ್ತು ಉಡುಪಿ (0.931) ತಾಲೂಕುಗಳ ನಡುವಿನ ಅಂತರ ಗಂಭೀರವಾದದ್ದು. ಉಡುಪಿ ಜೀವನಮಟ್ಟ, ಶಿಕ್ಷಣಗಳಲ್ಲಿ ಹಾಗೂ ಕುಂದಾಪುರ ಆರೋಗ್ಯದಲ್ಲಿ 1ನೇ ಸ್ಥಾನ ಪಡೆದಿದೆ. ಕಾರ್ಕಳ ಮೂರರಲ್ಲೂ ಎರಡನೇ ಸ್ಥಾನ ಪಡೆದಿದೆ.

> ಈ ಸೂಚಕವನ್ನು ಎತ್ತರಿಸಿದ ಜಿಲ್ಲೆಯ ಶಿಕ್ಷಣದ ಸಾಧನೆಗಳಿಗೆ ಶಾಲಾ ವ್ಯವಸ್ಥೆಯಲ್ಲಿ ಹೆಚ್ಚುತ್ತಿರುವ ಖಾಸಗೀಕರಣ/ವ್ಯಾಪಾರೀಕರಣ, ಜಿಲ್ಲೆಯ ಹೆಮ್ಮೆಯಾಗಿದ್ದ ಸಾರ್ವತ್ರಿಕ ಉಚಿತ ಶಿಕ್ಷಣ ವ್ಯವಸ್ಥೆಗೆ ಮತ್ತು ಸರಕಾರಿ ಶಾಲೆಗಳ ಗುಣಮಟ್ಟಕ್ಕೆ ಅಪಾಯಗಳು ಕಾದಿವೆ.



ASSEMBLY AT VALAKAD HIGH SCHOOL, UDUPI

ಕೋಷ್ಟಕ 3.3

ಎಚ್‌ಡಿಐ ಮತ್ತು ಅದರ ಸಂಯೋಜನೆಯ ತಾಲೂಕುವಾರು ತುಲನೆ–2012

ತಾಲೂಕು	ಜೀವನಮಟ್ಟ		ಆರೋಗ್ಯ		ಶಿಕ್ಷಣ		ಎಚ್‌ಡಿಐ ಶ್ರೇಯಾಂಕ	
	ಸೂಚಿ	ಶ್ರೇಯಾಂಕ	ಸೂಚಿ	ಶ್ರೇಯಾಂಕ	ಸೂಚಿ	ಶ್ರೇಯಾಂಕ	ಸೂಚಿ	ಶ್ರೇಯಾಂಕ
ಕಾರ್ಕಳ	0.474	2	0.534	2	0.876	2	0.606	2
ಕುಂದಾಪುರ	0.322	3	0.835	1	0.659	3	0.562	3
ಉಡುಪಿ	0.931	1	0.516	3	1.000	1	0.783	1
ಜಿಲ್ಲೆ	**0.683**		**0.499**		**0.898**		**0.674**	

ಲಿಂಗ ಅಸಮಾನತೆ ಸೂಚಕ

ಇದು ಸಹ ಮೂರು ಆಯಾಮಗಳ (ಪ್ರಜನನ ಆರೋಗ್ಯ, ಸಬಲೀಕರಣ ಮತ್ತು ಕೆಲಸ) ಮೇಲೆ ಆಧಾರಿತವಾಗಿದೆ. ಪ್ರಜನನ ಆರೋಗ್ಯವನ್ನು ತಾಯಂದಿರ ಮರಣ, ಸಾಂಸ್ಥಿಕ ಹೆರಿಗೆ ಮತ್ತು ರಕ್ತಹೀಣತೆ ಇರುವ ಗರ್ಭಿಣಿಯರ ಪ್ರಮಾಣಗಳಿಂದ ಅಳೆಯಲಾಗುತ್ತದೆ. ಮಕ್ಕಳ ಲಿಂಗಾನುಪಾತ ಹಾಗೂ, ರಾಜಕೀಯದಲ್ಲಿ ಪಾಲುಗೊಳ್ಳುವಿಕೆ ಮತ್ತು ಸಾಕ್ಷರತಾ ಮಟ್ಟದಲ್ಲಿ ಪುರುಷ–ಮಹಿಳೆಯರಲ್ಲಿ ವ್ಯತ್ಯಾಸಗಳು – ಸಬಲೀಕರಣ ಸೂಚಕವನ್ನು ನಿರ್ಧರಿಸುತ್ತದೆ. ಕೆಲಸದ ಸೂಚಕವನ್ನು (ಕೆಲಸದಲ್ಲಿ ಪಾಲುಗೊಳ್ಳುವಿಕೆಯಲ್ಲಿ ವ್ಯತ್ಯಾಸ, ಕೃಷಿಯೇತರ ಮತ್ತು ಕೃಷಿ ಕೂಲಿಯ ಪ್ರಮಾಣ) ಗಳ ಮೂಲಕ ಅಳೆಯಲಾಗುತ್ತದೆ. ಉಡುಪಿಯ ಲಿಂಗ ಅಸಮಾನತಾ ಸೂಚಕ (0.034) 'ಅತ್ಯುತ್ತಮ' ವಾಗಿದ್ದು, ತಾಲೂಕು ಮಟ್ಟದ ಸೂಚಕಗಳೂ 'ಅತ್ಯುತ್ತಮ' ಮಟ್ಟದಲ್ಲಿವೆ. ತಾಲೂಕುಗಳ ನಡುವಿನ ಅಂತರ ಸಹ ಕಡಿಮೆ ಇದೆ. ಲಿಂಗ ಅಸಮಾನತೆ ಈಗ 'ಅತ್ಯುತ್ತಮ'ವಾಗಿದ್ದರೂ, ಬೀಡಿ ಉದ್ಯಮ ಮುಚ್ಚುತ್ತಿದ್ದು, ಕೃಷಿ ಮತ್ತು ಕೃಷಿಯಲ್ಲಿ ಮಹಿಳೆಯರ ಪಾಲುಗೊಳ್ಳುವಿಕೆ ಇಳಿಯುತ್ತಿದ್ದು, ಮಹಿಳೆಯರ ಮೇಲೆ ಹಿಂಸಾಚಾರ ಮತ್ತು ಸ್ವಾತಂತ್ರ್ಯಕ್ಕೆ ಅಡೆತಡೆಗಳು ಹೆಚ್ಚುತ್ತಿದ್ದು ಮುಂದೆ ಲಿಂಗ ಅಸಮಾನತೆ ಹೆಚ್ಚುವ ಅಪಾಯ ಇದೆ.

> ಬೀಡಿ ಉದ್ಯಮ ಮುಚ್ಚುತ್ತಿದ್ದು, ಕೃಷಿ ಮತ್ತು ಕೃಷಿಯಲ್ಲಿ ಮಹಿಳೆಯರ ಪಾಲುಗೊಳ್ಳುವಿಕೆ ಇಳಿಯುತ್ತಿದ್ದು, ಮಹಿಳೆಯರ ಮೇಲೆ ಹಿಂಸಾಚಾರ ಮತ್ತು ಸ್ವಾತಂತ್ರ್ಯಕ್ಕೆ ಅಡೆತಡೆಗಳು ಹೆಚ್ಚುತ್ತಿದ್ದು ಮುಂದೆ ಲಿಂಗ ಅಸಮಾನತೆ ಹೆಚ್ಚುವ ಅಪಾಯ ಇದೆ.



Koraga Drum Beating

ಉಡುಪಿಯ ಅಭಿವೃದ್ಧಿಗೆ ತೊಡಕುಗಳು

ಉಡುಪಿಯ ಮಾನವ ಅಭಿವೃದ್ಧಿ ಮಟ್ಟ 'ಉತ್ತಮ'ದಿಂದ 'ಅತ್ಯುತ್ತಮ'ಕ್ಕೆ ಹೋಗುವ ಸಾಧ್ಯತೆ ಇದ್ದ ಹಾಗೆ, 'ಸಾಮಾನ್ಯ'ಕ್ಕೆ ಕುಸಿಯುವ ಅಪಾಯವೂ ಇದೆ. ಈ ಸೂಚಕವನ್ನು ಎತ್ತರಿಸಿದ ಶಿಕ್ಷಣದ ಸಾಧನೆಗಳಿಗೆ – ಶಾಲಾ ವ್ಯವಸ್ಥೆಯಲ್ಲಿ ಹೆಚ್ಚುತ್ತಿರುವ ಖಾಸಗೀಕರಣ/ವ್ಯಾಪಾರೀಕರಣದಿಂದ, ಜಿಲ್ಲೆಯ ಹೆಮ್ಮೆಯಾಗಿದ್ದ ಸಾರ್ವತ್ರಿಕ ಉಚಿತ ಶಿಕ್ಷಣ ವ್ಯವಸ್ಥೆಗೆ ಮತ್ತು ಸರಕಾರಿ ಶಾಲೆಗಳ ಗುಣಮಟ್ಟಕ್ಕೆ ಅಪಾಯಗಳು ಕಾದಿವೆ. 'ಮನಿಆರ್ಡರ್ ಆರ್ಥಿಕ' ಎಂದು ಹೇಳಲಾದ ಜಿಲ್ಲೆಯಲ್ಲಿ ಕೃಷಿ ಉತ್ಪಾದನೆ ಕುಸಿಯುತ್ತಿರುವುದು, ಕೈಗಾರಿಕಾ ಬೆಳವಣಿಗೆಯ ಸಾಧ್ಯತೆ ಇನ್ನೂ ದುರ್ಬಲವಾಗಿರುವುದು ಜೀವನ ಮಟ್ಟಕ್ಕೂ ಅಪಾಯ ಒಡ್ಡಬಹುದು.

> ಬಡತನ ಅತಿ ಕಡಿಮೆ ಎಂದು ಹೇಳಲಾಗಿರುವ ಜಿಲ್ಲೆಯಲ್ಲಿ ಶೇ. 46 ಬಿಪಿಎಲ್ ಕುಟುಂಬಗಳು ಇವೆ. ಕುಂದಾಪುರದಲ್ಲಿ ಬಿಪಿಎಲ್ ಕುಟುಂಬಗಳ ಪ್ರಮಾಣ ಶೇ. 59.

ಜಿಡಿಪಿಗೆ ಪ್ರಾಥಮಿಕ (ಕೃಷಿ ಇತ್ಯಾದಿ) ಕ್ಷೇತ್ರದ ಕೊಡುಗೆ 2011ರಲ್ಲಿ ಶೇ. 18ಕ್ಕೆ ಇಳಿದಿದ್ದು, ಅದರ ಮೇಲೆ ಶೆ. 72 ಗ್ರಾಮೀಣ ಜನತೆ ಅವಲಂಬಿಸಿದ್ದಾರೆ. ಜಿಲ್ಲೆಯ ಆರ್ಥಿಕದ ದ್ವಿತೀಯ ಮತ್ತು ತೃತೀಯ ಕ್ಷೇತ್ರದ ಶೇ. 82ರಷ್ಟು ಉತ್ಪಾದನೆಯ ಮೇಲೆ ಶೇ. 28ರಷ್ಟು ನಗರ ಜನತೆ ಅವಲಂಬಿಸಿದ್ದಾರೆ. ಇದು ಗ್ರಾಮ–ನಗರಗಳ ನಡುವೆ ಅಸಮಾನತೆಯನ್ನು ಹೆಚ್ಚಿಸುತ್ತಿದೆ. ಉಡುಪಿ ರಾಜ್ಯದಲ್ಲೇ ವ್ಯವಸಾಯದ ಸಾಂದ್ರತೆ ಅತಿ ಕಡಿಮೆ(1.18) ಇರುವ ಜಿಲ್ಲೆ. ಒಟ್ಟು ಉತ್ಪಾದನೆಯಲ್ಲಿ ರಾಜ್ಯದಲ್ಲಿ 10ನೇ ಸ್ಥಾನದಲ್ಲಿರುವ, ತಲಾ ಆದಾಯದಲ್ಲಿ 5ನೇ ಸ್ಥಾನದಲ್ಲಿರುವ ಜಿಲ್ಲೆಯಲ್ಲಿ ಅದನ್ನು ಹೆಚ್ಚಿಸುವ ಅವಕಾಶಗಳು ಸೀಮಿತವಾಗಿವೆ ಎಂದು ಮಾ.ಅ. ವರದಿ ಆತಂಕಿಸಿದೆ.

ಬಡತನ ಅತಿ ಕಡಿಮೆ ಎಂದು ಹೇಳಲಾಗಿರುವ ಜಿಲ್ಲೆಯಲ್ಲಿ ಶೇ. 46 ಬಿಪಿಎಲ್ ಕುಟುಂಬಗಳು ಇವೆ. ಕುಂದಾಪುರದಲ್ಲಿ ಬಿಪಿಎಲ್ ಕುಟುಂಬಗಳ ಪ್ರಮಾಣ ಶೇ. 59. ಭೂಸುಧಾರಣೆ ಪರಿಣಾಮಕಾರಿಯಾಗಿ ಜಾರಿಯಾಗಿದೆ ಎಂದು ಹೇಳುವ ಜಿಲ್ಲೆಯಲ್ಲಿ ಶೇ. 79 ರಷ್ಟು ಸಣ್ಣ (1 ಎಕರೆ ಗಿಂತ ಕಡಿಮೆ ಹಿಡುವಳಿಯ) ರೈತರು ಕೇವಲ ಶೇ. 34.5 (ವಿಸ್ತೀರ್ಣದಲ್ಲಿ) ಭೂಮಿ ಹೊಂದಿದ್ದಾರೆ. ಭೂರಹಿತ ಕುಟುಂಬಗಳ ಪ್ರಮಾಣ ಶೇ. 39. ಅಸಮಾನ ಭೂಹಂಚಿಕೆ ಈಗಲೂ ಗ್ರಾಮೀಣ ಬಡತನದ ಕಾರಣ. ಇದನ್ನು ಹೋಗಲಾಡಿಸಲು ಸಹಾಯಕವಾಗಬೇಕಿದ್ದ ರೇಗಾ ಯೋಜನೆ ಜಾರಿಯಾಗಿಲ್ಲ. 2011–12ರಲ್ಲಿ ಉದ್ಯೋಗ ಬೇಡಿಕೆ ಇಟ್ಟ 4730 ಕುಟುಂಬಗಳಲ್ಲಿ 100ದಿನಗಳ ಉದ್ಯೋಗ ಪಡೆದ ಕುಟುಂಬಗಳ ಸಂಖ್ಯೆ ಕೇವಲ 134.



ಮಕ್ಕಳ ಬೆಳವಣಿಗೆ ಸೂಚಕ

ಮಕ್ಕಳ ಆರೋಗ್ಯ (ಶಿಶು ಮರಣ ಪ್ರಮಾಣ), ಪೋಷಣೆ (ಕುಪೋಷಣೆಯುಳ್ಳ, ಕಡಿಮೆ ತೂಕದ ಮಕ್ಕಳ ಪ್ರಮಾಣ) ಮತ್ತು ಶಿಕ್ಷಣ (ಶಾಲೆ ಬಿಟ್ಟ ಮಕ್ಕಳ ಪ್ರಮಾಣ) – ಗಳಿಂದ ಈ ಸೂಚಕವನ್ನು ನಿರ್ಧರಿಸಲಾಗುತ್ತದೆ. ಉಡುಪಿ ಜಿಲ್ಲೆ ಈ ಸೂಚಕ (0.674) ದಲ್ಲೂ 'ಉತ್ತಮ' ಮಟ್ಟದಲ್ಲಿದೆ. ಆದ-ರೆ ತಾಲೂಕುವಾರು ಅಂತರ (ಉಡುಪಿ – 0.863, ಕುಂದಾಪುರ – 0.545, ಕಾರ್ಕಳ –0414) ವಿಪರೀತವಾಗಿದೆ. ಕಾರ್ಕಳ 'ಸಾಮಾನ್ಯ' ಮಟ್ಟದಲ್ಲಿದೆ.

ಆಹಾರ ಭದ್ರತಾ ಸೂಚಕ

ಆಹಾರದ ಲಭ್ಯತೆ, ದೊರೆಯುವಿಕೆ ಮತ್ತು ಜೀರ್ಣಿಸಿಕೊಳ್ಳುವಿಕೆ – ಇವುಗಳಿಂದ ಈ ಸೂಚಕವನ್ನು ಅಳೆಯಲಾಗುತ್ತದೆ. ಉಡುಪಿ ಜಿಲ್ಲೆಯ ಆಹಾರ ಭದ್ರತೆ 0.549 ಇದ್ದು 'ಉತ್ತಮ'–'ಸಾಮಾನ್ಯ'ಗಳ ಅಂಚಿನಲ್ಲಿದೆ. ತಾಲೂಕುವಾರು ಅಂತರ (ಉಡುಪಿ–0.711, ಕಾರ್ಕಳ–0.624, ಕುಂದಾಪುರ–0.497) ಸಹ ವಿಪರೀತವಾಗಿದೆ. 'ದೊರೆಯುವಿಕೆ'ಯಲ್ಲಿ ಕುಂದಾಪುರ (0.264) ಮತ್ತು 'ಜೀರ್ಣಿಸಿಕೊಳ್ಳುವಿಕೆ'ಯಲ್ಲಿ ಕಾರ್ಕಳ (0.292) 'ಕಳಪೆ' ಮಟ್ಟದಲ್ಲಿವೆ.

ದಲಿತ ತಾರತಮ್ಯ ಸೂಚಕ

ಎರಡು ರೀತಿಯಲ್ಲಿ ದಲಿತರ (ಪರಿಶಿಷ್ಟ ಜಾತಿ –ಪ.ಜಾ) ಮತ್ತು ಆದಿವಾಸಿಗಳ (ಪರಿಶಿಷ್ಟ ಪಂಗಡ–ಪ.ಪಂ.) ಬಗ್ಗೆ ಜಿಲ್ಲೆಯಲ್ಲಿರುವ ತಾರತಮ್ಯವನ್ನು ವರದಿಯಲ್ಲಿ ಗ್ರಹಿಸಲಾಗಿದೆ. ಮೊದಲನೆಯದಾಗಿ ಪ.ಜಾ., ಪ.ಪಂ. ಗಳ ಮತ್ತು ಇತರರ ಮಾನವ ಅಭಿವೃದ್ಧಿ ಸೂಚಕವನ್ನು ಪ್ರತ್ಯೇಕವಾಗಿ ಲೆಕ್ಕ ಹಾಕಿ ಇರುವ ವ್ಯತ್ಯಾಸಗಳನ್ನು ದಾಖಲಿಸಿದೆ. ಉಡುಪಿಯಂತಹ ಅಭಿವೃದ್ಧ ಅಸಮಾನತೆ ಕಡಿಮೆ ಇರುವ ಜಿಲ್ಲೆಯಲ್ಲೂ ಈ ಮೂರು ಸಾಮಾಜಿಕ ಗುಂಪುಗಳ ನಡುವೆ ಮಾ.ಅ. ಸೂಚಕಗಳಲ್ಲಿರುವ ಕಂದಕ ದಂಗು ಬಡಿಸುವಂತಹದ್ದು. ಇತರರ ಮಟ್ಟ ಅತ್ಯುತ್ತಮ (0.888) ಇದ್ದರೆ, ಪರಿಶಿಷ್ಟ ಜಾತಿಯ ಸೂಚಕ ಕಳಪೆ (0.244) ಇದೆ.

ದಲಿತ ತಾರತಮ್ಯ ಸೂಚಕ ಇನ್ನೊಂದು ವಿಧಾನ. ಸಾಮಾಜಿಕ/ಸಾಂಸ್ಥಿಕ ಒಳಗೊಳ್ಳುವಿಕೆ; ತಾರತಮ್ಯದ ಭಾವನೆ, ಪ್ರತಿಭಟನೆ, ಪರಿಹಾರ; ಸಾಮಾಜಿಕ, ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಸ್ವಾತಂತ್ರ್ಯ; ಜೀವನ ಮಟ್ಟ; ಮೂಲಭೂತ ಆವಶ್ಯಕತೆಗಳ ನಿಲುಕುವಿಕೆ – ಇವುಗಳ ಮೇಲೆ ಆಧಾರಿತವಾಗಿ ಈ ಸೂಚಕವನ್ನು ಅಳೆಯಲಾಗುತ್ತದೆ. ಈ ವಿಧಾನದ ಪ್ರಕಾರ ದಲಿತ ತಾರತಮ್ಯ ಸೂಚಕ 0.215 (ಸೂಚಕ ಕಡಿಮೆ ಇದ್ದಷ್ಟು ಕಡಿಮೆ ತಾರತಮ್ಯ) ಇದ್ದು 'ಅತ್ಯುತ್ತಮ' ಎನಿಸಿಕೊಂಡಿದೆ. ಆದರೆ ಇದು ನಿಜವಾದರೆ ಮೊದಲ ವಿಧಾನದಲ್ಲಿ ಕಂಡು ಬರುವ ಅಭಿವೃದ್ಧಿಯ ಮಟ್ಟದಲ್ಲಿರುವ ಅಗಾಧ ಅಂತರ ಏಕೆ ಎಂಬ ಪ್ರಶ್ನೆಗೆ ಉತ್ತರವಿಲ್ಲ.

(ತಾಲೂಕುವಾರು ಸೂಚಕಗಳು ಪುಟ 13 ನೋಡಿ

> ಉಡುಪಿಯಂತಹ ಅಭಿವೃದ್ಧ, ಅಸಮಾನತೆ ಕಡಿಮೆ ಇರುವ ಜಿಲ್ಲೆಯಲ್ಲೂ ಸಾಮಾಜಿಕ ಗುಂಪುಗಳ ನಡುವೆ ಮಾ.ಅ. ಸೂಚಕಗಳಲ್ಲಿರುವ ಕಂದಕ ದಂಗು ಬಡಿಸುವಂತಹದ್ದು.

ವಿವಿಧ ಸಾಮಾಜಿಕ ಗುಂಪುಗಳಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕ

ಪರಿಶಿಷ್ಟ ಜಾತಿಗಳು	0.244
ಪರಿಶಿಷ್ಟ ಪಂಗಡಗಳು	0.260
ಇತರ ವಿಭಾಗಗಳು	0.888
ಎಲ್ಲಾ	0.839







ಮೀನುಗಾರರ ಮತ್ತು ಮೀನು ಕಾರ್ಮಿಕರ ಸ್ಥಿತಿ

ಕೆ.ಶಂಕರ್

ಉಡುಪಿ ಜಿಲ್ಲೆಯಲ್ಲಿ ಸುಮಾರು 98 ಕಿ.ಮೀ ಕರಾವಳಿ ತೀರವಿದ್ದು, ಕಡಲ ಮೀನುಗಾರಿಕೆಯು ಪ್ರಮುಖವಾದ ಉದ್ಯಮವಾಗಿದೆ. ಉಡುಪಿ ಜಿಲ್ಲೆ ಕರಾವಳಿ ತಾಲೂಕುಗಳಾದ ಉಡುಪಿ, ಕುಂದಾಪುರ ಹಾಗೂ ಒಳನಾಡು ತಾಲೂಕು ಕಾರ್ಕಳವನ್ನು ಒಳಗೊಂಡಿರುತ್ತದೆ. ಮೀನುಗಾರಿಕೆಯು ಪೌಷ್ಠಿಕ ಆಹಾರ ಮತ್ತು ವಿದೇಶಿ ವಿನಿಮಯದ ಒಂದು ಪ್ರಮುಖ ಸಂಪನ್ಮೂಲವಾಗಿರುವುದರಿಂದ ಉಡುಪಿ ಜಿಲ್ಲೆಯ ಆರ್ಥಿಕ ಪ್ರಗತಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ.

ಉಡುಪಿ ಜಿಲ್ಲೆಯಲ್ಲಿ ಸುಮಾರು 1.26 ಲಕ್ಷ ಮೀನುಗಾರರು ಇದ್ದು, ಅವರಲ್ಲಿ ಸುಮಾರು 70 ಸಾವಿರ ಜನರು ಮಾತ್ರ ವೃತ್ತಿಪರರಾಗಿದ್ದಾರೆ. ಪ್ರಸ್ತುತ ಜಿಲ್ಲೆಯಲ್ಲಿ ಸುಮಾರು 142 ಪರ್ಸೀನ್ ದೋಣಿಗಳು, 1426 ಟ್ರಾಲರ್ ದೋಣಿಗಳು 2,600 ಮೋಟರೀಕೃತ ದೋಣಿಗಳು ಹಾಗೂ 1856 ಯಾಂತ್ರೀಕೃತವಲ್ಲದ ನಾಡ ದೋಣಿಗಳು ಮೀನುಗಾರಿಕೆಯಲ್ಲಿ ಕಾರ್ಯನಿರತವಾಗಿದೆ.

ಉಡುಪಿ ಜಿಲ್ಲೆಯಲ್ಲಿ ಸುಮಾರು 64 ಮೀನುಗಾರಿಕಾ ಗ್ರಾಮಗಳಿದ್ದು, ಅದರಲ್ಲಿ 1.26 ಲಕ್ಷ ಮೀನುಗಾರರು ವಾಸಿಸುತ್ತಿದ್ದಾರೆ. ಅದರಲ್ಲಿ ಸುಮಾರು 50 ಸಾವಿರ ಮೀನುಗಾರರು ಪೂರ್ಣ ಕಾಲ ಹಾಗೂ 2312 ಮೀನುಗಾರರು ಭಾಗಶಃ ಮೀನುಗಾರಿಕೆ ಮತ್ತು ಮೀನು ಮಾರಾಟ ವೃತ್ತಿಯಲ್ಲಿ ನಿರತರಾಗಿರುತ್ತಾರೆ.

ಮೀನುಗಾರಿಕಾ ಕೈಗಾರಿಕೆಗೆ ಪೂರಕವಾಗಿ ಖಾಸಗಿ ಮತ್ತು ಸಹಕಾರಿ ಸಾಮ್ಯದ 60 ಮಂಜುಗಡ್ಡೆ ಸ್ಥಾವರಗಳು, 10 ಶೈತ್ಯಾಗಾರಗಳು, 6 ಘನೀಕರಣ ಘಟಕಗಳು ಕೆಲಸ ಮಾಡುತ್ತಿವೆ. 2013–14 ರಲ್ಲಿ 1.24 ಲಕ್ಷ (ಮೆ. ಟನ್) ಪ್ರಮಾಣದ ಮೀನುಗಾರಿಕೆಯಾಗಿದ್ದು, 823 ಕೋಟಿ ಮೌಲ್ಯದ್ದಾಗಿದೆ ಎಂದು ತಿಳಿದು ಬಂದಿದೆ. ರಾಜ್ಯದ ಮೀನುಗಾರಿಕೆಯ ಸುಮಾರು ಮೂರನೇ ಒಂದು ಭಾಗ ಉಡುಪಿ ಜಿಲ್ಲೆಯಲ್ಲಾಗುತ್ತದೆ.

ಪ್ರಸ್ತುತ ಉಡುಪಿ ಜಿಲ್ಲೆಯಲ್ಲಿ 47 ಮೀನುಗಾರರ ಸಹಕಾರಿ ಸಂಘಗಳಿದ್ದು, ಅವುಗಳಲ್ಲಿ 15 ಮೀನುಗಾರ ಮಹಿಳೆಯರ ಸಹಕಾರಿ ಸಂಘಗಳಿವೆ. ಇದರಲ್ಲಿ 1 ಪರಿಶಿಷ್ಠ ಜಾತಿ ಮೀನುಗಾರ ಮಹಿಳೆಯರ ಸಹಕಾರಿ ಸಂಘವೂ ಸೇರಿರುತ್ತದೆ. ಈ 47 ಮೀನುಗಾರರ ಸಹಕಾರಿ ಸಂಘಗಳಲ್ಲಿ ಒಟ್ಟು 74,527 ಸದಸ್ಯರಿದ್ದು, ಈ ಪೈಕಿ 2,353 ಸದಸ್ಯರು ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡಕ್ಕೆ ಸೇರಿದ ಮೀನುಗಾರರಾಗಿರುತ್ತಾರೆ.

ಉಡುಪಿ ಜಿಲ್ಲೆಯ ಬಂದರು ದೇಶದಲ್ಲಿರುವ ಅತೀ ದೊಡ್ಡ ಸರ್ವಋತು ಮೀನುಗಾರಿಕಾ ಬಂದರುಗಳಲ್ಲಿ ಒಂದಾಗಿದ್ದು, ಸದರಿ ಬಂದರಿನಲ್ಲಿ ಮೀನುಗಾರಿಕೆಗೆ ಅವಶ್ಯಕವಾದ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಅಲ್ಲದೆ ಹೆಜಮಾಡಿ, ಹಂಗಾರಕಟ್ಟೆ, ಕೋಡಿ ಬೆಂಗ್ರೆ ಮತ್ತು ಗಂಗೊಳ್ಳಿಯಲ್ಲಿ ಮೀನುಗಾರಿಕಾ ಕಿರು ಬಂದರುಗಳಿರುತ್ತದೆ.

ಜಿಲ್ಲೆಯಲ್ಲಿ ಒಳನಾಡು ಮೀನುಗಾರಿಕೆಯನ್ನು ಪ್ರೋತ್ಸಾಹಿಸಲು ಇಲಾಖಾ ವತಿಯಿಂದ ಕಾರ್ಕಳದಲ್ಲಿ ಮೀನು ಮರಿಗಳ ಪಾಲನಾ ಕೇಂದ್ರವನ್ನು ನಿರ್ಮಿಸಲಾಗಿದೆ.

ಅತ್ಯಂತ ಸಾಹಸಮಯ ದುಡಿಮೆಯಿಂದ ದೇಶದ, ರಾಜ್ಯದ ಮತ್ತು ಜಿಲ್ಲೆಯ ಆರ್ಥಿಕ ಬೆಳವಣಿಗೆಗೆ ಅಮೂಲ್ಯ ಕೊಡುಗೆ ನೀಡುತ್ತಿರುವ ಮೀನುಗಾರರು ಮತ್ತು ಮೀನುಗಾರಿಕಾ ಕಾರ್ಮಿಕರ ಬದುಕು ಮಾತ್ರ ಅತ್ಯಂತ ಬಡತನದಲ್ಲಿದೆ. ಅದರಲ್ಲೂ ಸಾಗರ ವಿಭಾಗದವರು ಯಾವುದೇ ಸಾಮಾಜಿಕ ಭದ್ರತೆಯಿಲ್ಲದೇ ಅದೂ ವೃದ್ಧಾಪ್ಯದಲ್ಲಿ ಸಾಮಾಜಿಕವಾಗಿ ಕಡೆಗಣಿಸಲ್ಪಟ್ಟವರಾಗಿದ್ದಾರೆ. ಅವರ ವಾಸಸ್ಥಳಗಳಲ್ಲಿ ಯಾವುದೇ ಮೂಲಭೂತ ಸೌಕರ್ಯಗಳಿಲ್ಲ. ಅವರ ಮಕ್ಕಳಿಗೆ ವಿದ್ಯಾಭ್ಯಾಸ ನೀಡುವ ವ್ಯವಸ್ಥೆಗಳಿಲ್ಲ.

ಸಿ.ಆರ್.ಝಡ್ ಹೆಸರಿನಲ್ಲಿ ಸಮುದ್ರ ತೀರದಲ್ಲಿ ವಾಸ ಮಾಡುವವರು ಮನೆ ದುರಸ್ತಿ ಮಾಡುವ ಅವಕಾಶವೂ ಇಲ್ಲದೇ ಒದ್ದಾಡುತ್ತಿದ್ದಾರೆ. ಆಳ ಸಮುದ್ರದಲ್ಲಿ ವಿದೇಶಿ ಬೋಟುಗಳಿಗೆ ಪರವಾನಿಗೆ ನೀಡುವ ಮೀನಾಕುಮಾರಿ ವರದಿಯೂ ಭಾರತದ ಮೀನುಗಾರ ಸಮುದಾಯದ ಮೇಲೆ ಕೆಟ್ಟ ಪರಿಣಾಮ ಬೀರಲಿದೆ.

ಮೀನುಗಾರರ ಮತ್ತು ಮೀನು ಕಾರ್ಮಿಕರ ಸ್ಥಿತಿ

ಮೀನುಗಾರರಿಗೆ ವರ್ಷದಲ್ಲಿ ಸುಮಾರು 4–5 ತಿಂಗಳು ಸಮುದ್ರದಲ್ಲಿ ಮೀನು ಇದ್ದಲ್ಲಿ ದುಡಿಮೆ ಸಂಪಾದನೆ ಮಾಡುತ್ತಾರೆ. ಮಳೆಗಾಲದಲ್ಲಿ ಸಮುದ್ರಕ್ಕೆ ಹೋಗಲು ಸಾಧ್ಯವಾಗದು. ದುಡಿಮೆ ಇಲ್ಲಾ. 4–5 ತಿಂಗಳು ದುಡಿದು ಸಂಪಾದನೆ ಮಾಡಿದ್ದಲ್ಲಿ ಹಣ ಉಳಿಸಿ ಮಳೆಗಾಲದಲ್ಲಿ ಮೀನು ಸಿಗದ ಸಂದರ್ಭದಲ್ಲಿ ಉಪಯೋಗ ಮಾಡಬೇಕು. ಹೆಚ್ಚಿನವರಿಗೆ ಉಳಿತಾಯ ಮಾಡಲು ಸಾಧ್ಯವಾಗುತ್ತಿಲ್ಲ. ಅಂತವರು ಬೋಟ್‌ಮಾಲಿಕರಲ್ಲಿ ಅಡ್ವಾನ್ಸ್ ಅಥವಾ ಸಾಲವಾಗಿ ಹಣ ಪಡೆದು ಬಹಳ ಕಷ್ಟದಿಂದ ಜೀವನ ನಡೆಸುತ್ತಾರೆ.

ಅಡ್ವಾನ್ಸ್ ಆಗಿ ಪಡೆದ ಹಣಕ್ಕೆ ಬಡ್ಡಿ ಇಲ್ಲಾ. ಮೀನುಗಾರಿಕೆ ಆರಂಭವಾದಾಗ ದುಡಿಯಲು ಬರಬೇಕೆಂಬ ಷರತ್ತಿನಲ್ಲಿ ಪಡೆದು, ಸಂಪಾದನೆಯಲ್ಲಿ ಕಡಿತ ಮಾಡಿಕೊಳ್ಳುತ್ತಿದ್ದಾರೆ. ಸಹಕಾರಿ ಸಂಘಗಳಲ್ಲಿ ಪಡೆದ ಸಾಲಕ್ಕೆ ಹಾಗೂ ಬೋಟ್ ಮಾಲಿಕರಿಂದ ಪಡೆದ ಸಾಲಕ್ಕೆ ಬಡ್ಡಿ ಇದ್ದು, ಸಂಪಾದನೆಯಾದ ಬಳಿಕ ಬಡ್ಡಿ ಸಾಲ ಮರುಪಾವತಿ ಮಾಡುತ್ತಾರೆ.

ಬೋಟ್ ಮಾಲೀಕರು ಒಟ್ಟು ಸಂಪಾದನೆಯಲ್ಲಿ ಕಾರ್ಮಿಕರಿಗೆ ಶೇಕಡ 40 ರಷ್ಟು ಮಾತ್ರ ಕೂಲಿ ಕೊಡುತ್ತಾರೆ. ಉಳಿದ ಶೇಕಡ 60 ರಷ್ಟು ಬೋಟು, ಬಲೆ ಹಾಗೂ ಮಾಲಿಕನ ಬಾಬ್ತು ಹಿಡಿದಿಟ್ಟುಕೊಳ್ಳುತ್ತಾರೆ. ಈ ರೀತಿ ಮೀನುಗಾರರನ್ನು ಸುಲಿಗೆ ಮಾಡುವ ವ್ಯವಸ್ಥೆ ಇದೆ. ಇತ್ತೀಚೆಗೆ ಕಾರ್ಮಿಕರಲ್ಲಿ ಶೇಕಡ 60 ರಷ್ಟು ಕೊಡಬೇಕೆಂಬ ಬೇಡಿಕೆ ಇಡಬೇಕೆಂದು ಚರ್ಚಿಸಲಾಗುತ್ತಿದೆ. ಇದು ಸಿ.ಐ.ಟಿಯು. ಸಂಘದ ಬೇಡಿಕೆಯಾಗಿರುತ್ತದೆ.

ಮೀನು ಕಾರ್ಮಿಕರ ಜೀವನ ಕ್ರಮ ಇನ್ನೂ ಶೋಚನೀಯವಾಗಿದೆ. ಮೀನು ಕಾರ್ಮಿಕರು ಹೆಚ್ಚಾಗಿ ಮಹಿಳೆಯರು, ಬೋಟ್‌ಗಳಿಂದ ಮೀನು ದಡಕ್ಕೆ ತರುವುದು ಹಾಗೂ ಲಾರಿ ಮತ್ತು ಟೆಂಪೋಗಳಿಗೆ ತುಂಬಿಸುವ ಕೆಲಸ ಮಾಡುತ್ತಾರೆ. ಕೆಲಸದ ಅವಧಿಯಲ್ಲಿ ಕೂಲಿ ಸಿಗುತ್ತದೆ. ಮೀನು ಇಲ್ಲದಿದ್ದಲ್ಲಿ ಕೂಲಿ ಇಲ್ಲದೇ ಸುಮ್ಮನೆ ಬಂದರುಗಳಲ್ಲಿ ಕುಳಿತಿರಬೇಕು. ಮೀನು ಮಾರಾಟಕ್ಕೆ ಕೆಲವು ಮಹಿಳೆಯರು ಬುಟ್ಟಿಗಳಲ್ಲಿ ಮೀನು ಹೊತ್ತು ಕೊಂಡು ಹೋಗುತ್ತಿದ್ದಾರೆ. ಹೆಚ್ಚಿನವರು ರಿಕ್ಷಾ ಟೆಂಪೋ ಅಥವಾ ಮಿನಿಲಾರಿಗಳಲ್ಲಿ ದೂರದ ಪ್ರದೇಶಕ್ಕೆ ಹೋಗಿ ಮೀನು ಮಾರಾಟ ಮಾಡುತ್ತಾರೆ. ದೂರದ ಪ್ರದೇಶಕ್ಕೆ ಹೋಗುವಾಗ ಮಂಜುಗಡ್ಡೆ ಉಪಯೋಗಿಸುತ್ತಾರೆ.

ಸಮುದ್ರದಿಂದ ಹಿಡಿದು ತಂದ ಹೆಚ್ಚಿನ ಮೀನು ಶ್ರೀಮಂತ ವ್ಯಾಪಾರಸ್ಥರು ಮಂಜುಗಡ್ಡೆ ಬಳಸಿ ಹೆಚ್ಚು ಕಾಲ ಹಾಳಾಗದೇ ಉಳಿಯುವಂತೆ ಮಾಡುತ್ತಾರೆ. ಮೀನು ಸಮುದ್ರದಿಂದ ಹೆಚ್ಚು ಸಿಗದ ಸಂದರ್ಭ ನೋಡಿ ಬೆಲೆ ಹೆಚ್ಚು ಮಾಡಿ, ಹೆಚ್ಚಿನ ಲಾಭ ಮಾಡುತ್ತಾರೆ.

ಶ್ರೀಮಂತರಿಗೆ ಮಂಜುಗಡ್ಡೆ ಸ್ಥಾವರಗಳು, ಶೈತ್ಯಾಗಾರಗಳು, ಘನೀಕರಣ ಘಟಕಗಳು ಇದ್ದು, ಹೆಚ್ಚಿನ ಮೀನು ಹೆಚ್ಚು ಕಾಲ ಉಳಿಸಿಕೊಂಡು ಲಾಭ ಮಾಡುತ್ತಾರೆ. ಅಲ್ಲದೇ ಫ್ರೋಜನ್ ಸ್ಟೋರೇಜ್‌ಗಳು, ಕ್ಯಾನಿಂಗ್ ಪ್ಲ್ಯಾಂಟ್‌ಗಳು ಫಿಶಮಿಲ್ ಮತ್ತು ಆಯಿಲ್ ಪ್ಲಾಂಟ್‌ಗಳು ಸಹಕಾರಿಯಾಗುತ್ತದೆ. 15 ಬೋಟ್ ಬಿಲ್ಡಿಂಗ್ ಯಾರ್ಡ್‌ಗಳು, 3 ನೆಟ್ ಮೇಕಿಂಗ್ ಯೂನಿಟ್‌ಗಳು 8 ಫಿಶ್ ಕಟ್ಟಿಂಗ್ ಯೂನಿಟ್‌ಗಳು ಹಾಗೂ ಮೀನು ಮತ್ತು ಮೀನಿನ ಉಪ ಉತ್ಪನ್ನಗಳನ್ನು ರಫ್ತು ಮಾಡುವ 8 ಉದ್ದಿಮೆಗಳು ಉಡುಪಿ ಜಿಲ್ಲೆಯಲ್ಲಿ ಇವೆ. ಇದರ ಉಪಯೋಗ ಶ್ರೀಮಂತರಿಗೆ ಆಗುತ್ತಿದೆ. ಶ್ರೀಮಂತ ವ್ಯಾಪಾರಿಗಳು ಇವುಗಳನ್ನೆಲ್ಲಾ ಉಪಯೋಗಿಸಿಕೊಂಡು ಮೀನು ಕಡಿಮೆ ಇರುವಾಗ ಅದರ ಬೆಲೆ ಸ್ವಲ್ಪ ಹೆಚು ಮಾಡಿ, ಮೀನು ದೊಡ್ಡ ಪ್ರಮಾಣದಲ್ಲಿ ಬರುವಾಗ ಬೆಲೆ ಬಹಳ ಕಡಿಮೆ ಮಾಡಿ ಹೆಚ್ಚು ಲಾಭ ಮಾಡುತ್ತಿದ್ದಾರೆ. ಇಂತಹವರೇ 10–15 ಫಿಶಿಂಗ್ ಬೋಟ್‌ಗಳು ಹಾಗೂ ಪರ್ಸಿನ್ ಬೋಟ್‌ಗಳನ್ನು ಹೊಂದಿರುತ್ತಾರೆ.

ಮೀನುಗಾರರ ಸ್ಥಿತಿ ಉತ್ತಮ ಪಡಿಸಲು...

ಕೇಂದ್ರ ಸರಕಾರ ಮೀನುಗಾರಿಕಾ ಉದ್ಯಮಕ್ಕಿರುವ ಆರ್ಥಿಕ ಪಾಲು ಹಂಚಿಕೆ ಹೆಚ್ಚಿಸಬೇಕು. ಮೀನುಗಾರರು ಮತ್ತು ಮೀನುಗಾರಿಕಾ ಕಾರ್ಮಿಕರಿಗೆ ಕೆಲಸದ ನಿಯಾಮಾವಳಿ, ಕನಿಷ್ಠ ವೇತನ ಮತ್ತು ಸಾಮಾಜಿಕ ಭದ್ರತಾ ಸವಲತ್ತುಗಳನ್ನೊಳಗೊದಗಿಸುವ ಕೇಂದ್ರಿಯ ಕಾಯಿದೆಯನ್ನು ಜಾರಿಗೊಳಿಸಬೇಕಾಗಿದೆ.

ವಿದೇಶಿ ಮೀನುಗಾರಿಕಾ ಹಡಗುಗಳ ಮೇಲೆ ಮುರಾರಿ ಆಯೋಗ ತೀರ್ಪು ಜಾರಿಗೊಳಿಸಬೇಕು. ಮತ್ತು ಭಾರತೀಯ ಸಮುದ್ರದಲ್ಲಿ ವಿದೇಶಿ ಮೀನುಗಾರಿಕೆಯನ್ನುನಿಷೇದಿಸಬೇಕು. ಮೀನಕುಮಾರಿ ಸಮಿತಿಯ ಶಿಫಾರಸ್ಸುಗಳನ್ನು ತಿರಸ್ಕರಿಸಬೇಕು. ಸಿ.ಆರ್.ಝಡ್ (ಕರಾವಳಿ ನಿಯಂತ್ರಣ ನಿಯಮ) ಹೆಸರಿನಲ್ಲಿ ಸಮುದ್ರ ತೀರದಲ್ಲಿ ವಾಸ ಮಾಡುವವರಿಗೆ ಆಗುವ ತೊಂದರೆಗಳನ್ನು ನಿವಾರಣೆ ಮಾಡಬೇಕು.

ಎಲ್ಲಾ ಮೀನುಗಾರರಿಗೆ ಮತ್ತು ಮೀನುಗಾರಿಕಾ ಕಾರ್ಮಿಕರಿಗೆ ಬಿಪಿಎಲ್‌ಕಾರ್ಡ್ ಒದಗಿಸಬೇಕು. ಜೀವನಾವಶ್ಯಕ ವಸ್ತುಗಳನ್ನು ಕಡಿಮೆ ಬೆಲೆಯಲ್ಲಿ ವಿತರಿಸಬೇಕು. ಸಾಂಪ್ರದಾಯಿಕ ಮೀನುಗಾರಿಕೆಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಸಬ್ಸಿಡಿ ದರದಲ್ಲಿ ಕರ್ನಾಟಕ ಸರಕಾರದಿಂದ ಆಹಾರ ಇಲಾಖೆಯ ಪಡಿತರ ವ್ಯವಸ್ಥೆಯ ಮೂಲಕ ವಿತರಣೆಯಾಗಬೇಕಾಗಿದ್ದ ಸೀಮೆಎಣ್ಣೆ ಸಮರ್ಪಕವಾಗಿ ಕಾಲಕಾಲಕ್ಕೆ ವಿತರಿಸುವ ವ್ಯವಸ್ಥೆ ಆಗಬೇಕಾಗಿದೆ.

ಮೀನುಗಾರರಿಗೆ ಹಾಗೂ ಮೀನು ಕಾರ್ಮಿಕರಿಗೆ ಸಾಮಾಜಿಕ ಭದ್ರತೆಯ ಭಾಗವಾಗಿ ಕಲ್ಯಾಣ ಮಂಡಳಿಯೊಂದನ್ನು ರಾಜ್ಯದಲ್ಲಿ ರಚಿಸಿ, ತನ್ಮೂಲಕ ಅಪಘಾತ ಸಂಭವಿಸಿದಲ್ಲಿ ಪರಿಹಾರ, ವಸತಿ, ಮಕ್ಕಳಿಗೆ ವಿದ್ಯಾರ್ಥಿವೇತನ ಹಾಗೂ ಹೆಣ್ಣು ಮಕ್ಕಳ ಮದುವೆಗೆ ಸಹಾಯಧನ ಇತ್ಯಾದಿ ಸವಲತ್ತುಗಳನ್ನ ಪಡೆಯಲು ಸರಕಾರವನ್ನು ಒತ್ತಾಯಿಸಬೇಕಾಗಿದೆ. ಮೀನುಗಾರರಿಗೆ ಹಾಗೂ ಮೀನು ಕಾರ್ಮಿಕರಿಗೆ 55 ವರ್ಷ ಪ್ರಾಯದ ನಂತರ ಪಿಂಚಣಿ ಪಡೆಯಲು ಸಾಧ್ಯವಾಗಬೇಕು.

ಮಳೆಗಾಲದ 3 ತಿಂಗಳು ಸಂಪಾದನೆ ಇಲ್ಲದ ಸಂದರ್ಭದಲ್ಲಿ ಉಚಿತ ರೇಶನ್ ಸಿಗುವಂತೆ ಸರಕಾರವನ್ನು ಒತ್ತಾಯಿಸಬೇಕು. ಕರಾವಳಿ ಉದ್ದಕ್ಕೂ ಕೇರಳದ ಮಾದರಿಯಂತೆ ಶಾಶ್ವತ ತಡೆಗೋಡೆ ನಿರ್ಮಾಣ ಮಾಡಿ ಮಳೆಗಾಲದಲ್ಲಿ ಆಗುವ ಅನಾಹುತಗಳನ್ನು ತಡೆಗಟ್ಟಬೇಕು.

ಈ ಮೇಲಿನ ಮುಖ್ಯ ಬೇಡಿಕೆಗಳಿಗಾಗಿ ಸಂಘಟನೆಯನ್ನು ವಿಸ್ತರಿಸಿ ಬೆಳೆಸಬೇಕಾಗಿದೆ. ಮೀನುಗಾರ ಮತ್ತು ಮೀನು ಕಾರ್ಮಿಕರ ಮಧ್ಯೆ ಇರುವ ಹಲವು ಸಂಘಗಳ ಮಧ್ಯೆ ಐಕ್ಯತೆ ತರಲು ಸಿ.ಐ.ಟಿ.ಯು ಸೇರಿದ ಸಂಘಗಳು ಶ್ರಮಿಸಬೇಕಾಗಿದೆ. ಜಿಲ್ಲೆ ಹಾಗೂ ರಾಜ್ಯದ ಕರಾವಳಿಗಳಲ್ಲಿ ಮತ್ತು ಒಳನಾಡು ಪ್ರದೇಶಗಳಲ್ಲಿ ಮೀನುಗಾರರನ್ನು ಸಂಘಟನೆ ಮಾಡಲು ಪ್ರಯತ್ನ ನಡೆಸಬೇಕಾಗಿದೆ.



ಫೆಬ್ರವರಿ 12 ಮತ್ತು 13, 2015 ರಂದು ಉಡುಪಿಯಲ್ಲಿ ಜರುಗಿದ ಒಕ್ಕೂಟದ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯ ಸಭೆಯ ಅಂಗವಾಗಿ ಫೆಬ್ರವರಿ 13 ರಂದು ಮಲ್ಪೆಯಲ್ಲಿ ಏರ್ಪಡಿಸಿದ ಸಾರ್ವಜನಿಕ ಸಭೆಯಲ್ಲಿ **ಕಾಂ. ಹೇಮಲತಾ** ಅವರು ಮಾತನಾಡುತ್ತಿದ್ದರು.



ಕೈಗಾರಿಕೆಗಳು ಮತ್ತು ಕಾರ್ಮಿಕರ ಪರಿಸ್ಥಿತಿ



ಬಾಲಕೃಷ್ಣ ಶೆಟ್ಟಿ



ಜಿಲ್ಲೆಯಲ್ಲಿ 248 ಗ್ರಾಮಗಳು, 158 ಗ್ರಾಮ ಪಂಚಾಯತ್‌ಗಳು, ಒಂದು ನಗರ ಸಭೆ (ಉಡುಪಿ) 3 ಪುರಸಭೆಗಳು (ಕಾರ್ಕಳ, ಕುಂದಾಪುರ, ಕಾಪು) ಮತ್ತು ಒಂದು ಪಟ್ಟಣ ಪಂಚಾಯತ್ (ಸಾಲಿಗ್ರಾಮ) ಇವೆ. 1956 ಕ್ಕಿಂತ ಮೊದಲು ದ.ಕ. ಜಿಲ್ಲೆಯ ಭಾಗವಾಗಿ ಮದ್ರಾಸ್ ಪ್ರಾಂತದಲ್ಲಿದ್ದ ಉಡುಪಿ ಜಿಲ್ಲೆ, 1997ರ ಆಗಸ್ಟ್‌ನಲ್ಲಿ 3 ತಾಲೂಕುಗಳನ್ನು ಒಳಗೊಂಡ ಪ್ರತ್ಯೇಕ ಜಿಲ್ಲೆಯಾಯಿತು.

ಒಟ್ಟು 3565 ಚ.ಕಿ.ಮಿ ವಿಸ್ತೀರ್ಣವುಳ್ಳ ಜಿಲ್ಲೆ, 2011ರ ಜನಗಣತಿ ಪ್ರಕಾರ 11.77 ಲಕ್ಷ ಜನಸಂಖ್ಯೆಯನ್ನು ಹೊಂದಿದೆ. ಸಾಕ್ಷರತೆಯಲ್ಲಿ ದ.ಕ. ಜಿಲ್ಲೆಯ ನಂತರದ ಸ್ಥಾನ ಅಂದರೆ ರಾಜ್ಯದಲ್ಲಿ 2ನೇ ಸ್ಥಾನ ಪಡೆದುಕೊಂಡಿದೆ.

ಕೈಗಾರಿಕಾ ಪರಿಸ್ಥಿತಿ

ಬೀಡಿ, ಕೈಮಗ್ಗ, ಮುದ್ರಣ, ಹಂಚು ಕೈಗಾರಿಕೆಗಳಿಂದ ಮಂಗಳೂರು ಕೇಂದ್ರವಾಗಿ ಕಾರ್ಮಿಕ ಚಳುವಳಿ ಆರಂಭಗೊಂಡಿತು. ಆದ-ರೆ ಇಂದು ಕೈಮಗ್ಗ ನಶಿಸಿ ಹೋಗಿದೆ. ಮುದ್ರಣ ಕ್ಷೇತ್ರದಲ್ಲಿ ಸಂಘಟನೆ ಕುಂಠಿತಗೊಂಡಿದೆ. ಬೀಡಿ ಮತ್ತು ಹಂಚು ಉದ್ದಿಮೆಯಲ್ಲಿ ಸಂಘಟನೆ ಇದ್ದರೂ ಉದ್ದಿಮೆ ಕುಂಠಿತಗೊಳ್ಳುತ್ತಿದ್ದು ಕಾರ್ಮಿಕರು ಕೆಲಸ ಕಳೆದುಕೊಳ್ಳುತ್ತಿದ್ದಾರೆ. ಗೋಡಂಬಿ ಉತ್ಪಾದನೆಯಲ್ಲಿ ಸಾಕಷ್ಟು ಬೆಳವಣಿಗೆ ಇದ್ದು ರಫ್ತು ವ್ಯಾಪಾರವೂ ನಡೆಯುತ್ತಿದೆ, ಆದರೆ ಸಿಐಟಿಯು ಸಂಘಟನೆ ಕೆಲವು ಕಾರ್ಖಾನೆಗಳಿಗೆ ಸೀಮಿತವಾಗಿದೆ. ಜಿಲ್ಲೆಯಲ್ಲಿ ಸುಮಾರು 54 ರಫ್ತು ಗೋಡಂಬಿ ಸಂಸ್ಕರಣಾಗಾರಗಳು ಇವೆ ಎಂದು 2014 ರ ಉಡುಪಿ ಜಿಲ್ಲೆ ಮಾನವ ಅಭಿವೃದ್ಧಿ (ಮಾ.ಅ.) ವರದಿ ಯು ಹೇಳುತ್ತದೆ.

ಜಿಲ್ಲೆಯ ಮಣಿಪಾಲ (ಉಡುಪಿ ತಾಲೂಕು) ಕುಂದಾಪುರ ಮತ್ತು ಕಾರ್ಕಳಗಳಲ್ಲಿ ಕೈಗಾರಿಕಾ ಕೇಂದ್ರಗಳಿವೆ. 31–12–2012ರಲ್ಲಿ 13 ಮಧ್ಯಮ ಮಟ್ಟದ ಮತ್ತು 9454 ಸಣ್ಣ ಪ್ರಮಾಣದ ಕೈಗಾರಿಕೆಗಳು ನೊಂದಾಯಿಸಲ್ಪಟ್ಟಿದ್ದು 64,634 ಉದ್ಯೋಗಿಗಳಿದ್ದಾರೆಂದು ವರದಿಯಾಗಿದೆ (ಮಾ.ಅ. ವರದಿ) ಇದರಲ್ಲಿ ಬೀಡಿ ಉದ್ದಿಮೆ ಒಳಗೊಂಡಿಲ್ಲ. ಬೀಡಿ ಸೇರಿದರೆ ಸುಮಾರು 1 ಲಕ್ಷಕ್ಕೂ ಹೆಚ್ಚು ಕಾರ್ಮಿಕರಿದ್ದಾರೆ. ಇದಲ್ಲದೆ ಕಟ್ಟಡ ಕಾರ್ಮಿಕರು, ಸ್ಕೀಂ ನೌಕರರು, ಹೋಟೇಲು, ಸಾರಿಗೆ, ಆರೋಗ್ಯ, ಶಿಕ್ಷಣ ಮೊದಲಾದ ಕ್ಷೇತ್ರಗಳಲ್ಲಿ ದುಡಿಯುವ ಲಕ್ಷಾಂತರ ನೌಕರರು ಇದ್ದಾರೆ.

ಎರಕದ ಕೈಗಾರಿಕೆ, ಮುದ್ರಣ, ಅಕ್ಕಿಗಿರಣಿ, ತೆಂಗಿನಪುಡಿಯ ಘಟಕ, ಮೀನು ಕ್ಯಾನಿಂಗ್ ಮತ್ತು ಸಂಸ್ಕರಣೆ, ಫಿಶ್‌ಮಿಲ್ ಮತ್ತು ಮೀನೆಣ್ಣೆ ಘಟಕಗಳು, ಬಲೆ ಉತ್ಪಾದನಾ ಘಟಕಗಳು, ಮಂಜುಗಡ್ಡೆ ತಯಾರಿಕೆ, ಗ್ರಾನೈಟ್, ಸಿದ್ದ ಉಡುಪುಗಳು, ರಾಸಾಯನಿಕ, ಮೋಟಾರು ವಾಹನ ಬಿಡಿ ಬಾಗಗಳ ತಯಾರಿ, ಗೋಡಂಬಿ, ಹಂಚು ಮೊದಲಾದ ಉದ್ಯಮಗಳು ಇವೆ.

ಇತ್ತೀಚೆಗೆ ಮಾಹಿತಿ ತಂತ್ರಜ್ಞಾನದ ಉದ್ದಿಮೆಗಳು ಬೆಳೆಯುತ್ತಿವೆ. ವಿಶೇಷ ಆರ್ಥಿಕ ವಲಯ (SEZ) ವಾದ ನಂದಿಕೂರಿನಲ್ಲಿ ಸುಜ್ಲಾನ್ ವಿಂಡ್ ಇಂಟರ್‌ನ್ಯಾಶನಲ್ ಲಿ ಮತ್ತು ಉಡುಪಿ ಪವರ್ ಕಾರ್ಪೋರೇಶನ್ (ಈಗ ಅದಾನಿ ಪವರ್) ಗಳು ಕಾರ್ಯನಿರ್ವಹಿಸುತ್ತಿವೆ.

ಸಾರಿಗೆ, ಶಿಕ್ಷಣ ಮತ್ತು ಆರೋಗ್ಯ ಲಾಭದಾಯಕ ಉದ್ದಿಮೆಗಳಾಗಿದ್ದು ಸಾವಿರಾರು ನೌಕರರು ಕಡಿಮೆ ಸಂಬಳದಲ್ಲಿ ದುಡಿಯುತ್ತಿದ್ದಾರೆ. ಬ್ಯಾಂಕಿಂಗ್ ಕ್ಷೇತ್ರದಲ್ಲಿ ಅಪಾರ ಸಾಧನೆ ಮಾಡಿದ್ದು ದೇಶದ 2 ಪ್ರಮುಖ ಬ್ಯಾಂಕುಗಳು ಈ ಜಿಲ್ಲೆಯಿಂದಲೇ ಆರಂಭಗೊಂಡಿದ್ದವು (ಸಿಂಡಿಕೇಟ್ ಮತ್ತು ಕಾರ್ಪೋರೇಶನ್) ದೇಶದಲ್ಲಿ 12,000 ಜನರಿಗೆ ಒಂದು ಬ್ಯಾಂಕ್ ಶಾಖೆ ಇದ್ದರೆ, ಜಿಲ್ಲೆಯಲ್ಲಿ 4018 ಜನರಿಗೆ ಒಂದು ಶಾಖೆ ಇದೆ.

ಬ್ರಹ್ಮಾವರ ಸಕ್ಕರೆ ಕಾರ್ಖಾನೆ ಮುಚ್ಚಿರುವುದರಿಂದ ಕಾರ್ಮಿಕರು ಉದ್ಯೋಗ ಕಳೆದುಕೊಂಡಿರುವುದು ಮಾತ್ರವಲ್ಲದೆ ಜಿಲ್ಲೆಯ ಆರ್ಥಿಕತೆಯ ಮೇಲೆ ದುಷ್ಪರಿಣಾಮವಾಗಿದೆ.

ರಾಜ್ಯದ 30 ಜಿಲ್ಲೆಗಳಲ್ಲಿ ಒಟ್ಟು ಸ್ಥಳೀಯ ಉತ್ಪಾದನೆ (ಜಿಡಿಪಿ) ಯಲ್ಲಿ ಉಡುಪಿ ಜಿಲ್ಲೆ 10ನೇ ಸ್ಥಾನದಲ್ಲಿದೆ ಮತ್ತು ತಲಾ ಆದಾಯದಲ್ಲಿ 5ನೇ ಸ್ಥಾನದಲ್ಲಿದೆ. ಆರೋಗ್ಯದಲ್ಲಿ ಮೊದಲ ಸ್ಥಾನ ಮತ್ತು ಸಾಕ್ಷರತೆ ಹಾಗೂ ಶಿಕ್ಷಣದಲ್ಲಿ 2ನೇ ಸ್ಥಾನದಲ್ಲಿದೆ.

ಹಂಚು ಉದ್ಯಮ ಮತ್ತು ಕಾರ್ಮಿಕರು

ಹಂಚು ಕೈಗಾರಿಕೆ ಮತ್ತು ಕಾರ್ಮಿಕರ ಸ್ಥಿತಿ:ಜಿಲ್ಲೆಯಲ್ಲಿ ಪುರಾತನವಾದ ಸಂಘಟನೆ. ಹಲವಾರು ಹೋರಾಟಗಳನ್ನು ನಡೆಸಿದೆ. ಪ್ರತಿ ವರ್ಷ ಒಂದು ದಿನದ ದುಡಿಮೆಯನ್ನು ಎಡ ಚಳುವಳಿಗಾಗಿ ನೀಡುತ್ತಿದ್ದಾರೆ. ಹಿಂದೆ ರೈತ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ ಸಂಘಟನೆ.

ಕರಾವಳಿಯ 3 ಜಿಲ್ಲೆಗಳಲ್ಲಿರುವ ಹಂಚು ಕೈಗಾರಿಕೆಯಲ್ಲಿ ಬಿಕ್ಕಟ್ಟು ಬಂದಿದ್ದು, ಈಗಾಗಲೇ ಮಂಗಳೂರು ಮತ್ತು ಉತ್ತರಕನ್ನಡ ಜಿಲ್ಲೆಗಳಲ್ಲಿ ಬಹುತೇಕ ಕಾರ್ಖಾನೆಗಳು ಮುಚ್ಚಿವೆ. ಇತ್ತೀಚೆಗೆ ಉಡುಪಿ ಮತ್ತು ಕುಂದಾಪುರದಲ್ಲಿ ಕೂಡಾ 3 ಕಾರ್ಖಾನೆಗಳು ಮುಚ್ಚಿ ಸುಮಾರು 300 ಕಾರ್ಮಿಕರು ಉದ್ಯೋಗ ಕಳಕೊಂಡು ಕಷ್ಟ–ನಷ್ಟಕ್ಕೆ ಒಳಗಾಗಿದ್ದಾರೆ. ಕುಂದಾಪುರದಲ್ಲಿ 11 ಹಂಚು ಕಾರ್ಖಾನೆಗಳು ಇದ್ದು, ಸರಿಯಾದ ಮಾರುಕಟ್ಟೆ ಇಲ್ಲದೆ ಕಷ್ಟದ ಪರಿಸ್ಥಿತಿಯಲ್ಲಿವೆ. ಕಳೆದ 4–5 ವರ್ಷಗಳಲ್ಲಿ ಹಂಚು ಉತ್ಪಾದನೆ ಬಹಳ ಕಡಿಮೆಯಾಗಿದೆ. ಕಳೆದ ಒಂದು ತಿಂಗಳಿನಿಂದ ಬೇಡಿಕೆ ಇದ್ದು ಹಂಚು ಮಾರಾಟವಾಗುತ್ತಿದೆ.

ಸರಕಾರ ಹಂಚು ಉದ್ಯಮಕ್ಕೆ ಯಾವುದೇ ರೀತಿಯಲ್ಲಿ ಸಹಕಾರ ನೀಡದೆ ಕಾರ್ಮಿಕರು ಉದ್ಯೋಗ ಕಳೆದುಕೊಳ್ಳುವ ಪರಿಸ್ಥಿತಿ ಬಂದೊದಗಿದೆ. ಮಾಲಕರು ಹಾಗೂ ಹಂಚು ಕಾರ್ಮಿಕರ ಸಂಘದಿಂದ ಸರಕಾರವನ್ನು ಒತ್ತಾಯಿಸಿದ್ದರೂ ಕೂಡಾ ಗಮನ ನೀಡಲಿಲ್ಲ. ಕಚ್ಚಾ ಮಾಲುಗಳ ಅಭಾವ ಹಾಗೂ ಉತ್ಪಾದನೆಯಾದ ಹಂಚುಗಳಿಗೆ ಸರಿಯಾದ ಬೇಡಿಕೆ ಇಲ್ಲದೆ ಇರುವುದು ಬಿಕ್ಕಟ್ಟಿಗೆ ಕಾರಣ.

ಕಾರ್ಮಿಕರು ನಿಗದಿಯಾದ ಕನಿಷ್ಟ ಕೂಲಿಗಿಂತ ಕಡಿಮೆ ಕೂಲಿಗೆ ಕೆಲಸ ಮಾಡುವ ಪರಿಸ್ಥಿತಿ ಬಂದಿದೆ. ಹಿಂದಿನ 3 ವರ್ಷದ ಒಪ್ಪಂದ ಮುಗಿದಿರುವುದರಿಂದ ಹೊಸ ಬೇಡಿಕೆಗಳನ್ನಿಟ್ಟು 2016 ಎಪ್ರಿಲ್ 1 ರಿಂದ ಹೆಚ್ಚಿನ ಸವಲತ್ತುಗಳನ್ನು ಪಡೆಯುವ ನಿರೀಕ್ಷೆಯಲ್ಲಿರುವಾಗಲೇ ಮಾಲಕರು ಸದ್ಯ ಬೇಡಿಕೆಗಳನ್ನು ಇತ್ಯರ್ಥಗೊಳಿಸಲು ನಿರಾಕರಣೆ ಮಾಡಿ ಮುಂದೆ 6 ತಿಂಗಳ ನಂತರ ಬೇಡಿಕೆಗಳ ಬಗ್ಗೆ ಮಾತುಕತೆಗೆ ಬರುತ್ತೇವೆ ಎಂದು ತಿಳಿಸಿರುತ್ತಾರೆ. ಇನ್ನೊಂದೆಡೆಯಲ್ಲಿ ಸರಕಾರವು ಹೊಸತಾಗಿ ಕನಿಷ್ಟ ಕೂಲಿ ನಿಗದಿ ಮಾಡಲಿಲ್ಲ. ಇದರಿಂದ ಮೂಲ ಕೂಲಿಯಲ್ಲಿ ಹೆಚ್ಚಳವಾಗದೇ ಹಂಚು ಕಾರ್ಮಿಕರು ಕಷ್ಟಕ್ಕೆ ಒಳಗಾಗಿದ್ದಾರೆ.

ಕನಿಷ್ಟ ಕೂಲಿ ಕೂಡಲೇ ನಿಗದಿ ಮಾಡಿ ಜ್ಯಾರಿಗೊಳಿಸಬೇಕೆಂದು ಸರಕಾರವನ್ನು ಒತ್ತಾಯಿಸಬೇಕಾಗಿದೆ. ಹಂಚು ಕಾರ್ಮಿಕರು ಸಂಘಟನೆಯನ್ನು ಇನ್ನೂ ಬಲಪಡಿಸಿ ಪರಿಸ್ಥಿತಿ ಅಂ-ದಾಜು ಮಾಡಿಕೊಂಡು ಮಾಲಕರನ್ನು ಒತ್ತಾಯಿಸುವ ಹಾಗೂ ಹೋರಾಟದ ಮೂಲಕ ಬೇಡಿಕೆಗಳನ್ನು ಇತ್ಯರ್ಥಗೊಳಿಸಲು ಸಿದ್ದತೆ ನಡೆಸಬೇಕಾಗಿದೆ.

ಬೀಡಿ ಉದ್ಯಮ ಮತ್ತು ಕಾರ್ಮಿಕರು

ಹಲವು ವರ್ಷಗಳಿಂದ ಬೀಡಿ ಉದ್ಯಮ ಕರಾವಳಿ ಜಿಲ್ಲೆಗಳಾದ ದ.ಕ ಮತ್ತು ಉಡುಪಿ ಪ್ರದೇಶದ ಜನರ ಬದುಕನ್ನು ಉಳಿಸಿದೆ. ಇಂದು ಕೇಂದ್ರ ಸರಕಾರ ಕಾರ್ಮಿಕರಿಗೆ ಯಾವೊಂದು ಪುನರ್ವಸತಿ ಯೋಜನೆಯನ್ನು ನೀಡದೆ ವಿಶ್ವ ಆರೋಗ್ಯ ಸಂಸ್ಥೆಯ ತೀರ್ಮಾನ ಎಂದು ತಂಬಾಕು ನಿಯಂತ್ರಣಕ್ಕೆ ಕಠಿಣ ಕಾನೂನುಗಳನ್ನು ಜಾರಿಗೆ ತರುತ್ತಿದೆ. ಬೀಡಿ ಉದ್ಯಮವನ್ನೇ ನಂಬಿ ಜೀವನ ಸಾಗಿಸುವ ಜನರಿಗೆ ಇದರಿಂದ ಬದುಕೇ ಇಲ್ಲವಾಗಲಿದೆ. ಆದರೆ ವಿಶ್ವ ಆರೋಗ್ಯ ಸಂಸ್ಥೆಯೂ ತಂಬಾಕು ನಿಯಂತ್ರಣ-ಕ್ಕೆ ಮೊದಲು ಆ ಉದ್ಯಮದಲ್ಲಿ ದುಡಿಯುತ್ತಿರುವ ಜನರಿಗೆ ಪರ್ಯಾಯ ಪುನರ್ವಸತಿ ವ್ಯವಸ್ಥೆ ಮಾಡಬೇಕೆಂದು ತೀರ್ಮಾನ ಮಾಡಿದೆ. ಈ ತೀರ್ಮಾನವನ್ನು ಉಲ್ಲಂಘಿಸಿ, ಕೇವಲ ತಂಬಾಕು ಮತ್ತು ತಂಬಾಕು ಉತ್ಪನ್ನಗಳ ನಿಯಂತ್ರಣ ಮಾತ್ರ ಮಾಡುವುದು ಸರಿಯಲ್ಲ.

ಜಿಲ್ಲೆಯ ಅಭಿವೃದ್ಧಿಗೆ ಕೊಡುಗೆ ನೀಡಿದ, ಬಡ ಬೀಡಿ ಕಾರ್ಮಿಕರ ಬದುಕಿಗೆ ಆಶ್ರಯವಾಗಿರುವ ಬೀಡಿ ಕೈಗಾರಿಕೆಯನ್ನು ಶಾಶ್ವತವಾಗಿ ನಿಲುಗಡೆ ಮಾಡುವ ಹುನ್ನಾರ ನಡೆಯುತ್ತಿದೆ. ಕೇಂದ್ರದ ನರೇಂದ್ರ ಮೋದಿ ಸರಕಾರ ಕೋಟ್ಪಾ ಕಾಯಿದೆಯನ್ನು ಕಟ್ಟುನಿಟ್ಟಾಗಿ ಜ್ಯಾರಿಗೊಳಿಸಿ ಬೀಡಿ ಕಾರ್ಮಿಕರನ್ನು ಬೀದಿ ಪಾಲು ಮಾಡಲು ಹೊರಟಿದೆ. ತಾರೀಕು 1–4–2016 ರಿಂದ ಬೀಡಿ ಕಟ್ಟಿನ ಲೇಬಲ್ ಮೇಲೆ 85% ದಷ್ಟು ಅಪಾಯಕಾರಿ ಸಚಿತ್ರವನ್ನು ಮುದ್ರಿಸುವುದು ಕಡ್ಡಾಯಗೊಳಿಸಿದೆ.

ಇದನ್ನು ವಿರೋಧಿಸಿ ಸರಕಾರದ ತೀರ್ಮಾನವನ್ನು ಬದಲಾಯಿಸಬೇಕೆಂದು ಒತ್ತಾಯಿಸಿ, ಬೀಡಿ ಕೆಲಸವಿಲ್ಲದ ದಿನಗಳಲ್ಲಿ ಕಾರ್ಮಿಕರಿಗೆ ಮಾಲಕರು ಜೀವನ ನಿರ್ವಹಣಾ ಪರಿಹಾರ ನೀಡಬೇಕು, ಯಾವುದೇ ಅಡೆ ತಡೆ ಇಲ್ಲದೇ ಬೀಡಿ ಕೈಗಾರಿಕಾ ಕೆಲಸ ನಡೆಸಲು ಕೇಂದ್ರ ಸರಕಾರ ಅವಕಾಶ ನೀಡಬೇಕೆಂದು ಒತ್ತಾಯಿಸಿ ಬೀಡಿ ಕಾರ್ಮಿಕರು ಚಳುವಳಿ ನಡೆಸುತ್ತಿದ್ದಾರೆ.





ಅಬ್ರಾಹಂ ಕರ್ಕಡ ಮತ್ತು ಕೊಲ್ಲೂರು ಕಬ್ಬಿಣ..........

ಪುಟ 7 ರಿಂದ

ಕೊಲ್ಲೂರು ಕಬ್ಬಿಣದ ವಿಶೇಷತೆ

ಅವರ ಕತೆ ವೈಜ್ಞಾನಿಕ ಭಾಷೆಯಲ್ಲಿ ಇರದಿದ್ದರೂ, ಅದರ ತಾಂತ್ರಿಕತೆಯನ್ನು ಗ್ರಹಿಸುವುದು ನನಗೆ ಕಷ್ಟವಾಗಲಿಲ್ಲ. ಅವರು ಕುಲುಮೆ ಹಾಕುವ ಮಣ್ಣು ಕೇವಲ ಮಣ್ಣಾಗಿರದೆ ಸಂಸ್ಕರಿಸಲ್ಪಟ್ಟ ಕಬ್ಬಿಣದ ಅದಿರಾಗಿರುತ್ತದೆ. ಕೊಡಚಾದ್ರಿ ಬೆಟ್ಟದ ಸಾಲಿನ ಹೇರಳವಾಗಿ ಸಿಗುವ ಕಬ್ಬಿಣದ ಅದಿರಿನಲ್ಲಿ ಕಬ್ಬಿಣದ ಅಂಶ ಹೆಚ್ಚಿರುತ್ತದೆ. ಅದರೊಂದಿಗೆ ಮ್ಯಾಂಗನೀಸ್ ಅಂಶವೂ ಉಳಿದೆಡೆ ಸಿಗುವ ಅದಿರಿನಲ್ಲಿದ್ದಕ್ಕಿಂತ ಹೆಚ್ಚಿರುತ್ತದೆ. ಇಂತಹ ಅದಿರಿನಿಂದ ಸಂಸ್ಕರಿಸಿದ ಕಬ್ಬಿಣಕ್ಕೆ ಹೆಚ್ಚಿನ ತುಕ್ಕನ್ನು ವಿರೋಧಿಸುವ ಶಕ್ತಿ ಇರುತ್ತದೆ. ಇವರು ಕಬ್ಬಿಣವನ್ನು ಘನರೂಪದಲ್ಲೇ ತಯಾರಿಸುವುದರಿಂದ ಇದರಲ್ಲಿ ರಂಜಕ ಬೇರ್ಪಡದೆ ಹಾಗೇ ಉಳಿದಿರುತ್ತದೆ. ರಂಜಕದ ಆಕ್ಸೈಡ್ ಮತ್ತು ಮ್ಯಾಂಗನೀಸ್ ಆಕ್ಸೈಡ್ ಗಳ ಜಂಟಿ ಕಾರ್ಯಾಚರಣೆಯಿಂದ ಇದು ತುಕ್ಕು ವಿರೋಧಿ ಆಗಿರುತ್ತದೆ. ಆದರೂ ಇದರ ಇತರೇ ಗುಣಗಳನ್ನು ಆಧುನಿಕ ಉಕ್ಕಿನೊಡನೆ ಹೋಲಿಸಬಾರದೆಂಬ ಎಚ್ಚರಿಕೆಯೂ ಇರಬೇಕಾಗುತ್ತದೆ.

"ಕರ್ಕಡರೇ, ಈ ಕಬ್ಬಿಣವನ್ನು ಅವರು ಏನು ಮಾಡುತ್ತಿದ್ದರು?" ಎಂದು ನಾನು ಕೇಳಿದೆ. ಕರ್ಕಡರು ಮುಂದುವರಿದರು "ಅವರು ಅದನ್ನು ಕಬ್ಬಿಣದ ಕೆಲಸಮಾಡುವ ವಿಶ್ವಕರ್ಮರಿಗೆ ಕೊಟ್ಟು ಅದರಿಂದ ತಮಗೆ ಬೇಕಾದ ಕತ್ತಿ, ಹಾರಗೋಲು, ಕೊಡಲಿ ಇನ್ನಿತರ ತಕಾಲಿ ಆಯುಧಗಳನ್ನು ಮಾಡಿಕೊಳ್ಳುತ್ತಿದ್ದರು. ಹೆಚ್ಚಿಗೆ ಉಳಿದ ಕಬ್ಬಿಣದ ಹತಾರಗಳನ್ನು ಕುಂದಾಪುರದ ಸಂತೆಗೆ ತಂದು ಮಾರುತ್ತಿದ್ದರು. ಕಾರ್ಖಾನೆ ಉಕ್ಕು ಮಾರುಕಟ್ಟೆಗೆ ದೊಡ್ಡ ಮಟ್ಟದಲ್ಲಿ ಬರಲು ಪ್ರಾರಂಭಿಸಿದಂತೆ ಇವರ ವ್ಯಾಪಾರ ಸೋತಿತು". ಬುಡಕಟ್ಟು ಜನಾಂಗದವರು ಮಾಡುವ ಕಬ್ಬಿಣಕ್ಕೆ ತುಕ್ಕು ವಿರೋಧಕ ಶಕ್ತಿ ಮಾತ್ರವಲ್ಲ, ಇದರ ಸವೆತ ನಿರೋಧಕ ಶಕ್ತಿಯೂ ಹೆಚ್ಚಿರುತ್ತದೆ. ಆದ್ದರಿಂದ ವ್ಯವಸಾಯ ಕೆಲಸಗಳಲ್ಲಿ ಈ ಕಬ್ಬಿಣದ ಹತಾರಗಳು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತವೆ.

"ಕರ್ಕಡರೇ, ಅವರು ನಿಮ್ಮ ರೈತ ಸಂಘಟನೆ ಸೇರಿದರೆ?" ಕೇಳಿದೆ ನಾನು. "ಇಲ್ಲ, ಅವರನ್ನು ರೈತರಾಗಿ ಸಂಘಟಿಸುವುದು ಕಷ್ಟವಿದೆ. ಅವರಲ್ಲಿ ಬಂದ ಸಮಸ್ಯೆಗಳನ್ನು ಅವರೇ ಸುಧಾರಿಸಿಕೊಳ್ಳುತ್ತಾರೆ. ಆದರೆ ಅವರಿಗೆ ಹೊರಗಿನಿಂದ ಕೆಲವು ಸಮಸ್ಯೆಗಳು ಬರುತ್ತವೆ. ಅವರು ಕಾಡುತ್ಪತ್ತಿಯನ್ನು ತೆಗೆಯುವ ಹಾಗಿಲ್ಲ, ಆಹಾರಕ್ಕಾಗಿ ಹಂದಿಯನ್ನು ಕೊಂದರೆ, ಉರುವಲಿಗಾಗಿ ಒಣಸೌದೆಯನ್ನು ಕಾಡಿನಿಂದ ತಂದರೆ, ಒಂದು ಬಾಟಲು ಜೇನು ತುಪ್ಪ ಮಾರಿದರೆ, ಬೆತ್ತದ ಕುರ್ಚಿ ಇತ್ಯಾದಿಗಳನ್ನು ಮಾಡಿದರೆ ಅವರನ್ನು ಬಂಧಿಸಲಾಗುತ್ತದೆ. ಅವರಿಗೆ ಕಾಡಿನಲ್ಲಿರುವ ಅನೇಕ ಗಿಡ ಮೂಲಿಕೆ, ಸುಗಂಧ ದ್ರವ್ಯದ ಪರಿಚಯ ಇದೆ. ಆದರೆ ಆ ಕಾಡಿನ ಮಕ್ಕಳು ಕಾಡನ್ನು ಮುಟ್ಟುವಂತಿಲ್ಲ. ಉಳಿದ ನಾಗರಿಕ ಸಮಾಜ ಇವರನ್ನು ಅನಾಗರಿಕ ಜನಾಂಗ ಎಂದು ನಂಬಿದೆ. ಪೋಲೀಸರಿಂದ ದೌರ್ಜನ್ಯ ನಡೆಯುತ್ತದೆ. ಸರಕಾರೀ ಅಧಿಕಾರಿಗಳನ್ನು ಅವರು ನಂಬುವುದಿಲ್ಲ. ಇಂತಹ ಅನೇಕ ಒತ್ತಡಗಳು ಅವರಿಗಿವೆ. ಆದರೆ ಅವರನ್ನು ಸಂಘಟಿಸಲು ಅವರೊಂದಿಗೆ ಇರಬೇಕಾಗುತ್ತದೆ".

"ಹಾಗಾದರೆ ಅವರು ನಿಮ್ಮನ್ನು ಮರೆತು ಬಿಟ್ಟರೆ?" ಎಂದೆ ನಾನು. "ಖಂಡಿತ ಇಲ್ಲ. ಅನೇಕ ದಿನಗಳ ನಂತರ ಅವರು ಬಂದರು. ಬರುವಾಗ ನನಗೊಂದು ಉಡುಗೊರೆ ತಂದರು. ಜಿಂಕೆಯ ಮಾಂಸಕ್ಕೆ ಉಪ್ಪನ್ನು ಹಾಕಿ, ಅದನ್ನು ಅವರಿಗೆ ಮಾತ್ರ ತಿಳಿದಿರುವ ವಿಧಾನದಿಂದ ಮಣ್ಣಿನ ಮಡಕೆಯಲ್ಲಿ ಸಂಸ್ಕರಿಸುತ್ತಾರೆ. ಮಾಂಸ ಬೆಣ್ಣೆಯಂತಾಗಿ ಬಾಯಲ್ಲಿ ನೀರೂರುತ್ತದೆ." ಎಂದರು. ಕರ್ಕಡರ ಅನೇಕ ಉತ್ತಮ ಗುಣಗಳಲ್ಲಿ ಬಾಯಿ ಚಾಪಲ್ಯವೂ ಒಂದು. ಅದನ್ನು ಕೇಳಿ ನಾನು ನಕ್ಕು ಬಿಟ್ಟೆ, ಅವರು ನಕ್ಕು ಬಿಟ್ಟರು.

ದಾಸು ಭಂಡಾರರ ಜತೆ ಹಳ್ಳಿಬೇರಿನತ್ತ

ಕರ್ಕಡರ ಈ ಕತೆ ಕೇಳಿ ನನಗೆ ದನದ ಮೂಗಿನೊಳಗೆ ನೊಣ ಹೊಕ್ಕಂತಾಯಿತು. ಹಳ್ಳಿಬೇರಿಗೆ ಹೋಗುವ ಚಡಪಡಿಕೆ ಪ್ರಾರಂಭವಾಯಿತು. ನನ್ನ ಕೆಲಸದ ಒತ್ತಡದಿಂದಾಗಿ ಹೋಗಲು ಸಾಧ್ಯ ಆಗಲಿಲ್ಲ. ಈ ಪ್ರಸ್ತಾಪವನ್ನು ದಾಸು ಭಂಡಾರರ ಹತ್ತಿರ ಇಟ್ಟೆ. ದಾಸು ಭಂಡಾರರು ನನಗೆ ಚಿಕ್ಕಂದಿನಿಂದಲೂ ಪರಿಚಯ. ಎಂದಿನಿಂದ ಅವರು ಊರನ್ನು ಪ್ರವೇಶಿಸಿದರೋ ಅಂದಿನಿಂದ ಅವರ ಶಿಸ್ತು, ಚೊಕ್ಕಟ ಮಾತು, ಕ್ಷೌರ ಮಾಡುವ ಕ್ರಮ ಊರಿನ ಎಲ್ಲಾ ಎಳೆಯರ ಮೆಚ್ಚುಗೆಗೆ ಪಾತ್ರವಾಗಿತ್ತು. ಇವರ ರೈತ ಸಂಘದ ಕಾರ್ಯಚಟುವಟಿಕೆ ನನ್ನನ್ನು ತುಂಬಾ ಪ್ರಭಾವಿಸಿತ್ತು. ಇವರ ಹತ್ಯೆ ಮಾಡುವ ಪ್ರಯತ್ನವಾದಾಗ ಇವರಿಗೆ ಚಿಕ್ಕ ನೆರವನ್ನು ನೀಡಿದ್ದೆ. ಇಂದಿಗೂ ಯುವಕನಂತೆ ಓಡಾಡಿ ಸಂಘಟನೆ ಕಟ್ಟುತ್ತಾರೆ. ದಾಸು ಭಂಡಾರರು ನನಗೆ ಸಹಾಯ ಮಾಡುವುದಾಗಿ ಭರವಸೆ ಇಟ್ಟರು.

ಒಂದು ದಿನ ಹಳ್ಳಿಬೇರಿಗೆ ಹೊರಟೆವು. ದಾಸು ಭಂಡಾರರು ತನ್ನೊಡನೆ ಬಸವ ಎಂಬ ಕಾಮ್ರೇಡ್ ನನ್ನು ಜತೆಗೂಡಿಸಿಕೊಂಡರು. ಬಸವ ಎನ್ನುವವರು ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿದ್ದರು. ಕೊಲ್ಲೂರಿಗೆ ಹೋಗಿ ನಾವು ಹಳ್ಳಿಬೇರಿನ ದಾರಿ ತಿಳಿಯದೇ ಚಡಪಡಿಸಿದೆವು. ಬಸವರು ಕಷ್ಟಪಟ್ಟು ಹಳ್ಳಿ ಬೇರಿನ ಯುವಕನೊಬ್ಬನನ್ನು ಹುಡುಕಿ ತೆಗೆದರು. ಆ ಯುವಕ ದಾರಿ ಏನೋ ಹೇಳಿದ. ಆದರೆ ನಮ್ಮೊಡನೆ ಕೂಡಿಕೊಳ್ಳಲು ಒಪ್ಪಲಿಲ್ಲ. ಆ ಊರಿಗೆ ಕಾರಿನಲ್ಲಿ ಹೋಗಲು ಸಾಧ್ಯವಿಲ್ಲ, ವಿಶೇಷವಾದ ಜೀಪೊಂದರಲ್ಲಿ ಇಳಿದಾದ ಕಣಿವೆಯಲ್ಲಿ ಮರಗಳ ಮಧ್ಯದಿಂದ ಹೋಗಬಹುದು, ನೆಲದ ಮೇಲೆ ಒಣ ತರಗೆಲೆಗಳು ಹರಡಿರುವುದರಿಂದ ಅತೀ ಜಾಗರೂಕತೆಯಿಂದ ಹೋಗಬೇಕಂತೆ ಎಂದು ಬಸವರು ತಿಳಿಸಿದರು. ಒಂದು ಜೀಪನ್ನು ಗೊತ್ತು ಮಾಡಿ ಅಂತೂ ಹಳ್ಳಿಬೇರಿಗೆ ಹೋದೆವು. ನಮ್ಮೊಂದಿಗೆ 10 ವರ್ಷದ ನನ್ನ ಮಗ ಗೌತಮ 12 ವರ್ಷದ ಅಕ್ಕನ ಮಗಳು ತೇಜಸ್ವಿನಿ ಸೇರಿಕೊಂಡಿದ್ದರು. ಅವರನ್ನು ಕೊಲ್ಲೂರಲ್ಲೇ ಉಳಿಸುವ ಪ್ರಯತ್ನ ವಿಫಲವಾಯಿತು. ಹೀಗೆ ನಮ್ಮ ಗುಂಪು ಹಳ್ಳಿ ಬೇರನ್ನು ಸೇರಿತು.

ತನಗೇನೋ ಆಪತ್ತು ಕಾದಿರಬೇಕೆಂಬ ಆತಂಕ ಇರಬಹುದು, ಇಡೀ ಹಳ್ಳಿಬೇರಿನ ಜನ ಹೊರಗೆ ಬಂದು ನಮ್ಮನ್ನು ನೋಡುತ್ತಿದ್ದರು. ಅಲ್ಲಿರುವ ಹಿರಿಯರೊಡನೆ ಮಾತನಾಡಿದೆವು. ಐದು ನಿಮಿಷಗಳ ಸಂಭಾಷಣೆಯಲ್ಲೇ ನಾಗರಿಕ ಸಮಾಜಕ್ಕೂ ಬುಡಕಟ್ಟಿನ ಜನಾಂಗದವರಿಗೂ ಮಧ್ಯ ಎಂತಹ ಕಂದರ ಇದೆ ಎನ್ನುವುದು ತಿಳಿದು ಬಂತು. ಅವರ ಪ್ರಶ್ನೆಯೂ ಸರಿಯಾಗಿಯೇ ಇತ್ತು. "ನಿಮಗೆ ಪಟ್ಟಣದಲ್ಲಿ ಮಣಗಟ್ಟಲೆ ಕಬ್ಬಿಣ ದೊರೆಯುತ್ತದೆ. ನಮ್ಮ ಕಬ್ಬಿಣದಿಂದ ನಿಮಗೇನಾಗಬೇಕು? ನೀವು ಬಂದಿರುವ ಕಾರಣ ಬೇರೆ ಇರಬಹುದು" ಇದು ಅವರ ವಾದ. ಕಬ್ಬಿಣದ ಚಾರಿತ್ರಿಕ ಪ್ರಾಮುಖ್ಯತೆ, ಬುಡಗಟ್ಟು ಜನಾಂಗದ ಅಧ್ಯಯನದ ಪ್ರಾಮುಖ್ಯತೆ ಇವೆಲ್ಲವನ್ನು ಅವರಿಗೆ ತಿಳಿಹೇಳುವ ಬಗೆಯಾದರೂ ಹೇಗೆ? ಒಬ್ಬ ಮುದುಕನಂತೂ ನಮ್ಮನ್ನು ನೋಡಿ ಹಲ್ಲು ಕಡಿಯುತ್ತಿದ್ದ. ನಮ್ಮ ಪರಿಸ್ಥಿತಿ ಚೆನ್ನಾಗಿರಲಿಲ್ಲ, ಅವರೊಂದಿಗೆ ಹೊಂದಾಣಿಕೆ ತರಲು ಹೆಣಗಾಡಿದೆವು. ಅವರ ಬಳಿ ಇದ್ದ ಹತಾರಗಳನ್ನು ಪರೀಕ್ಷಿಸಿದೆ. ಹೊರಗಿನ ಗೋಚರಕ್ಕೆ ಅದ್ಯಾವು ಫ್ಯಾಕ್ಟರಿ ಕಬ್ಬಿಣದಂತಿರಲಿಲ್ಲ. ಕೊನೆಗೂ ಒಂದು ಗುಟ್ಟನ್ನು ಬಿಟ್ಟು ಕೊಟ್ಟರು.

ತಮ್ಮ ತಾತಂದಿರು ಬೆಟ್ಟದ ಮತ್ತೊಂದು ಮೂಲೆಯಲ್ಲಿರುವ ವಿಶ್ವಕರ್ಮರಿಂದ ಹತಾರಗಳನ್ನು ಮಾಡಿಸಿ ಕೊಂಡಿರುತ್ತಿದ್ದರು. ಅವರಲ್ಲಿ ವಿಚಾರಿಸುವಂತೆ ಸೂಚಿಸಿದರು. ದಟ್ಟ ಕಾಡಿನ ಒಂದು ಮೂಲೆಯಲ್ಲಿ ಆ ವಿಶ್ವಕರ್ಮರ ಕಬ್ಬಿಣ ಸಾಲೆಯನ್ನು ಕಷ್ಟಪಟ್ಟು ಹುಡುಕಿದೆವು. ಅದೃಷ್ಟವಶಾತ್ ಯುವ ವಿಶ್ವಕರ್ಮರು ಅಲ್ಲೇ ಕೆಲಸ ಮಾಡುತ್ತಿದ್ದರು. ಅವರ ಹತ್ತಿರ ನಮ್ಮ ಉದ್ದೇಶವನ್ನು ಅರುಹಿದೆವು. ಅವರು ಹೀಗೆಂದರು "ನೋಡಿ ನನಗೆ ಆ ಕಬ್ಬಿಣದಲ್ಲಿ ಕೆಲಸ ಮಾಡಿದ ಅನುಭವ ಇಲ್ಲ. ನಾವು ಈಗ ಫ್ಯಾಕ್ಟರಿ ಕಬ್ಬಿಣವನ್ನು ಉಪಯೋಗಿಸುತ್ತೇವೆ. ಆದರೆ ನನ್ನ ತಾತ ಬುಡಕಟ್ಟಿನವರು ಕೊಟ್ಟ ಕಬ್ಬಿಣದಲ್ಲಿ ಕೆಲಸ ಮಾಡುತ್ತಿದ್ದುದ್ದು ಹೌದು. ನೋಡಿ ನನಗೆ ನನ್ನ ತಾತ ಅದರ ಒಂದು ತುಂಡನ್ನು ಇಟ್ಟುಕೊಳ್ಳುವಂತೆ ಕೊಟ್ಟರು. ನನಗದರ ಉಪಯೋಗವಿಲ್ಲ. ನಿಮಗೆ ಬೇಕಿದ್ದಲ್ಲಿ ತೆಗೆದುಕೊಂಡು ಹೋಗಿ. ಈ ಕಬ್ಬಿಣದ ತುಂಡು ನೋಡಿ ನಮಗೆ ತುಂಬಾ ಸಂತೋಷವೂ ಉದ್ವೇಗವೂ ಆಯಿತು. "ಸರಿ, ಇದರ ಕ್ರಯ ಎಷ್ಟು?" ಎಂದು ಪ್ರಶ್ನಿಸಿದೆ", ನಾನು. "ಇದಕ್ಕೆಲ್ಲ ಹಣ ಏಕೆ? ನನಗಂತೂ ಉಪಯೋಗವಿಲ್ಲ, ನೀವೇ ತೆಗೆದುಕೊಂಡು ಹೋಗಿರಿ" ಎಂದರು ಆ ವಿಶ್ವಕರ್ಮರು. ಎಂತಹ ಮುಗ್ಧತೆ. ಅವರ ಕಿಸೆಗೆ ಬೇಡ ಬೇಡ ಎಂದರೂ ನೂರು ರೂಪಾಯಿಯ ನೋಟೊಂದನ್ನು ತುರುಕಿದೆವು. "ಉಡುಪರೇ, ನೀವು ಕೊಟ್ಟ ಹಣ ಹೆಚ್ಚಾಗಲಿಲ್ಲವೇ?" ಎಂದರು ದಾಸು. "ಅದರ ಬೆಲೆ ಕಟ್ಟಲು ಸಾಧ್ಯವೇ, ಭಂಡಾರರೇ?" ಉತ್ತರಿಸಿದೆ ನಾನು. ದಾರಿಯಲ್ಲಿ ಹೋಗುವಾಗ ಜೀಪಿನ ಡ್ರೈವರ್ ಹೇಳಿದ "ಬೋ... ಮಕ್ಕಳು, ನಮ್ಮ ಹತ್ತಿರ ಬಾಯಿ ಬಿಡುವುದಿಲ್ಲ. ಅವರಿಗೆ ಪೋಲೀಸರನ್ನು ಕರೆಯಿಸಿ ಶಾಸ್ತಿ ಮಾಡಿಸಬೇಕು..." ಬುಡಕಟ್ಟು ಜನಾಂಗದವರು ನಮ್ಮಿಂದ ದೂರ ಉಳಿಯಲು ಬೇರೆ ಕಾರಣ ಹುಡುಕಬೇಕೇ?

ಕೊಲ್ಲೂರು ಕಬ್ಬಿಣದ ತಾಂತ್ರಿಕ ವಿಶ್ಲೇಷಣೆ

ಆ ಕಬ್ಬಿಣದ ತುಂಡನ್ನು ನನ್ನ ಡಿಪಾರ್ಟಮೆಂಟಿಗೆ ತೆಗೆದುಕೊಂಡು ಬಂದೆ (Department of Metallurgical & Materials Engineering, NITK, Surathkal) ಅದರ ಲೋಹ ಶಾಸ್ತ್ರೀಯ ಅಧ್ಯಯನವನ್ನು ನಡೆಸಿದೆ. ಬುಡಕಟ್ಟು ಜನರ ಕಬ್ಬಿಣಕ್ಕೆ ಕೆಲವು ರುಜುಗಳಿರುತ್ತವೆ. ಅವನ್ನೆಲ್ಲ ನೋಡಿದಾಗ ಅಬ್ರಾಹಂ ಕರ್ಕಡರ ಸಂಶೋಧನೆ ಸತ್ಯಾ ಸತ್ಯತೆ ಅರಿವಿಗೆ ಬಂತು. ಕೊಡಚಾದ್ರಿಯ ಕಬ್ಬಿಣವನ್ನು ಇದೇ ಜನಾಂಗದವರು ಮಾಡಿರಬಹುದೆಂದು ತರ್ಕಿಸಬಹುದಲ್ಲವೇ? ಇಲ್ಲೆ ಇರುವುದು ರಾಜಕೀಯ. ಕೊಡಚಾದ್ರಿಯ ಕಂಬವನ್ನು ನೋಡಿದ ವಿಜ್ಞಾನಿಗಳ ಒಂದು ಬಣ, ಕಬ್ಬಿಣದ ತಯ್ಯಾರಿಯ ವಿಜ್ಞಾನವೆಲ್ಲ ವೇದ ಮೂಲದಿಂದ ಬಂದವು, ಅವುಗಳನ್ನು ಬ್ರಾಹ್ಮಣ ಋಷಿಗಳು ಇತರರಿಗೆ ತಿಳಿಸಿದರು ಎನ್ನುವ ವಾದವನ್ನು ಮುಂದಿಟ್ಟಿದೆ. ಇವರು ತಿಳಿಯಬೇಕಾದ ಒಂದು ವಿಚಾರ ಇದೆ. ಕಬ್ಬಿಣ ತಯಾರಿಕೆಯ ತಾಂತ್ರಿಕತೆ ಇದರ ವಿಜ್ಞಾನಕ್ಕಿಂತ ಮೊದಲಿಗೆ ರೂಪುಗೊಂಡಿತ್ತು. ಕಬ್ಬಿಣ ತಯಾರಿಕೆಯ ವಿಜ್ಞಾನ 19ನೇ ಶತಮಾನದಲ್ಲಿ ಹುಟ್ಟಿ 20ನೇ ಶತಮಾನದಲ್ಲಿ ಉಚ್ಛ್ರಾಯಕ್ಕೆ ಬಂದು ಇನ್ನೂ ಮುಂದುವರಿಯುತ್ತಿದೆ. ಕೊಡಚಾದ್ರಿಯ ಬೆಟ್ಟದಲ್ಲಿ ಉತ್ತಮ ಮಟ್ಟದ ಕಬ್ಬಿಣದ ಅದಿರಿರುತ್ತದೆ. ಅದರ ಮೇಲೆ ದಟ್ಟ ಕಾಡುಗಳಿವೆ. ಈ ಕಾಡುಗಳಿಗೆ ಕಾಡ್ಗಿಚ್ಚು ಹಿಡಿಯುವುದು ಸಾಮಾನ್ಯ ಸಂಗತಿ. ಕಬ್ಬಿಣದ ಅದಿರಿನೊಂದಿಗೆ ಸೌದೆಯ ಮಸಿ ಹೆಚ್ಚಿನ ಉಷ್ಣದಲ್ಲಿ ಸೇರಿದಾಗ ಕಬ್ಬಿಣ ಸಣ್ಣ ಮಟ್ಟದಲ್ಲಿ ಉತ್ಪತ್ತಿ ಆಗಿರಬಹುದು. ಇದನ್ನು ಕಾಡಿನಲ್ಲೆ ಜೀವಿಸಿರುವ ಬುಡಕಟ್ಟು ಜನಾಂಗದವರು ನೋಡಿ ಅದನ್ನು ಧಾರ್ಮಿಕ ಕಾರ್ಯಾಚರಣೆಯಲ್ಲಿ ಬಂಧಿಸಿರಬೇಕು. ಇದು ನಿಸರ್ಗದೊಡನೆ ಮಾನವನ ನಿರಂತರ ಹೋರಾಟದ ಫಲ. ಇಂದು ನೋಡಿದ್ದೆಲ್ಲ ಅಂದಿನ ವೇದಗಳಲ್ಲಿತ್ತು ಎಂದು ಹೇಳುವುದು ಎಷ್ಟು ಅಸಮಂಜಸ. ●

ಜನರ ನಡುವೆ ಸಕ್ರಿಯ ಕೆಲಸ ಹೋರಾಟವೇ ಯಶಸ್ಸಿನ ಗುಟ್ಟು : ಅಬ್ರಹಾಂ ಕರ್ಕಡ

(25 ವರ್ಷಗಳ ಹಿಂದೆ 'ಐಕ್ಯರಂಗ' ವಾರಪತ್ರಿಕೆಗೆ ನೀಡಿದ ಸಂದರ್ಶನದ ಆಯ್ದ ಭಾಗಗಳು, ಸಂದರ್ಶಕರು: ವಿಶ್ವ ಕುಂದಾಪುರ)

ಐಕ್ಯರಂಗ: ಸಿಪಿಐ(ಎಂ) ಕುಂದಾಪುರ ಪುರಸಭೆಗೆ ಯಾವಾಗಿನಿಂದ ಸ್ಪರ್ಧಿಸಲು ಆರಂಭಿಸಿತು?

ಅ. ಕ: ವಡೇರ ಹೋಬಳಿ ಪ್ರದೇಶದ 6 ಮತ್ತು 9ನೇ ವಾರ್ಡಿನ ನಾಲ್ಕು ಸ್ಥಾನಗಳಿಗೆ 1969 ರಿಂದ ನಮ್ಮ ಪಕ್ಷ ಸ್ಪರ್ಧಿಸಲು ಆರಂಭಿಸಿತು. ಆಗ ಅದು ಟೌನ್ ಪಂಚಾಯತಿ ಆಗಿತ್ತು. ಅದಕ್ಕೂ ಮುಂಚೆ ಇತರ ಪಕ್ಷಗಳನ್ನು ನಾವು ಬೆಂಬಲಿಸುತ್ತಿದ್ದೆವು.

69 ರಲ್ಲಿ ಪ್ರಜಾ ಸೋಷಲಿಸ್ಟ್ ಪಕ್ಷ (ಪಿಎಸ್‌ಪಿ) ಮತ್ತು ಸಿಪಿಐ(ಎಂ) ಐಕ್ಯರಂಗ ಬಹುಮತ ಸಾಧಿಸಿತು. ನಮ್ಮ ಪಕ್ಷಕ್ಕೆ ನಾಲ್ಕು ಸ್ಥಾನಗಳು ಬಂದವು. ಸ್ಪರ್ಧಿಸಿದ್ದು ನಾಲ್ಕರಲ್ಲಿ ಮಾತ್ರ. ಆಗ ನಾನು ಟೌನ್ ಪಂಚಾಯತಿಯ ಉಪಾಧ್ಯಕ್ಷನಾಗಿ ಆಯ್ಕೆಯಾದೆ.

ಐಕ್ಯರಂಗ: ಸಂಘಟನಾತ್ಮಕವಾಗಿ ಪಕ್ಷದ ಹೋರಾಟಗಳ ಪಾತ್ರವೇನು?

ಅ. ಕ: ಆ ಹೋರಾಟಗಳೇ ಪಕ್ಷದ ಯಶಸ್ಸಿನ ಜೀವಾಳ. 1960ರ ದಶಕದ ಆರಂಭದಲ್ಲಿ ಫ್ಯಾಕ್ಟರಿ ಸಂಘಟನೆ ಆರಂಭಗೊಂಡಿತು. 1965ರಲ್ಲಿ ರೈತ ಸಂಘ ಆರಂಭವಾಗುವುದರೊಂದಿಗೆ ಪಕ್ಷಕ್ಕೆ ಒಂದು ಸಂಘಟನಾತ್ಮಕ ಸ್ವರೂಪ ದೊರಕಿತು.

ಆರಂಭ ಘಟ್ಟದಲ್ಲಿ ರೈತರ ಭೂಮಿಯನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಹೆಚ್ಚಿನ ಗಮನವನ್ನು ಕೇಂದ್ರೀಕರಿಸಲಾಯಿತು. ಹೆಚ್ಚಿನವರು ರೈತರೂ ಆಗಿದ್ದರೂ ಕಾರ್ಮಿಕರೂ ಆಗಿದ್ದರು. ಫ್ಯಾಕ್ಟರಿಗಳಲ್ಲಿ ದುಡಿದು ಗೇಣಿ ಸಂದಾಯ ಮಾಡಬೇಕಾಗುತ್ತಿತ್ತು.

ಭೂ ಸುಧಾರಣೆ ಕಾನೂನು ಬಂದ ಮೇಲೆ ಭೂಮಿಗಾಗಿ ಅರ್ಜಿಗಳನ್ನು ಹರಿಸಿದ್ದಲ್ಲದೆ ಭೂಮಿ ಕೈ ತಪ್ಪಿ ಹೋಗದಂತೆ ತೀಕ್ಷ್ಣರೀತಿಯ ಹೋರಾಟಗಳನ್ನು ಪಕ್ಷ ನಡೆಸಿತು. ಭೂ ಮಾಲೀಕರ ದಬ್ಬಾಳಿಕೆಗಳನ್ನು ಪಕ್ಷದ ಸಕ್ರಿಯ ಮಧ್ಯಪ್ರವೇಶದಿಂದ ಎದುರಿಸಲಾಯಿತು.

ಐಕ್ಯರಂಗ: ರಚನಾತ್ಮಕ – ಸಾಮಾಜಿಕ ಕಾರ್ಯಕ್ರಮಗಳು....

ಅ. ಕ: ನಮ್ಮ ಊರು ನದಿ ತೀರದಲ್ಲಿರುವುದರಿಂದ ನೆರೆಯನ್ನು ಅನುಭವಿಸಬೇಕಾಗುತ್ತದೆ. 1982 ರಲ್ಲಿ ಭಾರಿ ನೆರೆ ಬಂದಾಗ ಜನರನ್ನು ರಕ್ಷಿಸುವಲ್ಲಿ ಕಾರ್ಯಕರ್ತರು ದುಡಿದರು. ಆ ಕಾಲದಲ್ಲೇ ನೆರೆ ಪರಿಹಾರ ನಿಧಿಗೆ ಹಂಚಿನ ಕಾರ್ಮಿಕರು ಹತ್ತು ಸಾವಿರ ರೂಪಾಯಿ ಕೊಡುಗೆ ನೀಡಿದರು.

ಅಂದಿನ ನೆರೆಯಲ್ಲಿ ಕೆಲವು ಪ್ರದೇಶದ ಜೋಪಡಿಗಳೆಲ್ಲಾ ಕೊಚ್ಚಿಹೋದವು. ಆನಂತರ ಅವುಗಳನ್ನೆಲ್ಲಾ ಹಂಚಿನ ಮನೆಗಳನ್ನಾಗಿ ಮಾಡಲಾಯಿತು.

ನೆರೆಯಂಥ ಪ್ರಶ್ನೆ ಮಾತ್ರವಲ್ಲ, ಯಾವುದೇ ಮನೆಯಲ್ಲಿ ಮದುವೆಯಿರಲಿ – ಮುಂಜಿಯಿರಲಿ ಯಾರಾದರೂ ಮೃತ ಪಟ್ಟರೂ ಅಲ್ಲಿ ನಮ್ಮ ಮುಖಂಡರು – ಕಾರ್ಯಕರ್ತರೂ ಹಾಜರಿದ್ದು ಜನರ ಸುಖದಲ್ಲಿ ದುಃಖದಲ್ಲಿ ಸಮನಾಗಿ ಭಾಗಿಯಾಗುತ್ತಾರೆ. ಕಾರ್ಮಿಕರಿರಲಿ, ರೈತರಿರಲಿ ಅಥವಾ ಮಧ್ಯಮ ವರ್ಗದ ಜನರೇ ಇರಲಿ, ಅವರ ಸುಖದುಃಖಕ್ಕೆ ಸ್ಪಂದಿಸುವ ಪಕ್ಷ ಎನ್ನುವುದಕ್ಕೆ ಕುಂದಾಪುರದಲ್ಲಿ ಪಕ್ಷದ ಅನುಭವವೇ ಸಾಕ್ಷಿ.

ಯಾವುದಾದರೂ ಅಭಿವೃದ್ಧಿ ಕಾರ್ಯಗಳು ನಡೆಯುವಾಗ ನಮ್ಮ ಕೌನ್ಸಿಲರುಗಳೇ ಖುದ್ದಾಗಿ ಇದ್ದು ಕೆಲಸದ ಉಸ್ತುವಾರಿಯನ್ನು ನೋಡಿಕೊಳ್ಳುತ್ತಾರೆ. ಅಂಥದ್ದೇನಾದರೂ ಕೆಲಸವಿದ್ದಲ್ಲಿ ವಿಶೇಷವಾಗಿ ವಿ.ನರಸಿಂಹ ಅಲ್ಲಿದ್ದಾರೆಂದೇ ಲೆಕ್ಕ.

ನಾವೀಗ ಹೊಸದಾಗಿ ಜಯಿಸಿರುವ ಸ್ಥಾನಗಳಲ್ಲಿ ಕೋಡಿಯೂ ಒಂದು. ಅರಬ್ಬಿ ಸಮುದ್ರ ಕಿನಾರೆಯಲ್ಲಿರುವ ಈ ಪ್ರದೇಶದಲ್ಲಿ ಎಷ್ಟೇ ರಾತ್ರಿಯಿರಲಿ, ಹಿಂದೂವೇ ಇರಲಿ, ಮುಸ್ಲಿಮೇ ಇರಲಿ ರೋಗರುಜಿನ ಬಂದಿದೆ, ಆಸ್ಪತ್ರೆಗೆ ಹೋಗಬೇಕು ಅಥವಾ ಇನ್ನಾವುದೋ ತುರ್ತು ಕೆಲಸ ಇದೆ, ಸ್ವಲ್ಪ ರಿಕ್ಷಾ ಬೇಕು ಎಂದು ಮನವಿ ಮಾಡಿದರೆ ಸಿಐಟಿಯು ಸದಸ್ಯ ಕಾಳ ಸದಾ ಸಿದ್ಧ. ಬಹುತೇಕವಾಗಿ ಆ ಕೆಲಸಗಳಿಂದಲೇ ಅವರಿಗೆ ಅಲ್ಲಿನ ಜನರ ಪ್ರೀತಿಯನ್ನು ಗಳಿಸಿರುವುದು ಸಾಧ್ಯವಾಯಿತು. ➡

ಉಡುಪಿಯ ದುಡಿಯುವ ಜನರ ನೇತಾರ ಕಾ. ಸಿ. ನಾರಾಯಣ

– ಕೆ.ಶಂಕರ್



ಇತ್ತೀಚೆಗೆ 81ನೇ ವಯಸ್ಸಿನಲ್ಲಿ ನಿಧನರಾದ ಉಡುಪಿ ಜಿಲ್ಲೆಯ ದುಡಿಯುವ ಜನತೆಯ ನಾಯಕ ಕಾ. ಸಿ. ನಾರಾಯಣ ಬಗ್ಗೆ ಕಾ. ಕೆ. ಶಂಕರ ತಮ್ಮ ನೆನಪು ಹಂಚಿಕೊಂಡಿದ್ದಾರೆ.

14ನೇ ವಯಸ್ಸಿನಲ್ಲಿ ಹಂಚಿನ ಕಾರ್ಖಾನೆಯಲ್ಲಿ ಕೆಲಸಕ್ಕೆ ಸೇರಿ, ಕಡಿಮೆ ಕೂಲಿಗೆ ಬಹಳ ಕಷ್ಟದಿಂದ ದುಡಿಮೆ ಮಾಡುತ್ತಿರುವಾಗಲೇ ಕಾರ್ಮಿಕರ ಸಂಘಟನೆ ಮಾಡಲು ಮುಂದಾದರು. ಬೇರೆಯವರ ಸಹಕಾರದಿಂದ ಕುಂದಾಪುರದಲ್ಲಿರುವ ಹಂಚು ಕಾರ್ಮಿಕರ ಸಂಘಟನೆಯೊಂದಿಗೆ, ಉತ್ತರ ಕನ್ನಡ ಜಿಲ್ಲೆಯ ಹಂಚು ಕಾರ್ಮಿಕರ ಸಂಘಟನೆಯನ್ನು ವಿಸ್ತರಿಸಲು ಕೂಡ ಪ್ರಯತ್ನ ಪಟ್ಟರು.

ಕಾರ್ಮಿಕರ ಬೇಡಿಕೆಗಳಿಗಾಗಿ ಹಲವಾರು ಕಾರ್ಖಾನೆಗಳಲ್ಲಿ ನಡೆದ ದೀರ್ಘಕಾಲದ ಹೋರಾಟದಲ್ಲಿ ಸಕ್ರಿಯವಾಗಿ ಪಾಲುಗೊಂಡು ನಿರಂತರ ಹಂಚು ಕಾರ್ಮಿಕರ ಸಂಪರ್ಕವಿಟ್ಟುಕೊಳ್ಳಲು ಶ್ರಮಪಟ್ಟರು. ಅವರ ಮಧ್ಯದಲ್ಲಿದ್ದು, ಅವರಲ್ಲಿ ಸಂಘಟನಾ ಪ್ರಜ್ಞೆ ಹಾಗೂ ರಾಜಕೀಯ ಪ್ರಜ್ಞೆ ಬೆಳೆಸಲು ನಿರಂತರ ಪ್ರಯತ್ನಿಸಿದ್ದರು. ತಾನು ತಿಳಿದುಕೊಳ್ಳಬೇಕು ಹಾಗೂ ಬೇರೆಯವರಿಂದ ತಿಳಿದುಕೊಳ್ಳಬೇಕೆಂಬ ಕುತೂಹಲ ಇತ್ತು. ಬೇರೆಯವರಲ್ಲಿ ಚರ್ಚಿಸಲು ಆಸಕ್ತಿ ಬೆಳೆಸಿಕೊಂಡಿದ್ದರು.

ಸ್ಥಳೀಯ ರಾಜಕೀಯ ಹಾಗೂ ರಾಜ್ಯ ಮತ್ತು ದೇಶದ ರಾಜಕೀಯ ವಿಚಾರವಾಗಿ ಮುಖ್ಯ ಕಾರ್ಯಕರ್ತರೊಂದಿಗೆ ನಿರಂತರ ಚರ್ಚಿಸುವ ಪರಿಪಾಠ ಬೆಳೆಸಿಕೊಂಡರು. ರಾಜ್ಯದ ಮುಖಂಡರೊಂದಿಗೆ ಹೆಚ್ಚು ಚರ್ಚಿಸಿ ತಿಳಿದುಕೊಳ್ಳುತ್ತಿದ್ದರು. ಪಕ್ಷದ ತರಬೇತಿ ಶಿಬಿರಗಳಿಗೆ ತಪ್ಪದೆ ಭಾಗವಹಿಸುತ್ತಿದ್ದರು.

ಹಂಚು ಕಾರ್ಮಿಕರ ಸಂಘಟನೆಯಲ್ಲಿ

ಆರಂಭದ ಕಾಲಘಟ್ಟದಲ್ಲಿ 1961ರಲ್ಲಿ ಮಂಗಳೂರು ಟೈಲ್‌ವರ್ಕ್ಸ್ ಮತ್ತು ಕಾಮತ್ ಟೈಲ್‌ವರ್ಕ್ಸ್‌ನಲ್ಲಿ ಕಾರ್ಮಿಕರ ಬೇಡಿಕೆಗಳಿಗೆ ಸಂಬಂಧಪಟ್ಟು ದೀರ್ಘಕಾಲದ ಹೋರಾಟದಲ್ಲಿ ಸಕ್ರಿಯವಾಗಿ ಪಾಲುಗೊಂಡು ನಾಯಕತ್ವ ನೀಡಿದರು. ಕಾಮತ್ ಟೈಲ್‌ವರ್ಕ್ಸ್‌ನಲ್ಲಿ ಹೊರಗಿನಿಂದ ಗೂಂಡಾಗಳು ಬಂದು ಕಾರ್ಖಾನೆಯ ಕೆಲಸ ಆರಂಭಿಸಿ, ಮುಷ್ಕರ ಮುರಿಯಲು ಪ್ರಯತ್ನಿಸಿದಾಗ ಸಿ.ನಾರಾಯಣನವರ ನೇತೃತ್ವದಲ್ಲಿ ಕಾರ್ಮಿಕರು ಗೂಂಡಾಗಳನ್ನು ಓಡಿಸಿ ಮಾಲಕರ ಕಾರ್ಮಿಕ ವಿರೋಧಿ ನೀತಿಯನ್ನು ವಿಫಲಗೊಳಿಸಿದರು.

ಸಂಘದ ಕಾರ್ಯಕಾರಿ ಸಮಿತಿ ಸದಸ್ಯರ ಸಹಕಾರದಿಂದ ದೀರ್ಘಕಾಲದ ಹೋರಾಟಗಳು ನಡೆದು, ಕಾರ್ಮಿಕರ ಬೇಡಿಕೆಗಲು ಇತ್ಯರ್ಥಗೊಂಡ ಬಳಿಕ ಸಂಘಟನೆಯನ್ನು ವಿಸ್ತರಿಸಿ ಬೆಳೆಸಲು ಶ್ರಮಪಟ್ಟರು. ಕಾ. ಅಬ್ರಹಾಂ ಕರ್ಕಡರೊಂದಿಗೆ ಉಡುಪಿ ತಾಲ್ಲೂಕು ಹಾಗೂ ಉತ್ತರ ಕನ್ನಡ ಜಿಲ್ಲೆಯಲ್ಲಿ ಹಂಚು ಕಾರ್ಮಿಕರ ಸಂಘಟನೆಯನ್ನು ಬಲಿಷ್ಟಗೊಳಿಸಲು ತನ್ಮೂಲಕ 1968 ಮತ್ತು 2002 ರಲ್ಲಿ ಕನಿಷ್ಟ ಕೂಲಿ ಮತ್ತು ಏರಿಳಿತ ತುಟ್ಟಿಭತ್ಯೆಗಾಗಿ ನಡೆದ ಹೋರಾಟದಲ್ಲಿ ಸಕ್ರಿಯವಾಗಿ ಪಾಲುಗೊಂಡರು. 2002ರಲ್ಲಿ ಜಿಲ್ಲೆಗಳ ಹಂಚು ಕಾರ್ಮಿಕರು ಕನಿಷ್ಟ ಕೂಲಿಗಾಗಿ ಹೋರಾಟ ನಡೆಸಿದರು.

ಆಡಳಿತ ವರ್ಗದ ಕಾರ್ಮಿಕ ವಿರೋಧಿ ನೀತಿ, ಕೆಲವು ಸಂದರ್ಭ ಗೂಂಡಾಗಳ ದಾಳಿ ಇವುಗಳನ್ನು ಧೈರ್ಯದಿಂದ ಎದುರಿಸಿ ಸಂಘಟನೆಯನ್ನು ಉಳಿಸಿಕೊಂಡು ಇತರರ ಸಹಕಾರದೊಂದಿಗೆ ರೈತರ – ಕೃಷಿಕೂಲಿಕಾರರ ಹೋರಾಟಕ್ಕೆ ಬೆಂಬಲಿಸಿ ಐಕ್ಯ ಚಳುವಳಿ ಬೆಳೆಸುವಲ್ಲಿ ಗಮನ ನೀಡಿದರು.

ಆರಂಭದಲ್ಲಿ ಹಂಚು ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದು, ಸಂಘಟನೆಯ ಕೆಲಸ ಮಾಡುತ್ತಾ 1977ರಲ್ಲಿ ತನ್ನ ಕೆಲಸಕ್ಕೆ ರಾಜಿನಾಮೆ ನೀಡಿ ಪೂರ್ಣಕಾಲ ಕಾರ್ಯಕರ್ತರಾಗಿ ಪೂರ್ಣ ಗಮನ ಸಂಘಟನೆಗೆ ಹಾಗೂ ಪಕ್ಷದ ಬೆಳವಣಿಗೆಗೆ ನೀಡುತ್ತಾ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಪಕ್ಷದ ಜಿಲ್ಲಾ ಸಮಿತಿಯ ಸದಸ್ಯರಾಗಿ ಕೆಲಸ ನಿರ್ವಹಿಸಿದರು. ಎಸ್.ಕೆ.ಟೈಲ್‌ವರ್ಕರ್ಸ್ ಯೂನಿಯನ್‌ನ ಕೋಶಾಧಿಕಾರಿಯಾಗಿ, ಅದರ ಕುಂದಾಪುರ ಶಾಖಾ ಕಾರ್ಯದರ್ಶಿಯಾಗಿ ಬಹಳ ಕಾಲ ಕೆಲಸ ನಿರ್ವಹಿಸಿದರು.

ರೈತರ ಹೋರಾಟದಲ್ಲಿ

ಅನ್ಯಾಯದ ವಿರುದ್ಧ ಹೋರಾಟ ಮಾಡುವ ಹುಟ್ಟು ಸ್ವಭಾವದ ಕಾಮ್ರೇಡ್ ಸಿ.ನಾರಾಯಣನವರು ರೈತರಿಗೆ ಆಗುವ ಅನ್ಯಾಯದ ವಿರುದ್ಧ, ಅವರಿಗೆ ಸಹಕಾರ ನೀಡಲು ರೈತ ಸಂಘಟನೆಯನ್ನು ಬಲಗೊಳಿಸಲು ಕಾಮ್ರೇಡ್ ಅಬ್ರಹಾಂ ಕರ್ಕಡ ರವರ ಜತೆಯಲ್ಲಿ ಸಂಘಟನೆ ಮತ್ತು ಹೋರಾಟದಲ್ಲಿ ತೊಡಗಿಸಿಕೊಂಡರು. 1973ರಲ್ಲಿ ಕುಂದಾಪುರದಿಂದ ಬೆಂಗಳೂರಿಗೆ ರೈತರ ಜಾಥಾ ನಡೆದಾಗ ಅದರಲ್ಲಿ ಭಾಗವಹಿಸಿದ್ದರು.

ರೈತರ ಬೆಳೆ ರಕ್ಷಿಸುವಲ್ಲಿ, ಭೂನ್ಯಾಯ ಮಂಡಳಿಯಲ್ಲಿ ರೈತರಿಗೆ ನ್ಯಾಯ ದೊರಕಿಸುವಲ್ಲಿ, ಅನಗಳ್ಳಿ, ಕಂದಾವರ ಕೋಣಿ, ಬಸ್ರೂರು, ಕಾವ್ರಾಡಿ, ಬೆಳ್ಳಾಲ, ಸಿರಿಯಾರ, ಕರ್ಕುಂಜೆ ಇತ್ಯಾದಿ ಗ್ರಾಂಗಳಲ್ಲಿ ರೈತರ ಮೇಲೆ ಭೂಮಾಲಕರ ಗೂಂಡಾಗಳಿಂದ ದಾಳಿ ನಡೆದಾಗ ಹಂಚು ಕಾರ್ಮಿಕರ ಸಹಕಾರದೊಂದಿಗೆ ದಾಳಿ ಹಿಮ್ಮೆಟ್ಟಿಸಲು, ರೈತರಿಗೆ ಸಹಕಾರ ನೀಡಲು ಮುಂದಾಗಿರುತ್ತಾರೆ. ಹಲವರ ಮೇಲೆ ಕೇಸು ದಾಖಲೆಯಾದಾಗ, ಹಂಚು ಕಾರ್ಮಿಕರ ಸಂಘದಿಂದ ಆರ್ಥಿಕ ನೆರವು ನೀಡುವುದರಲ್ಲಿ ಅವರ ಪಾತ್ರ ದೊಡ್ಡದು.

ಹಂಚು ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ಕುಟುಂಬಗಳು ಗೇಣಿದಾರರಾಗಿದ್ದರು. ಇಂತಹ ಸಂದರ್ಭದಲ್ಲಿ ಸಮರಶೀಲ ಹೋರಾಟಗಳು ನಡೆದವು. ಅದಕ್ಕೆ ನೇತೃತ್ವವನ್ನು ಅಬ್ರಹಾಂ ಕರ್ಕಡರವರ ಜತೆಯಲ್ಲಿ ಸಿ.ನಾರಾಯಣನವರ ನೀಡಿದರು. ಅನಗಳ್ಳಿಯಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಬಡ ರೈತ ಕುಟುಂಬವನ್ನು ಬಲತ್ಕಾರದಿಂದ ಒಕ್ಕಲೆಬ್ಬಿಸುವ ಪ್ರಯತ್ನ ನಡೆದಾಗ, ಅವರು ಬೆಳೆಯಿಸಿದ ಫಸಲನ್ನು ಬಲತ್ಕಾರದಿಂದ ಕೊಯ್ಯುವ ಸಂದರ್ಭ ವಿಫಲಗೊಳಿಸಲು ನಡೆದ ಪ್ರತಿಭಟನೆಯಲ್ಲಿ ಸಿ.ನಾರಾಯಣವರ ಪಾತ್ರ ಮುಖ್ಯವಾದುದು.

ಈ ಸಂರ್ಭದಲ್ಲಿ ರೈತ ಸಂಘದ ಘಟಕಗಳನ್ನು ಗ್ರಾಮೀಣ ಪ್ರದೇಶದಲ್ಲಿ ರಚಿಸಿ, ಸಮಗ್ರ ಭೂಸುಧಾರಣೆಗಾಗಿ 'ಉಳುವವನೇ ಹೊಲದೊಡೆಯ' ಘೋಷಣೆಯನ್ನು ಮೊಳಗಿಸಲಾಯಿತು. ಗ್ರಾಮೀಣ ಪ್ರದೇಶದಲ್ಲಿ ಹಂಚು ಕಾರ್ಮಿಕರು, ರೈತರ ಹೋರಾಟಗಳಿಗೆ ಬೆಂಬಲವಾಗಿ ರೈತರ ಸಂಘದ ಘಟಕಗಳನ್ನು ರಚಿಸಲು ಸದಸ್ಯತ್ವ ಮಾಡಲು ಸಂಘಟಿತ ಹೋರಾಟ ಮುಂದುವರಿಸುವಂತೆ ಸಿ.ನಾರಾಯಣರವರ ಮಾರ್ಗದರ್ಶನವಿತ್ತು. ಕಾರ್ಯಕರ್ತರ ಮಧ್ಯೆದಲ್ಲಿ ರೈತ–ಕಾರ್ಮಿಕರ ಐಕ್ಯ ಹೋರಾಟದ ಮಹತ್ವವನ್ನು ವಿವರಿಸುತ್ತಿದ್ದರು.

1962ರಲ್ಲಿ ಪಕ್ಷದ ಸದಸ್ಯರಾಗಿ, ಒಂದು ಬಾರಿ ಕುಂದಾಪುರ ಪುರಸಭಾ ಸದಸ್ಯರಾಗಿ, ಸುಮಾರು 45 ವರ್ಷಗಳ ಅವಧಿಯಲ್ಲಿ ಸಂಘಟನೆ ಮತ್ತು ಪಕ್ಷದ ಕೆಲಸ, ಮುಖ್ಯವಾಗಿ ಜನಸಾಮಾನ್ಯರ ಹಿತಕ್ಕಾಗಿ ದುಡಿದವರಲ್ಲಿ ಒಬ್ಬರಾಗಿರುತ್ತಾರೆ. ಪಕ್ಷದ ನಿಷ್ಠಾವಂತ ಕಾರ್ಯಕರ್ತರಾಗಿ ದೀರ್ಘಕಾಲ ದುಡಿದ ಒಬ್ಬ ಸಂಗಾತಿಯನ್ನು ಕಳೆಕೊಂಡಿದ್ದೇವೆ. ಶ್ರದ್ಧಾಂಜಲಿ ಎಂದರೆ ಅವರು ತಮ್ಮ ರಾಜಕೀಯ ಜೀವನದಲ್ಲಿ ಒಳ್ಳೆಯ ಉದ್ದೇಶಗಳನಿಟ್ಟು ಹೋರಾಟ ಆರಂಭಿಸಿರುವುದನ್ನು ಮುಂದುವರಿಸಬೇಕಾಗಿದೆ.

➡ ಈ ರೀತಿಯಾಗಿ ಜನರ ಮಧ್ಯೆ ನಾನಾ ರೀತಿಯಿಂದ ಸಕ್ರಿಯವಾಗಿ ಇರುವುದೇ ಪಕ್ಷ ಸತತವಾಗಿ ಗೆದ್ದು ಬರಲು ಕಾರಣವಾಗಿದೆ.

ಐಕ್ಯರಂಗ: ಕೊನೆಯದಾಗಿ ಒಂದು ಪ್ರಶ್ನೆ ನೀವ್ಯಾಕೆ ಈ ಸಲ ಸ್ಪರ್ಧಿಸಲಿಲ್ಲ?

ಅ. ಕ: ಊರಿನಲೆಲ್ಲಾ ಪಕ್ಷಕ್ಕೆ ಸಂಬಂಧ ಪಡದ ಅನೇಕ ಜನರು, ಹಿತೈಷಿಗಳು ಕೂಡ ಈ ಪ್ರಶ್ನೆ ಕೇಳಿದರು. ನಾನು 25 ವರ್ಷಗಳ ಕಾಲ ಕೌನ್ಸಿಲರ್ ಆಗಿದ್ದೆ. ಅದರಲ್ಲಿ 10 ವರ್ಷ ಉಪಾಧ್ಯಕ್ಷನಾಗಿದ್ದೆ. ಎಲ್ಲಾ ಚುನಾವಣೆಗಳಿಗೆ ನಾನು ಸ್ಪರ್ಧಿಸುವುದು ಸರಿಯಲ್ಲ. ಅಲ್ಲದೇ ರಾಜ್ಯ ಮಟ್ಟದಲ್ಲಿ ಸಂಘಟನೆಗೆ ಜವಾಬ್ದಾರಿಗಳಿರುವುದರಿಂದ ಮತ್ತು ಹೊಸಬರಿಗೆ ಅವಕಾಶ ಕೊಡುವ ದೃಷ್ಟಿಯಿಂದ ನಾನು ಸ್ಪರ್ಧಿಸಲಿಲ್ಲ.

ನಾನು ಸ್ಪರ್ಧಿಸದಿದ್ದರೆ ಏನಂತೆ. ನಮ್ಮ ಪಕ್ಷ ಹಾಗೂ ದಳ ಕೂಟ ಅಧಿಕಾರಕ್ಕೆ ಬಂದಿದೆ. ನಾನು ಕೌನ್ಸಿಲರ್ ಆಗಿದ್ದಾಗಲೂ ಪಕ್ಷವಾಗಿ ಕೆಲಸ ನಿರ್ವಹಿಸಲಾಗಿದೆ. ಈಗ ಆಯ್ಕೆಯಾಗಿರುವವರು ಕೂಡ ಪಕ್ಷದ ಮಾರ್ಗದರ್ಶನದಲ್ಲಿ ಸಮರ್ಥವಾಗಿ ಕೆಲಸ ಮಾಡುತ್ತಾರೆಂಬ ವಿಶ್ವಾಸ ನನಗಿದೆ.

ರೈತ–ಕಾರ್ಮಿಕರು ಅಲ್ಲದೆ ಇಡಿಯಾಗಿ ಪುರಸಭೆ ವ್ಯಾಪ್ತಿಯ ಜನರ ಬೆಂಬಲ ಈನ ನಮ್ಮ ಪಕ್ಷಕ್ಕೆ ಇದೆ. ನಮ್ಮ ಹೆಗಲ ಮೇಲೆ ದೊಡ್ಡ ಜವಾಬ್ದಾರಿ ಬಿದ್ದಿದೆ. ಅದನ್ನು ನಿಭಾಯಿಸಲು ನಾವು ಹಿಂಜರಿಯುವುದಿಲ್ಲ. ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಕೂಡ ನಮ್ಮ ಸಂಗಾತಿಗಳು ಪರಿಶ್ರಮ ಪಟ್ಟು ಸ್ಥಳೀಯ ಸಂಸ್ಥೆಗಳನ್ನು ಜಯಗಳಿಸಲಿ ಎಂದು ಹಾರೈಸುತ್ತೇನೆ.

ಕೋಷ್ಟಕ 3.2

ಮಾನವ ಅಭಿವೃದ್ಧಿ ಸೂಚಕಗಳ ತಾಲೂಕುವಾರು ಮೌಲ್ಯ

ಆಯಾಮಗಳು	ಸೂಚಕಗಳು	ಕಾರ್ಕಳ	ಕುಂದಾಪುರ	ಉಡುಪಿ	ಜಿಲ್ಲೆ
ಜೀವನ ಮಟ್ಟ	ಶೇಕಡಾವಾರು ಅಡುಗೆ ಅನಿಲ ಹೊಂದಿರುವ ಮನೆಗಳು	23.69	27.78	44.18	35.14
	ಶೇಕಡಾವಾರು ಶೌಚಾಲಯ ಜೀವನ ಮಟ್ಟಹೊಂದಿರುವ ಮನೆಗಳು	88.02	79.94	91.55	87.21
	ಶೇಕಡಾವಾರು ಕುಡಿಯುವ ನೀರು ಹೊಂದಿರುವ ಮನೆಗಳು	22.58	16.66	34.07	26.40
	ಶೇಕಡಾವಾರು ವಿದ್ಯುಚ್ಛಕ್ತಿ ಹೊಂದಿರುವ ಮನೆಗಳು	89.21	88.21	94.01	91.27
	ಶೇಕಡಾವಾರು ಉತ್ತಮ ವಾಸ ವ್ಯವಸ್ಥೆ ಹೊಂದಿರುವ ಮನೆಗಳು	59.57	71.31	72.58	69.74
	ಕೃಷಿಯೇತರ ಕೆಲಸಗಾರರು ಮತ್ತು ಒಟ್ಟು ಕೆಲಸಗಾರರ ಶೇಕಡಾವಾರು	76.23	65.45	81.74	73.28
	ತಲಾ ಆದಾಯ (ರೂಪಾಯಿಗಳಲ್ಲಿ)	54906	38028	45623	44759
ಆರೋಗ್ಯ	1 ವರ್ಷದಲ್ಲಿ 5 ವರ್ಷದ ಕೆಳಗಿನ ಮಕ್ಕಳ ಮರಣ ಆರೋಗ್ಯಪ್ರಮಾಣ (1000 ಜನನಗಳಿಗನುಗುಣವಾಗಿ)	13	12	11	13
	ತಾಯಂದಿರ ಮರಣ ಪ್ರಮಾಣ (100000 ಜನನಗಳಿಗನುಗುಣವಾಗಿ)	48	42	58	50
ಶಿಕ್ಷಣ	ಸಾಕ್ಷರತೆ	86.70	81.63	89.32	86.24
	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಶಿಕ್ಷಣಕ್ಕೆ ಸಂಯೋಜಿತ ಸಮಗ್ರ ದಾಖಲಾತಿ	99.06	98.19	103.85	100.89

ಕೃಪೆ: 2011ರ ಜನಗಣತಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ಶಿಕ್ಷಣ ಇಲಾಖೆ

PÉÃ½zÀÄÝ



ಮೊನ್ನೆ ತಾನೇ
ಕೆಲವು ಪತ್ರಕರ್ತರು ಹಾಗೂ ಸ್ವಜಾತಿಯ
ಸ್ವಾಮೀಜಿಗಳ ಶ್ಲಾಘನೆಗಳ ಮಂಪರಿನಲ್ಲಿ
ಮುಳುಗಿ ತಾವು ಜನಪ್ರಿಯ ಎಂದು
ಭ್ರಮಿಸಿದ್ದ ಯಡಿಯೂರಪ್ಪನವರಿಗೆ ತಮ್ಮ
ಬಗೆಗೆ ಜನ ನಿಜಕ್ಕೂ ಏನೆಂದುಕೊಂಡಿದ್ದಾರೆ
ಎಂಬುದು ಗೊತ್ತಾದದ್ದು ಚುನಾವಣೆಯ
ನಂತರವೇ. ಸಿದ್ದರಾಮಯ್ಯನವರೂ
ಅದೇ ಹಾದಿಯಲ್ಲಿದ್ದರೆ ಅದರಿಂದ
ಹಿಂದೆ ಸರಿಯಲು ಇದು ಸಕಾಲ. ಆದರೆ
ಇತಿಹಾಸದಿಂದ ನಾವು ಕಲಿಯುವ
ಪಾಠ ಏನೆಂದರೆ, ನಾವು ಇತಿಹಾಸದಿಂದ
ಏನನ್ನೂ ಕಲಿಯುವುದಿಲ್ಲ ಎಂಬುದು!?
ಎಂದ ಲೇಖಕರೊಬ್ಬರ ಮಾತು
ನೆನಪಾಗುತ್ತಿದೆ!

ನಟರಾಜ್ ಹುಳಿಯಾರ್

ಸಂವಾದ – ಕೆ. ಫಣಿರಾಜ್ ..... ಪುಟ 8 ರಿಂದ

ಸಾವಧಾನದಲ್ಲಿ ಅರೆಸ್ಸೆಸ್ ಸ್ಥಾಪಿಸಿದೆ. ಸಾಮಾಜಿಕ ಆಯಾಮಗಳಲ್ಲಿ ಹಿಡಿತ ಸಾಧಿಸುವುದನ್ನು ಗ್ರಾಂಷಿ 'ಆಯಾಕಟ್ಟಿನ ಜಾಗಗಳನ್ನು ಆಕ್ರಮಿಸುವ ಯುದ್ಧ' (ವಾರ್ ಆಫ್ ಪೊಸಿಷನ್ಸ್) ಎನ್ನುತ್ತಾನೆ. ಇದು ಗೋಲ್ವಾಲ್ಕರ್ ತನ್ನ 'ಬಂಚ್ ಆಫ್ ಥಾಟ್ಸ್' ಕೃತಿಯಲ್ಲಿ ಸ್ಪಷ್ಟಪಡಿಸಿದ ಹಾಗೆ 'ಸಾಮಾಜಿಕ ಅಧಿಕಾರ ಸ್ಥಾಪನೆ ಸಂಘದ ಗುರಿ' ಎನ್ನುವುದು ಪ್ರಾಯೋಗಿಕವಾಗಿ ಕರಾವಳಿಯಲ್ಲಿ, 1980ರ ಹೊತ್ತಿಗೆ ಯಶಸ್ವಿಯಾಗಿತ್ತು.

ಅದರ ಫಸಲನ್ನು 1980ರ ದಶಕದ ಮಧ್ಯಾವಧಿಯಲ್ಲಿ ಬರಪೂರ ಪಡೆಯತೊಡಗಿತು.

2. ಉಡುಪಿ, ದ.ಕ.ಗಳಲ್ಲಿ ವ್ಯತ್ಯಾಸ

ಅವಿಭಜಿತ ದ.ಕ.ಜಿಲ್ಲೆಯ ಕೋಮುವಾದೀಕರಣದ ಮೇಲಿನ ಮಾದರಿಯಲ್ಲಿ, ಈ ರೆವಿನ್ಯು ವಿಭಾಗೀಕರಣ ವ್ಯತ್ಯಾಸವುಂಟು ಮಾಡಿದೆ ಎಂದು ನನಗನ್ನಿಸುವುದಿಲ್ಲ. 1998–99ರ ಸುರತ್ಕಲ್ ಯೋಜಿತ 'ಹಿಂದುತ್ವ ಹಿಂಸೆ'ಯ ನಂತರದ ಕಾಲದಲ್ಲಿ, ದೈನಂದಿನ ನಡೆಯುತ್ತಿರುವ ಕೋಮು ಹಿಂಸೆಯ ಸ್ವರೂಪದಲ್ಲಿ, ನಾನು ಅರಿತಿರುವಂತೆ, ತೀವ್ರ ವ್ಯತ್ಯಾಸಗಳು ಕಾಣುತ್ತಿಲ್ಲ. ವಾದದ ಕಾರಣಕ್ಕೆ– ಮಂಗಳೂರು ದೊಡ್ಡ ನಗರವಾಗಿ ಪರಿವರ್ತನೆ ಹೊಂದಿದ್ದು, ನಗರ ಜೀವನದ ದೈನಂದಿನ ಕಾರಣಗಳಿಗೆ ಅಲ್ಲಿ ಅನೈತಿಕ ಪೋಲಿಸುಗಿರಿಯ ಪ್ರಕರಣಗಳು ಹೆಚ್ಚಾಗಿ ಕಾಣಿಸಿಕೊಳ್ಳುತ್ತಿವೆ; ಉಡುಪಿ ಜಿಲ್ಲಾ ಕೇಂದ್ರವಾಗಿದ್ದರೂ, ಹಳ್ಳಿಗಳ ಗೊಂಚಲಾಗಿರುವುದರಿಂದ ಸಂಖ್ಯೆಯಲ್ಲಿ ಅಂತಹ ಪ್ರಕರಣಗಳು ಕಡಿಮೆ– ಎಂದು ವಾದಿಸಬಹುದಷ್ಟೇ. ಆದರೆ ಅನೈತಿಕ ಪೋಲಿಸುಗಿರಿ ನಡೆಸುತ್ತಿರುವ ರಾಜಕೀಯ ಪ್ರಖರತೆ ಎರಡು ಕಡೆಗೂ ಒಂದೇ. ಮಂಗಳೂರಿನಲ್ಲಿ 2006ರಲ್ಲಿ ನಡೆದ ಗಲಭೆಯ ವಿಸ್ತೀರ್ಣ ಜಾಸ್ತಿ; ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನಲ್ಲಿ ನಡೆದ ಅಸೋಡು ಸೂಜಿ ಪ್ರಕರಣದ ಕೋಮು ಹಿಂಸೆಯ ವಿಸ್ತೀರ್ಣ ಕಮ್ಮಿ–ಹಾಗಂತ ಹಿಂಸೆಯ ವಿಧಾನ, ಯೋಜನೆ (ಮೋಡಸ್ ಒಪರಾಂಡಿ)ಗಳ ತೀವ್ರತೆಯಲ್ಲಿ ನನಗ್ಯಾವ ವ್ಯತ್ಯಾಸಗಳೂ ಕಾಣುತ್ತಿಲ್ಲ. ದ.ಕ.ದ ಹಾಗೆಯೇ, ಉಡುಪಿ ಜಿಲ್ಲೆಯಲ್ಲೂ ಕೆಳಹಂತದ ಪೋಲಿಸು ಠಾಣೆಗಳಲ್ಲಿ ಸಂಘಿ ಹಿತಾಸಕ್ತ ಪೋಲಿಸರೇ ಜಾಸ್ತಿ! ದನ ಸಾಗಾಟದ ಹಿಂಸೆಯಲ್ಲಿ, ಎರಡು ಜಿಲ್ಲೆಗಳ ನಡುವೆ ಐಪಿಎಲ್ ಮ್ಯಾಚೇ ನಡೆ–ಯುತ್ತಿದೆ! ಹಿಂದುತ್ವ ರಾಜಕೀಯದ ಪ್ರಮುಖ ಅಸ್ತ್ರ 'ನಿರಂತರ ಕೋಮುದ್ವೇಷದ ಜಾಗೃತಿ' (ಸಸ್ಪೇನ್ಡ್ ಕಮ್ಯುನಾಲಿಸಂ) ಎರಡೂ ಜಿಲ್ಲೆಗಳಲ್ಲೂ ಒಂದೇ ಬಗೆಯದು. ಹಗುರದಲ್ಲಿ ಹೇಳಬೇಕೆಂದರೆ, ಉಡುಪಿ ಜಿಲ್ಲೆಯಲ್ಲಿ ಚಾಪ್ಲಿನನ ಕಾರಣಕ್ಕಾಗಿ, ಗಣೇಶನ ಪೇಂಟಿಂಗ್ ಕಾರಣಕ್ಕಾಗಿ, ಹಾಸ್ಯ ಸಂಜೆಯಲ್ಲಿನ ಒಂದು ಜೋಕಿನ ಕಾರಣಕ್ಕಾಗಿ, ಕೋಮುದ್ವೇಷದ ವೈವಿಧ್ಯಮಯ ಕಲಾಹಿಂಸೆ ತುಸು ಹೆಚ್ಚು! ಆದರೆ ಎಂ.ಎಫ್. ಹುಸೇನರ ವಿರುದ್ಧ ಎರಡೂ ಜಿಲ್ಲೆಯ ಹಳ್ಳಿ ಹಳ್ಳಿಗಳಲ್ಲಿ ಸಮ ಸಮ ಪ್ರತಿಭಟನೆಗಳು ನಡೆದಿವೆ.

3. ಸವಾಲುಗಳು ಯಾವುವು?

(1) ಜಾಗತಿಕ ಮಟ್ಟದಿಂದ ಹಿಡಿದು, ಸ್ಥಳೀಯ ಮಟ್ಟದವರೆಗೆ ಎಡ–ಪ್ರಜಾಸತ್ತಾತ್ಮಕ ಶಕ್ತಿಗಳ ಪ್ರಭಾವವನ್ನು ಜಾಗತೀಕರಣದ ರಾಜಕೀಯ ಕುಗ್ಗಿಸಿದೆ. ಎಡ–ಪ್ರಜಾಸತ್ತಾತ್ಮಕ ಶಕ್ತಿಗಳ ಸಂಘಟಿ–ತ ಅಡಿಪಾಯವಾಗಿದ್ದ ಜನಸಮೂಹ ಇಂದು ಔದ್ಯೋಗಿಕವಾಗಿ ಅತಂತ್ರವಾಗಿದೆ. ಈ ಅತಂತ್ರ ಸಂಘಟನಾ ಶಕ್ತಿಯ ಕುಸಿತಕ್ಕೂ, ರಾಜಕೀಯ–ಸಾಮಾಜಿಕ ಆಯಮಗಳಲ್ಲಿ ಪ್ರಭಾವದ ಕುಗ್ಗುವಿಕೆಗೂ ಕಾರಣವಾಗಿದೆ. ಬಹು ವಿಸ್ತಾರವಾಗಿದ್ದ ಈ ಅವಕಾಶಗಳು ಒಮ್ಮೆಲೇ ಅತಂತ್ರ ವಲಯಗಳಾಗಿದ್ದು, ಆ ಅವಕಾಶಗಳನ್ನು ಹಿಂದುತ್ವವಾದಿ ರಾಜಕೀಯ ಬಹು ತೀವ್ರತೆಯಲ್ಲಿ ಆಕ್ರಮಿಸಿಕೊಳ್ಳುತ್ತಿದೆ. ಒಂದು ಪ್ರತಿಮೆಯ ಮೂಲಕ ಹೇಳುವುದಾದರೆ: 1990ಕ್ಕೆ ಮುಂಚೆ ಕರಾವಳಿಯ ಬೈಂದೂರಿನಿಂದ ಹಿಡಿದು ರಾಜಮಾರ್ಗದಲ್ಲಿ ಸುಳ್ಯವನ್ನು ತಲುಪುವವರೆಗೆ ಸಿಗುವ ನೂರಾರು ಅಟೋರಿಕ್ಷಾ ಸ್ಟಾಂಡುಗಳಲ್ಲಿ ನೆಟ್ಟುಕೊಂಡಿರುವ ಧ್ವಜ ಸ್ತಂಭಗಳಲ್ಲಿ ಲಾಲ್ ಝುಂಡ ಹಾರಾಡುತ್ತಿದ್ದವು; ಈಗ ಭಗವಾ ಧ್ವಜಗಳು ಹಾರಾಡುತ್ತಿವೆ.

(2) ಅಸ್ಪಿ, ಜಾತಿ ಯಜಮಾನಿಕೆಗಳಿಗೆ ಪ್ರತಿರೋಧಿಯಾಗಿದ್ದ ಎಡ–ಪ್ರಜಾಸತ್ತಾತ್ಮಕ ರಾಜಕೀಯಗಳ ಬೆನ್ನೆಲುಬ್ಬಾಗಿದ್ದ ಶ್ರಮಿಕರನ್ನೂ, ಕೆಳಜಾತಿಗಳವರನ್ನೂ, ಇಂದಿನ ಸನ್ನಿವೇಶದಲ್ಲಿ ಹಿಂದುತ್ವವಾದಿ ರಾಜಕೀಯ, 'ಬ್ರಾಹ್ಮಣಶಾಹಿ' ಆಚರಣೆಗಳನ್ನು 'ಹಿಂದು ಸಂಸ್ಕೃತಿ'ಯ ಪ್ರತೀಕವಾದ ಆಚರಣೆಗಳು ಎನ್ನುವ ಸಹಮತದ ರಾಜಕೀಯ ತಂತ್ರದ ಮೂಲಕ ತನ್ನೊಳಗೆ ಒಗ್ಗೂಡಿಸಿಕೊಂಡಿದೆ. ಈ ಆಕ್ರಮಣ (ಅಪ್ರೋಪ್ರಿಯೇಷನ್) ಹಾಗೂ ಅರಗಿಸಿಕೊಳ್ಳುವುದು (ಇನ್ ಕಾರ್ಪೋರೇಷನ್) ಸಾಮಾಜಿಕ ರಾಜಕೀಯದ ವಿರುದ್ಧ ಒಂದು ಪ್ರತಿರೋಧಿ ಮಾದರಿಯ ಗೈರು ಆತಂಕಕಾ–ರಿಯಾಗಿದೆ.

4. ಪ್ರತಿರೋಧ ಒಡ್ಡುವ ಬಗೆ

ಈ ಸನ್ನಿವೇಶದಲ್ಲಿ ನನ್ನ ನೆನಪಿಗೆ ಬರುವುದು, ಇಟಾಲಿಯ ಇದೇ ಬಗೆಯ ಸನ್ನಿವೇಶದಲ್ಲಿ ಗ್ರಾಂಷಿ ಬಳಸಿದ ನುಡಿಗಟ್ಟು: 'ಬೌದ್ಧಿಕ ನಿರಾಶೆಯನ್ನು ಮೀರುವ ಆಚರಣೆಯ ಸಂಕಲ್ಪದ ಆಸೆ' (ಪೆಸಿಮಿಸಂ ಆಫ್ ಇಂಟಲೆಕ್ಟ್ ಆಪ್ಟಿಮಿಸಂ ಆಫ್ ವಿಲ್). ಪ್ರತಿಯೊಂದು ಕಾಲಘಟ್ಟವನ್ನು ಸಮೀಕ್ಷಿಸಿ, ಈಗಾಗಲೇ ಸೂತ್ರಬದ್ಧವಾಗಿ ನಾವು ನೆಚ್ಚಿಕೊಂಡಿರುವ ಜ್ಞಾನಭಂಡಾರವನ್ನು ಪ್ರಮಾಣವಾಗಿಟ್ಟುಕೊಂಡು ನಾವು ಕಟ್ಟಿಕೊಳ್ಳುವ ಅರಿವು (ಇದನ್ನು ಗ್ರಾಂಷಿ 'ಫಿಲೋಸಫಿ ಆಫ್ ಐಡಿಯಾಸ್' ಅನ್ನುತ್ತಾನೆ) ಇದ್ದೇ ಇದೆ. ಇದೇ ನಮ್ಮ 'ಬೌದ್ಧಿಕ ನಿರಾಶೆ'ಯನ್ನು ಪರಾಮರ್ಶಿಸಿಕೊಳ್ಳಲಿಕ್ಕೆ ಮಾನದಂಡವಾಗಬೇಕು.

ನಮ್ಮ ಎಡ–ಪ್ರಜಾಸತ್ತಾತ್ಮಕ ಪ್ರತಿರೋಧದ ರಾಜಕೀಯ ವ್ಯಾಕರಣವನ್ನು ನಾವು ಕಟ್ಟಿಕೊಂಡದ್ದು, ಬ್ರಿಟಿಷ್ ವಸಾಹತುಶಾಹಿಯ ವಿರುದ್ಧ ನಡೆದ ಹೋರಾಟದ ಕಾಲದಲ್ಲಿ ನಡೆಸಿದ ರಾಜಕೀಯ, ಸಾಮಾಜಿಕ ಹೋರಾಟಗಳ ಸನ್ನಿವೇಶದಲ್ಲಿ. ಇದೇ ಕಾಲದಲ್ಲಿ ನಮ್ಮ ರಾಜಕೀಯವನ್ನು ಮಣಿಸುವ, ಸಾಮಾಜಿಕ ಯಜಮಾನಿಕೆ ಸಾಧಿಸುವ ಸಂಕಲ್ಪದಲ್ಲಿ 'ಹಿಂದುತ್ವವಾದಿ ರಾಜಕೀಯ'ವೂ ತೊಡಗಿ–ಕೊಂಡಿತು. ಜಾಗತಿಕ ಮಟ್ಟದಲ್ಲಿ ಸರಿ ಸುಮಾರು 1880ರಿಂದ ಶುರುವಾಗಿ 1970ರ ವರೆಗೂ ಬೀಸಿದ 'ವಸಾಹತುಶಾಹಿ ವಿರೋಧಿ, ಸಾಮಾಜಿಕ ಅಧಿಕಾರಶಾಹಿ ವಿರೋಧಿ' ಚಳುವಳಿಗಳ ಬಿರುಸಿನ ಅಲೆಯ ಭರದಲ್ಲಿ (ಇತಿಹಾಸಕಾರ ಹಾಬ್ಸ್ ಬಾಮ್ ನ ಮಾತುಗಳಿವು) ತೇಲಿದ ನಮ್ಮ ರಾಜಕೀಯ ವೈಚಾರಿಕತೆಗಳು ಅಜೇಯ ಎಂದು ನಾವು ಭಾವಿಸಿಕೊಂಡೆವು. ಈ ಬಿರುಗಾಳಿಯ ಭರದಲ್ಲಿ ಜಯಿಸಲಾರೆವು ಎಂದು ಅರಿತ 'ಹಿಂದುತ್ವವಾದಿ ರಾಜಕೀಯ' ತನ್ನ ಹಾಯಿಗಳನ್ನು ಇಳಿಸಿ, ನಮ್ಮ ಸಮಾಜದಲ್ಲಿ ಯಥಾಸ್ಥಿತಿಯನ್ನು ಕಾಪಾಡುವ ಸುರಕ್ಷಿತ ದ್ವೀಪಗಳಲ್ಲಿ ಲಂಗರು ಹಾಕಿತು; ಆ ದ್ವೀಪಗಳ ಯಜಮಾನಿಕೆಯನ್ನು ಜತನದಿಂದ ಕಾಪಾಡಿಕೊಂಡಿತು. ನಾವು ಲಂಗರು ಹಾಕಿದ 'ವಸಾಹತುಶಾಹಿ ವಿರೋಧಿ ರಾಷ್ಟ್ರೀಯತೆ'ಯ ದ್ವೀಪವೇ ಜಗವನ್ನು ನಿಯಂತ್ರಿಸಬಲ್ಲ ಕೇಂದ್ರವೆಂದು ಭಾವಿಸಿದೆವು. ತಮ್ಮ ಯಜಮಾನಿಕೆಯ ಪುಟ್ಟ ದ್ವೀಪಗಳಿಂದ 'ಹಿಂದುತ್ವ ರಾಜಕೀಯ' ಕೆಲವೊಮ್ಮೆ ನೇರವಾಗಿ, ಕೆಲವೊಮ್ಮೆ ಸಂಧಾನದ ಮುಸುಕಿನಲ್ಲಿ ನಡೆಸಿದ ದಾಳಿಗಳು ನಮ್ಮ ಸುಪರ್ದಿನ ರಾಜಕೀಯ ನೆಲೆಗಳನ್ನು ಯಾವ ಬಗೆಗಳಲ್ಲಿ ಘಾಸಿಗೊಳಿಸಿತು ಎನ್ನುವುದನ್ನು ನಾವು ಗಂಭೀರವಾಗಿ ಪರಿಗಣಿಸಿದಂತೆ ಕಾಣುವುದಿಲ್ಲ. ನಾವು ನಮ್ಮ ದ್ವೀಪದ ಕಾವಲುಪಡೆ ನಿಸ್ತೇಜವಾಗುತ್ತಿರುವುದನ್ನು ಕಾಣದೇ ಹೋದೆವು. ಹಿಂದುತ್ವವಾದಿ ರಾಜಕೀಯ, ಯಜಮಾನಿಕೆಯು (ಜಾತಿ–ಮತ–ಆಸ್ತಿ–ಲಿಂಗ ತಾರತಮ್ಯಗಳು)ಜತನವಾಗಿದ್ದ ದ್ವೀಪಗಳಲ್ಲಿ ಅಡಗಿ ಸತತವಾಗಿ ನಡೆಸಿದ ದಾಳಿಗಳ ಪಾಠವನ್ನು ಪುನಃ ವ್ಯಾಖ್ಯಾನಿಸಿಕೊಳ್ಳಬೇಕು. ಅಳಿದುಳಿದ ನಮ್ಮ ಶಕ್ತಿ ಕೇಂದ್ರಗಳನ್ನು ಕಾಪಾಡಿಕೊಂಡು, ಹಿಂದುತ್ವವಾದದ ಸುಪರ್ದಿನ ದ್ವೀಪಗಳ ಯಜಮಾನಿಕೆಯನ್ನು ಒಂದೊಂದಾಗಿ ದಾಳಿ ಮಾಡಿ ನಿಸ್ತೇಜಗೊಳಿಸಬೇಕು. ಇದು ವಿಕೇಂದ್ರಿತ ಶತ್ರುವಿನ ವಿರುದ್ಧ ನಡೆಸುವ ವಿಕೇಂದ್ರಿತ ದಾಳಿಯಾಗಿದೆ. ನಮ್ಮ ಕೇಂದ್ರೀಕೃತ ರಾಷ್ಟ್ರೀಯ ಪ್ರಭುತ್ವದ ಕಲ್ಪನೆಗಳನ್ನು, ಅದ–ಕ್ಕೆ ಹೊಂದಿಕೊಂಡು ಕಟ್ಟಿಕೊಂಡಿರುವ ರಾಜಕೀಯ ಜ್ಞಾನವನ್ನು ಮುರಿದು, ವಿಕೇಂದ್ರಿತ ಹೋರಾಟದ ಮಾದರಿಗಳನ್ನು ಕಟ್ಟಿಕೊಳ್ಳುವತ್ತ ಯೋಚಿಸಬೇಕು. ನನಗನ್ನಿಸುವ ಪ್ರಕಾರ, ಜಗತ್ತಿನ ಇಂದಿನ ಸನ್ನಿವೇಶದಲ್ಲಿ, ನಾವು ಕನಿಷ್ಠ 50 ವರ್ಷಗಳ ಕಾಲವಾದರೂ ಹೋರಾಡಬೇಕಾದಿತು, ನಮ್ಮ ಸುಪರ್ದಿನ ಜಾಗಗಳನ್ನು ಕಾಯ್ದುಕೊಂಡು.

ಆದರೆ, ಶತ್ರುಗಳೂ ಅಜೇಯರಲ್ಲ. ನಿರಂತರ ಹೋರಾಟದಲ್ಲಿ ಅವರ ಶಕ್ತಿಯು ಕೈಕೊಡುತ್ತದೆ; ಆ ಕ್ಷಣದಲ್ಲಿ ದಾಳಿ ಮಾಡಬಲ್ಲ ವಿಕೇಂದ್ರಿತ ಪಡೆಯನ್ನು ತಕ್ಷಣದ ಫಲಾಪೇಕ್ಷೆ ಇಲ್ಲದೆ ಕಟ್ಟುತ್ತಾ ಇರಬೇಕು. ಚರಿತ್ರೆಯಲ್ಲಿ ಅನೂಹ್ಯವಾದದ್ದನ್ನು ಬೇಸತ್ತ ಜನ ಬಂಡೆದ್ದು ಸಾಧಿಸುತ್ತಾರೆ. ನೆಲಕ್ಕೆ ಕಿವಿಯೊಡ್ಡಿಕೊಂಡು ಪ್ರತಿ ಚಲನೆಯಲ್ಲಿ ಬದಲಾಗುವ ಸನ್ನಿವೇಶಕ್ಕೆ ತಕ್ಕ ಹಾಗೆ ಬದಲಾವಣೆಯ ಅರಿವು ಪಡೆಯುವುದೂ ಪ್ರತಿರೋಧಿ ರಾಜಕೀಯದ ಅಂಗ–ಇದನ್ನೇ ಗ್ರಾಂಷಿ 'ಆಚರಣೆಯ ತತ್ವಶಾಸ್ತ್ರ' (ಫಿಲಾಸಫಿ ಆಫ್ ಪ್ರಾಕ್ಸಿಸ್) ಎನ್ನುತ್ತಾನೆ. ಇದರಲ್ಲಿ ನನಗೀಗ ಹೆಚ್ಚು ನಂಬಿಕೆ.

ಸಂವಾದ – ಡಾ. ಕೆ. ರಾಜೇಂದ್ರ ಉಡುಪ..... ಪುಟ 8 ರಿಂದ

ಇರುವುದರಿಂದ ಹಿಂದುತ್ವ ಕೆಳಜಾತಿಯ ಜನರನ್ನು ಹೆಚ್ಚಾಗಿ ಬಾಧಿಸಿರಲಿಲ್ಲ. 80ರ ದಶಕದಲ್ಲಿ ಬಂಟ–ರು (ಹೆಚ್ಚು ಭೂಮಾಲಕ ವರ್ಗದವರಿರುವ ಜಾತಿ) ಹಿಂದುತ್ವವನ್ನು ಸೇರಿದ ನಂತರ ಇದರ ಪ್ರಭಾವ ಕೆಳಜಾತಿಯವರಿಗೂ ಹಬ್ಬಿತು. ಬಂಟರಿಗೆ ಕೆಳಜಾತಿ, ಮುಖ್ಯವಾಗಿ ಬಿಲ್ಲವರೊಂದಿಗೆ ಸಾಮಾಜಿಕ ಕೊಂಡಿ ಬಲವಾಗಿತ್ತು. ದೇಶದ ಬಂಡವಾಳಶಾಹಿ ಬಿಕ್ಕಟ್ಟು ಇಲ್ಲಿಯೂ ಪರಿಣಾಮ ಬೀರಿತು. ಹಣದ ಕ್ರೋಡಿ–ಕರಣಗೊಂಡು, ಉತ್ಪಾದನ ಶಕ್ತಿ ಹೆಚ್ಚಿ ಅದರೊಂದಿಗೆ ಬರುವ ಪುರೋಗಾಮಿ ಬಂಡವಾಳ ಶಾಹೀ ವರ್ಗ ಇಲ್ಲಿ ಬರಲೇ ಇಲ್ಲ. ಹಿಂದಿನ ಪಾಳೇಗಾರಿಕ ವ್ಯವಸ್ಥೆಯೊಂದಿಗೆ ಕಸಿಕಟ್ಟಿಕೊಂಡ ಅರೆಬೆಂದ ಬಂಡವಾಳಿಗರ ವರ್ಗ ಹುಟ್ಟಿ ಬಂತು. ಇವರು ಬ್ಯಾಂಕಿಂಗ್, ಆಸ್ಪತ್ರೆ, ಇಂಜಿನಿಯರಿಂಗ್ ಮೆಡಿಕಲ್ ಕಾಲೇಜು ಕಟ್ಟಿಕೊಂಡರು. ಇದರಲ್ಲೇ ಅಧಿಕ ಲಾಭ ಬರುವುದರಿಂದ ಉತ್ಪಾದನೆಯಲ್ಲಿ ಬಂಡವಾಳ ಹೂಡದೆ, ಇದರಲ್ಲೇ ಬಂಡವಾಳ ಹೂಡುವುದು ಸಹಜವಾಗಿತ್ತು. ಇದರಲ್ಲಿ ಅನೇಕ ಧಾರ್ಮಿಕ ಸ್ಥಾನಗಳು ಸೇರಿಕೊಂಡವು. ಇವರೊಂದಿಗೆ ರಿಯಲ್ ಎಸ್ಟೇಟ್ ಹಾಗೂ ಕಳ್ಳದಂಧೆಯ ಶಕ್ತಿಗಳು ಸೇರಿ–ಕೊಂಡು ಒಂದು ಕಗ್ಗಂಟಾದ ಆಳುವ ವರ್ಗ ಹುಟ್ಟಿ ಬೆಳೆಯಿತು. ಈ ವರ್ಗಕ್ಕೆ ಫ್ಯಾಸಿಸ್ಟ್ ಗುಣ ಇಲ್ಲದೆ ಬೇರಾವ ಗುಣವು ಬರಲು ಸಾಧ್ಯವಿಲ್ಲ.

2. ಉಡುಪಿ, ದ.ಕ.ಗಳಲ್ಲಿ ವ್ಯತ್ಯಾಸ

ಕೋಮುವಾದೀ ಕರಣವು ಉಡುಪಿ ಹಾಗೂ ಮಂಗಳೂರು (ದ.ಕ.) ಎರಡು ಜಿಲ್ಲೆಯಲ್ಲೂ ಒಂದೇ ಸ್ವರೂಪದ್ದಾಗಿದೆ. ಮಂಗಳೂರು ದೊಡ್ಡ ನಗರವಾದ ಕಾರಣ ಅಲ್ಲಿ ಕೋಮುವಾದಿಯ ಸಾಹಸ ಕ್ರಿಯೆ ಹೆಚ್ಚಿದ್ದಂತೆ ತೋರುತ್ತದೆ. ತೀವ್ರತೆ ಹೆಚ್ಚಿದೆ. ಪ್ರತಿಗಾಮಿ ಉಡುಪಿ ಮಠ, ಕೋಮುವಾದ ಹಾಗೂ ಮೌಢ್ಯತೆಯನ್ನು ಪೋಷಿಸುವ ಪತ್ರಿಕೆಗಳು (ಮಣಿಪಾಲದಿಂದ ಹೊರಡುವಂತವು) ಕೇಸರೀಕರಣದ ಸಂಸ್ಕೃತಿಯನ್ನು ಹರಡಲು ತುಂಬಾ ಶ್ರಮ ವಹಿಸಿವೆ. ಕೇಸರೀಕರಣದಲ್ಲಿ ಉಡುಪಿಗೆ ವಿಶೇಷ ಸ್ಥಾನವಿದೆ.

3. ಸವಾಲುಗಳು ಪ್ರತಿಕ್ರಿಯೆ ಇಲ್ಲ.

4. ಪ್ರತಿರೋಧ ಒಡ್ಡುವ ಬಗೆ


ಕೋಮುವಾದಿಗಳ ವಿರುದ್ಧ ಹೋರಾಡುವ ಪ್ರಕ್ರಿಯೆಯಲ್ಲಿ ಅನೇಕ ಬುದ್ಧಿ ಜೀವಿಗಳು, ಸಂಘ ಸಂಸ್ಥೆಗಳು, ವಿಚಾರವಾದಿಗಳು ಸಕ್ರಿಯವಾಗಿದ್ದಾರೆ. ಇವರು ಸಾಕಷ್ಟು ಪ್ರಬಲರೂ ಆಗಿದ್ದಾರೆ. ಆದರೆ ಇವರ ತತ್ವವನ್ನು ಜನತೆಗೆ ಮುಟ್ಟಿಸುವ ಸಾಧನ ತುಂಬಾ ಕ್ಷೀಣವಾಗಿದೆ. ಸಂಘ ಪರಿವಾರದ ತತ್ವಗಳಿಗೆ ಸೆಡ್ಡು ಹೊಡೆದು ಹೋರಾಡುವ ಛಾತಿ ಕಾಂಗ್ರೆಸ್‌ಗೆ ಇಲ್ಲ. ಕೆಲವು ಕಾಂಗ್ರೆಸ್ ನಾಯಕರು ಉಡುಪಿ ಮಠದವರ ಪ್ರೀತಿಗೆ ಪಾತ್ರರಾಗಿ ಅರ್ಧ ಹಿಂದುತ್ವದವರಾಗಿದ್ದಾರೆ. ಎಡಪಂಥಿಯ ಪ್ರಜಾತಾಂತ್ರಿಕ ಹೋರಾಟದೊಡನೆ ಕೋಮುವಾದೀ ವಿರುದ್ಧದ ಹೋರಾಟವನ್ನು ಬೆಸೆಯುವ ಕ್ರಿಯೆ ಇನ್ನೂ ತೀವ್ರವಾಗಿ ಆಗಬೇಕಿದೆ. ●

ಈ ವಾರ ಚರಿತ್ರೆಯಲ್ಲಿ

10 ಮೇ 1857

ಭಾರತೀಯ ಸೈನಿಕರಿಂದ ಮೀರತ್ ದಂಗೆ ಆರಂಭ

ಮೀರತ್ ದಂಡು ಪ್ರದೇಶದಲ್ಲಿ ಇದ್ದ ಬ್ರಿಟಿಶ್ ಈಸ್ಟ್ ಇಂಡಿಯಾ ಕಂಪನಿಯ ಭಾರತೀಯ ಸೈನಿಕರ ದಂಗೆ ಈ ದಿನ ಆರಂಭವಾಯಿತು. 1857ರ ಮೊದಲ ಭಾರತ ಸ್ವಾತಂತ್ರ್ಯ ಸಂಗ್ರಾಮದ ಇದರೊಂದಿಗೆ ಆರಂಭವಾಯಿತು. ಹಂದಿ ಮತ್ತು ದನದ ಮಾಂಸದ ಕೊಬ್ಬಿನಿಂದ ಲೇಪಿಸಿದ ಕಾರತೂಸುಗಳನ್ನು ಬಳಸಲು 95 ಸೈನಿಕರು ನಿರಾಕರಿಸಿದರು. ಅವರನ್ನು ಸೈನ್ಯದಿಂದ ಹೊರಹಾಕಿ ಬಂಧಿಸಲಾಯಿತು. ಇದರಿಂದ ರೊಚ್ಚಿಗೆದ್ದ ಇತರ ಸೈನಿಕರೂ, ಮೀರತ್ ನ ಜನ ಬಂಡೆದ್ದು ಹಲವು ಬ್ರಿಟಿಶ್ ಧಿಕಾರಿಗಳು ಮತ್ತು ಅವರ ಕುಟುಂಬದವರನ್ನು ಕೊಂದರು. ಬಂಧಿತ ಸೈನಿಕರನ್ನು ಮತ್ತು ಉತರ ಹಲವು ಬಂಧಿತರನ್ನು ಬಿಡುಗಡೆ ಮಾಡಿದರು. ಮೀರತ್ ನಲ್ಲಿದ್ದ ಸೈನ್ಯದ ತುಕಡಿ ದೆಹಲಿಯತ್ತ ಹೊರಟಿತು. ಈ ದಂಗೆ ಉತ್ತರ ಭಾರತದ ಹಲವು ಬ್ರಿಟಿಶ್ ದಂಡು ಪ್ರದೇಶಗಳಿಗೆ ಹರಡಿ ಜೂನ್ 1858ರ ವರೆಗೆ ಮುಂದುವರೆಯಿತು.



ಕ್ಯಾಸ್ಟ್ರೋ ಕಥೆ 12

“ಇತಿಹಾಸ ನನ್ನನ್ನು ಮುಕ್ತಗೊಳಿಸುತ್ತದೆ”

1953 ಅಕ್ಟೋಬರ್ 6 ರಂದು ತಮ್ಮ ವಾದದ ಕೊನೆಯಲ್ಲಿ ಲಿಖಿತ ರೂಪದಲ್ಲಿ ಓದಿದ ದೀರ್ಘ ಭಾಷಣದ ಅಂತಿಮ ವಾಕ್ಯವೇ “ಇತಿಹಾಸ ನನ್ನನ್ನು ಮುಕ್ತಗೊಳಿಸುತ್ತದೆ”. ಈ ಲಿಖಿತ ಭಾಷಣವು ಒಂದು ದಸ್ತಾವೇಜು. ಇದು ದಬ್ಬಾಳಿಕೆಯ (tyranny) ವಿರುದ್ಧ ಕ್ರಾಂತಿಕಾರಿ ಸಂಘರ್ಷದ ಒಂದು ಪ್ರಣಾಳಿಕೆ, ಕಾರ್ಯಕ್ರಮ, ಆರೋಪ ಮತ್ತು ಖಂಡನೆಯಾಗಿದೆ. ಜೊತೆ‌ಗೆ ಕಾನೂನಾತ್ಮಕ, ನೈತಿಕ, ತಾತ್ವಿಕ ಮತ್ತು ರಾಜಕೀಯ ಪ್ರತಿವಾದವಾಗಿದೆ. ಇದು ಒಂದು ರೀತಿ ಕ್ಯೂಬನ್ ಕ್ರಾಂತಿಯ ಮೂಲಭೂತ ದಸ್ತಾವೇಜು. ಕ್ಯೂಬಾ ಮತ್ತು ಲ್ಯಾಟಿನ್ ಅಮೇರಿಕಾದಲ್ಲಿ ರಾಜಕೀಯ ತತ್ವ ಮತ್ತು ಕ್ರಾಂತಿಕಾರಿ ಕಾರ್ಯಾಚರಣೆಯ ಚರಿತ್ರೆಯಲ್ಲಿ ಒಂದು ಪ್ರಮುಖ ಪರ್ವವಾಗಿದೆ.

ಮೂಲ: ಇಗ್ನೇಶಿಯಸ್ ರಾಮೊನೆಟ್
ಸಂಗ್ರಹಾನುವಾದ : ಕೆ. ಪ್ರಕಾಶ್

1953 ಜುಲೈ 26 ರಂದು ಮೊಂಕಾಡಾ ಬ್ಯಾರಕ್‌ಗಳು ಮತ್ತು ಬಯಾಮೊ ಬ್ಯಾರಕ್‌ಗಳ ಮೇಲೆ ದಾಳಿ ನಡೆಸಿದ ಆರೋಪಗಳ ಹಿನ್ನೆಲೆಯಲ್ಲಿ ಸ್ಯಾಂಟಿಯಾಗೋ ಡಿ ಕ್ಯೂಬಾದ, ಫಿಡೆಲ್ ಮತ್ತು ಅವರ ಜೊತೆಗಾರರನ್ನು ಇರಿಸಲಾಗಿದ್ದ ಬೊನಿಯಾಟೋದ ಪ್ರಾಂತೀಯ ಜೈಲಿನಲ್ಲಿ 1953 ಸೆಪ್ಟೆಂಬರ್ 21 ರಂದು ವಿಚಾರಣೆ ಪ್ರಾರಂಭವಾಯಿತು. ಫಿಡೆಲ್ ತಮ್ಮ ಪರವಾಗಿ ತಾವೇ ವಾದಿಸಲು ತೀರ್ಮಾನಿಸಿದರು. ಅಕ್ಟೋಬರ್ 6 ರಂದು ತಮ್ಮ ವಾದದ ಕೊನೆಯಲ್ಲಿ ಲಿಖಿತ ರೂಪದಲ್ಲಿ ಓದಿದ ದೀರ್ಘ ಭಾಷಣದ ಅಂತಿಮ ವಾಕ್ಯವೇ “ಇತಿಹಾಸ ನನ್ನನ್ನು ಮುಕ್ತಗೊಳಿಸುತ್ತದೆ”. ಈ ಲಿಖಿತ ಭಾಷಣವು ಒಂದು ದಸ್ತಾವೇಜು. ಇದು ದಬ್ಬಾಳಿಕೆಯ (tyranny) ವಿರುದ್ಧ ಕ್ರಾಂತಿಕಾರಿ ಸಂಘರ್ಷದ ಒಂದು ಪ್ರಣಾಳಿಕೆ, ಕಾರ್ಯಕ್ರಮ, ಆರೋಪ ಮತ್ತು ಖಂಡನೆಯಾಗಿದೆ. ಜೊತೆಗೆ ಕಾನೂನಾತ್ಮಕ, ನೈತಿಕ, ತಾತ್ವಿಕ ಮತ್ತು ರಾಜಕೀಯ ಪ್ರತಿವಾದವಾಗಿದೆ. ಇದು ಒಂದು ರೀತಿ ಕ್ಯೂಬನ್ ಕ್ರಾಂತಿಯ ಮೂಲಭೂತ ದಸ್ತಾವೇಜು. ಕ್ಯೂಬಾ ಮತ್ತು ಲ್ಯಾಟಿನ್ ಅಮೇರಿಕಾದಲ್ಲಿ ರಾಜಕೀಯ ತತ್ವ ಮತ್ತು ಕ್ರಾಂತಿಕಾರಿ ಕಾರ್ಯಾಚರಣೆಯ ಚರಿತ್ರೆಯಲ್ಲಿ ಒಂದು ಪ್ರಮುಖ ಪರ್ವವಾಗಿದೆ.

ಫಿಡೆಲ್‌ರ ಭಾಷಣ ಒಂದು ಅದ್ಭುತ ವಾದಸರಣಿ. ಇಡೀ ಕ್ಯೂಬಾದ ಚರಿತ್ರೆಯನ್ನು ಮತ್ತು ಅಂದಿನ ಪರಿಸ್ಥಿತಿಯನ್ನು ಸಮರ್ಥವಾಗಿ ಇದರಲ್ಲಿ ಕಟ್ಟಿ‌ಕೊಟ್ಟದ್ದು ಮಾತ್ರವಲ್ಲದೆ, ನ್ಯಾಯಾಲಯವನ್ನೇ ತಮ್ಮ ಕ್ರಾಂತಿಕಾರಿ ಉದ್ದೇಶಗಳಿಗೆ ವೇದಿಕೆಯನ್ನಾಗಿ ಮಾರ್ಪಡಿಸಿಕೊಂಡರು. ಕ್ಯೂಬನ್ ಜನತೆಗೆ ಕ್ರಾಂತಿಯ ಉದ್ದೇಶಗಳನ್ನು ಪ್ರಚುರಪಡಿಸಲು ಬಳಸಿಕೊಂಡರು.

ತಮ್ಮ ಮತ್ತು ತಮ್ಮ ಸಂಗಡಿಗರ ಮೇಲೆ ದೇಶದ್ರೋಹ, ಪಿತೂರಿಯಂತಹ ದಾವೆಯನ್ನು ಹೂಡಿದಾಗಿನಿಂದ ಕ್ರಾಂತಿಕಾರಿಗಳಿಗೆ ನೀಡಿದ ಕಿರುಕುಳಗಳನ್ನು, ತೊಂದರೆಗಳನ್ನು, ಕಾನೂನಿನ ಅಡೆತಡೆಗಳನ್ನು ಒಂದೊಂದನ್ನೇ ಚೂರು ಚೂರು ಮಾಡುತ್ತಾ ಫಿಡೆಲ್ ಅತ್ಯಂತ ದೀರ್ಘವಾದ ಪ್ರಸ್ತಾವಿಕ ಮಾತುಗಳನ್ನು ಮಂಡಿಸುತ್ತಾ ಹೋದರು. ಕೇವಲ ಪ್ರಸ್ತಾವಿಕ ಮಾತುಗಳಿಗೇ ನ್ಯಾಯಾಧೀಶರು ಸಾಕಾಗಿ ಹೋದರೇನೋ ಎಂಬಂತಿದ್ದಾಗ ಫಿಡೆಲ್ ಮುಂದುವರಿಸಿ ಹೇಳಿದ್ದು :–

“ನಾನಿನ್ನೂ ಈಗ ಪ್ರಾರಂಭಿಸುತ್ತಿದ್ದೇನೆ, ಎಂಬುದನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ! ನಿಮ್ಮ ಹೃದಯಗಳಲ್ಲಿ ದೇಶಕ್ಕಾಗಿ ಪ್ರೀತಿ, ಮಾನವತೆಗಾಗಿ ಪ್ರೀತಿ, ನ್ಯಾಯಕ್ಕಾಗಿ ಪ್ರೀತಿಯ ಕುರುಹು ಇನ್ನೂ ಇದ್ದರೆ ಗಮನವಿಟ್ಟು ಕೇಳಿ. ಹಲವು ವರ್ಷಗಳ ಕಾಲ ನನ್ನನ್ನು ಮೌನವಾಗಿಸಲಾಗುತ್ತದೆ ಎಂಬುದು ನನಗೆ ಗೊತ್ತು; ಸಾಧ್ಯವಿರುವ ಎಲ್ಲಾ ವಿಧಾನಗಳ ಮೂಲಕ ಸತ್ಯವನ್ನು ಮುಚ್ಚಿ ಹಾಕಲು ಈ ಪ್ರಭುತ್ವ ಪ್ರಯತ್ನಿಸುತ್ತದೆ ಎಂಬುದು ನನಗೆ ಗೊತ್ತು; ನನ್ನನ್ನು ವಿಸ್ಮೃತಿಯ ಆಳದಲ್ಲಿ ಹೂತುಬಿಡುವ ಪಿತೂರಿ ನಡೆಯುತ್ತದೆ ಎಂಬುದು ನನಗೆ ಗೊತ್ತು. ಆದ‌ರೆ ನನ್ನ ಸ್ವರದ ಸೊಲ್ಲಡಗಿಸಲು ಸಾಧ್ಯವಿಲ್ಲ – ನಾನು ಒಂಟಿಯಾಗಿದ್ದೇನೆ ಎಂದು ತೀವ್ರವಾಗಿ ಅನಿಸಿದಾಗಲೂ ಆ ಧ್ವನಿ ನನ್ನ ಎದೆಯಾಳದಿಂದ ಚಿಮ್ಮಿ ಬರುತ್ತದೆ, ಮತ್ತು ಹೀನ ಹೇಡಿಗಳಿಗೆ ಸಾಧ್ಯವಿರದ ಆ ಜ್ವಾಲೆಯನ್ನು ನನ್ನ ಹೃದಯ ಪ್ರಜ್ವಲಿಸುತ್ತದೆ.”

ಬಟಿಸ್ಟಾನ ವಿರುದ್ಧ ಸಮರ ಸಾರಲು ಮೊಂಕಾಡಾ ಮತ್ತು ಬಯಾಮೊ ಪ್ರದೇಶಗಳನ್ನು ಆಯ್ಕೆ ಮಾಡಿಕೊಂಡಿದ್ದಕ್ಕೆ ಕಾರಣಗಳನ್ನು ನ್ಯಾಯಾಧೀಶರ ಮುಂದೆ ವಿವರಿಸುತ್ತಾ, “ಸ್ಯಾಂಟಿಯಾಗೊ ಡಿ ಕ್ಯೂಬಾ ನಮ್ಮ ಕೈವಶವಾದ ತಕ್ಷಣದಿಂದಲೇ ನಾವು ಓರಿಯಂ‌ಟೆ ಜನರನ್ನು ಯುದ್ಧಕ್ಕೆ ಸಜ್ಜುಗೊಳಿಸುತ್ತಿದ್ದೆವು. .... 15 ಲಕ್ಷ ಜನರಿರುವ ಈ ಪ್ರಾಂತ್ಯ ಕ್ಯೂಬಾದಲ್ಲೇ ಅತ್ಯಂತ ಬಂಡಾಯದ ಮತ್ತು ದೇಶಭಕ್ತಿಯ ಪ್ರಾಂತ್ಯವೆಂಬುದನ್ನು ಎಂದಿಗೂ ಮರೆಯಬೇಡಿ. ಮೂವತ್ತು ವರ್ಷಗಳ ಕಾಲ ಸ್ವಾತಂತ್ರ್ಯದ ಕಿಡಿ ಹೊತ್ತಿಸಿದ, ತ್ಯಾಗ, ಬಲಿದಾನ ಮತ್ತು ಶೌರ್ಯದ ಪರಂಪರೆಯನ್ನು ಸೃಷ್ಟಿಸಿದ ಪ್ರಾಂತ್ಯವಿದು. ಓರಿಯಂಟೆ ಪ್ರಾಂತ್ಯದಲ್ಲಿ ಆ ಅದ್ಭುತ ಕಥಾನಕದ ಗಾಳಿಯನ್ನು ನೀವು ಇನ್ನೂ ಉಸಿರಾಡಬಹುದು. ಮುಂಜಾನೆ ಕೋಳಿಗಳು ಕೂಗಿದಾಗ, ಅವು ಸೈನಿಕರಿಗೆ ಧ್ವನಿ ಸೂಚನೆ ನೀಡುವ ಕಹಳೆಗಳೋ ಎಂಬಂತೆ ಭಾಸವಾಗುತ್ತದೆ... !” ಎನ್ನುತ್ತಾರೆ.

ಯಾವ ಜನರ ಬಗ್ಗೆ ಮಾತನಾಡುತ್ತೇವೆ?

ಬಟಿಸ್ಟಾನ ಸರ್ವಾಧಿಕಾರದ ವಿರುದ್ಧ ಕ್ರಾಂತಿಯನ್ನು ಮಾಡಬೇಕೆಂಬ ಕನಸಿನ ಸಾಮಾಜಿಕ ಆಯಾಮಗಳನ್ನು ಫಿಡೆಲ್ ವಾದಿಸಿದ ರೀತಿ ಹೀಗೆ :

“ಯಶಸ್ಸಿನ ಅವಕಾಶಗಳನ್ನು ಲೆಕ್ಕ ಹಾಕಲು ನಾವು ಪರಿಗಣಿಸಿದ ಎರಡನೆಯ ಅಂಶವೇನೆಂದರೆ ಕ್ಯೂಬಾದ ಸಾಮಾಜಿಕ ವ್ಯವಸ್ಥೆ. ಜನತೆಯ ಬೆಂಬಲದ ಬಗ್ಗೆ ನಮ್ಮಲ್ಲಿ ಅಚಲ ನಂಬಿಕೆ ಇದ್ದದ್ದೇ‌ಕೆ? ಜನತೆಯ ಕುರಿತು ನಾವು ಮಾತನಾಡುವಾಗ, ಸುಖದಲ್ಲಿ ಬದುಕುತ್ತಿರುವವರ ಬಗ್ಗೆ, ದೇಶದ ಪ್ರತಿಗಾಮಿ ಶಕ್ತಿಗಳ ಬಗ್ಗೆ, ಯಾವುದೇ ದಮನಕಾರಿ ಪ್ರಭುತ್ವವನ್ನು, ಯಾವುದೇ ಸರ್ವಾಧಿಕಾರವನ್ನು, ಯಾವುದೇ ನಿರಂಕುಶಾಧಿಕಾರವನ್ನು ಸ್ವಾಗತಿಸುವವರ ಬಗ್ಗೆ ನಾವು ಮಾತನಾಡುತ್ತಿಲ್ಲ. ... ... ನಾವು ಹೋರಾಟದ ಬಗ್ಗೆ ಮಾತನಾಡಿದಾಗ ಮತ್ತು ಜನರ ಬಗ್ಗೆ ಪ್ರಸ್ತಾಪಿಸಿದಾಗ ಅದು ವಿಮೋಚನೆಗೊಳ್ಳದ ಸಮೂಹಗಳ ಬಗ್ಗೆ ಎಂದರ್ಥ, ಯಾರಿಗೆ ಪ್ರತಿಯೊಬ್ಬರೂ ಭರವಸೆಗಳನ್ನು ನೀಡುತ್ತಾರೋ ಮತ್ತು ಯಾರು ಎಲ್ಲರಿಂದಲೂ ವಂಚಿಸಲ್ಪಡುತ್ತಾರೋ ಅವರ ಬಗ್ಗೆ; ಯಾರು ಉತ್ತಮವಾದ, ಹೆಚ್ಚು ಗೌರವಯುತವಾದ ಮತ್ತು ಹೆಚ್ಚು ನ್ಯಾಯಯುತವಾದ ರಾಷ್ಟ್ರಕ್ಕಾಗಿ ಹಾತೊರೆಯುತ್ತಾರೋ ಆ ಜನರ ಬಗ್ಗೆ; ತಲೆ ತಲೆಮಾರುಗಳಿಂದ ಅನ್ಯಾಯ ಮತ್ತು ಅಪಹಾಸ್ಯಗಳಿಂದ ನರಳುತ್ತಾ, ನ್ಯಾಯಕ್ಕಾಗಿ ನಿರಂತರ



ಆಶಾವಾದಿಗಳಾಗಿ ಮುಂದುವರಿಯುತ್ತಿರುವವರು ಎಂದರ್ಥ; ತಮ್ಮ ಜೀವನದ ಎಲ್ಲಾ ಆಯಾಮಗಳಲ್ಲಿ ದೊಡ್ಡ ಮತ್ತು ಉತ್ತಮ ಬದಲಾವಣೆಗಳನ್ನು ಸಾಧಿಸಲು ಮತ್ತು ಅದಕ್ಕಾಗಿ ತಮ್ಮ ಕೊನೆಯ ಉಸಿರನ್ನೂ ಅರ್ಪಿಸಲು ತಮ್ಮಲ್ಲಿ ವಿಶ್ವಾಸವನ್ನು ಹೊಂದಿರುವವರು;

ಯಾವುದೇ ಪ್ರಯತ್ನದಲ್ಲಿ ಪ್ರಾಮಾಣಿಕತನ ಮತ್ತು ಯೋಗ್ಯವಾದ ನಂಬಿಕೆಯ ಮೊದಲ ಷರತ್ತೇನೆಂದರೆ, ಇತರ ಯಾರೂ ಯಾವುದೇ ಸಂದರ್ಭದಲ್ಲಿ ಮಾಡದ, ಅಂದರೆ, ಅಂಜಿಕೆಯಿಲ್ಲದೆ ಸಮಗ್ರವಾದ ಸ್ಪಷ್ಟತೆಯಿಂದ ಖಚಿತವಾಗಿ ಮಾತನಾಡುವುದು. ಪ್ರತಿಯೊಂದರ ಬಗ್ಗೆಯೂ ತಾವೇ ಸರಿಯೆಂಬ ಪವಾಡ ಸದೃಶ್ಯರು ಮತ್ತು ಪ್ರತಿಯೊಬ್ಬರನ್ನೂ ಓಲೈಸುವ ಮಧ್ಯಾರಿಗಳು ಮತ್ತು ವೃತ್ತಿಪರ ರಾಜಕಾರಣಿಗಳು, ಎಲ್ಲರನ್ನೂ ಎಲ್ಲ ವಿಷಯಗಳಲ್ಲಿಯೂ ಅಗತ್ಯವಾಗಿ ವಂಚಿಸುತ್ತಿರುತ್ತಾರೆ. ಕ್ರಾಂತಿಕಾರಿಗಳು ತಮ್ಮ ವಿಚಾರಗಳನ್ನು ಧೈರ್ಯವಾಗಿ ಘೋಷಿಸಬೇಕು, ತಮ್ಮ ತತ್ವಗಳನ್ನು ವಿವರಿಸಬೇಕು ಮತ್ತು ತಮ್ಮ ಉದ್ದೇಶಗಳನ್ನು ಬಹಿರಂಗಪಡಿಸಬೇಕು, ಆ ಮೂಲಕ ಸ್ನೇಹಿತನಾಗಲೀ ಅಥವಾ ಶತ್ರುವಾಗಲೀ ಯಾರನ್ನೂ ವಂಚಿಸಲಾಗುವುದಿಲ್ಲ.”

“ಹೋರಾಟಕ್ಕೆ ಸಂಬಂಧಿಸಿ, ನಾವು ಜನರ ಬಗ್ಗೆ ಮಾತನಾಡುವುದೆಂದರೆ, ಯಾರು ತಮ್ಮ ಜೀವನೋಪಾಯಕ್ಕಾಗಿ ತಮ್ಮ ತಾಯ್ನೆಲದಿಂದ ವಲಸೆ ಹೋಗದೆ ಪ್ರಾಮಾಣಿಕವಾಗಿ ತಮ್ಮ ನಿತ್ಯದ ಅನ್ನವನ್ನು ಗಳಿಸಬೇಕೆಂಬ, ಆದರೆ, ಕೆಲಸವಿಲ್ಲದಿರುವ ಆರು ಲಕ್ಷ ಕ್ಯೂಬನ್ನರ ಬಗ್ಗೆ;”

“ನಿಕೃಷ್ಟ ಶೃಂಖಲೆಗಳಲ್ಲಿ ಬದುಕುವ, ವರ್ಷದಲ್ಲಿ ನಾಲ್ಕು ತಿಂಗಳು ಕೆಲಸ ಮಾಡಿ ಉಳಿದಂತೆ ತಮ್ಮ ಮಕ್ಕಳೊಂದಿಗೆ ಹಸಿವಿನಿಂದ ನರಳುವ, ಉಳುಮೆ ಮಾಡಲು ಒಂದಿಂಚು ಭೂಮಿಯೂ ಇಲ್ಲದ ಮತ್ತು ಕಲ್ಲೆದೆಯವರಲ್ಲದಿದ್ದರೆ ಯಾರ ಹೃದಯವನ್ನೂ ಕಲಕಿ ಬಿಡುವ ಐದು ಲಕ್ಷ ಕೃಷಿ ಕೂಲಿಕಾರ ಜನರ ಬಗ್ಗೆ;”

“ಯಾರ ನಿವೃತ್ತಿ ಹಣವನ್ನು ಲಪಟಾಯಿಸಲಾಗಿದೆಯೋ, ಯಾರ ಸವಲತ್ತುಗಳನ್ನು ಕಿತ್ತುಕೊಳ್ಳಲಾಗಿದೆಯೋ, ಯಾರ ಮನೆಗಳು ಅತ್ಯಂತ ನಿಕೃಷ್ಟವಾಗಿವೆಯೋ, ಯಾರ ಸಂಬಳಗಳು ಮಾಲೀಕನಿಂದ ಬಡ್ಡಿ ವ್ಯಾಪಾರಿಯ ಕೈಗೆ ವರ್ಗಾವಣೆಯಾಗುತ್ತವೋ, ಯಾರ ಭವಿಷ್ಯವು ಸಂಬಳ ಕಡಿತ ಮತ್ತು ವಜಾ ಆಗುವುದರಲ್ಲಿದೆಯೋ, ಯಾರ ಜೀವನವು ಕೊನೆಯಿಲ್ಲದ ಕೆಲಸವಾಗಿದೆಯೋ ಮತ್ತು ವಿಶ್ರಾಂತಿ ಎಂಬುದು ಗೋರಿಯೊಳಗಿದೆಯೋ ಆ ನಾಲ್ಕು ಲಕ್ಷ ಕೈಗಾರಿಕಾ ಕಾರ್ಮಿಕರು ಮತ್ತು ಶ್ರಮಜೀವಿಗಳ ಬಗ್ಗೆ;”

“ತಮ್ಮದಲ್ಲದ ಭೂಮಿಯಲ್ಲಿ ಬದುಕುತ್ತಾ ಸಾಯುತ್ತಾ, ಎಂದೆಂದಿಗೂ ಅದು ತಮ್ಮ ಸ್ವಂತದ್ದಾಗದೆ ಸಾಯಲು, ಊಳಿಗಮಾನ್ಯ ಜೀತಗಾರರ ಹಾಗೆ ತಾವು ಬಳಸುವ ಭೂಮಿಗೆ ತಮ್ಮ ಉತ್ಪನ್ನದಲ್ಲಿ ಪಾಲು ನೀಡುವ, ಯಾವಾಗ ಭೂಮಾಲೀಕ ತನ್ನ ಭಂಟರ ಜೊತೆ ಬಂದು ಭೂಮಿಯಿಂದ ಒಕ್ಕಲೆಬ್ಬಿಸುವನೋ ಎಂಬ ಕಾರಣಕ್ಕೆ ಆ ಭೂಮಿಯನ್ನು ಪ್ರೀತಿಸಲಾಗದ, ಅದನ್ನು ಅಭಿವೃದ್ಧಿಪಡಿಸಲಾಗದ, ಅದನ್ನು ಸುಂದರಗೊಳಿಸಲಾಗದ, ಅದರಲ್ಲಿ ದೇವದಾರು ಅಥವಾ ಕಿತ್ತಳೆ ಗಿಡವನ್ನೋ ನೆಡಲಾಗದ, ಒಂದು ಲಕ್ಷ ಸಣ್ಣ ರೈತರ ಬಗ್ಗೆ;”

“ಮುಂದಿನ ಜನಾಂಗಗಳ ಉತ್ತಮ ಭವಿಷ್ಯವನ್ನು ರೂಪಿಸಲು ಅಗತ್ಯವಾದ, ಆದರೆ ಅಗೌರವ ಮತ್ತು ಕಡಿಮೆ ವೇತನ ನೀಡಿದರೂ ಬದ್ಧತೆಯಿಂದ ದುಡಿಯುವ ಮೂವತ್ತು ಸಾವಿರ ಶಿಕ್ಷಕರು ಮತ್ತು ಪ್ರಾಧ್ಯಾಪಕರ ಬಗ್ಗೆ;”

“ಬಿಕ್ಕಟ್ಟುಗಳು ಮತ್ತು ಸಾಲಗಳಿಂದ ಕುಸಿದಿರುವ ಇಪ್ಪತ್ತು ಸಾವಿರ ಸಣ್ಣ ವ್ಯಾಪಾರಿಗಳ ಬಗ್ಗೆ;”

“ಡಾಕ್ಟರ್‌ಗಳು, ಇಂಜಿನಿಯರ್‌ಗಳು, ವಕೀಲರು, ಪಶುವೈದ್ಯರು, ಶಾಲಾ ಶಿಕ್ಷಕರು, ಡೆಂಟಿಸ್ಟರು, ಫಾರ್ಮಾಸಿಸ್ಟರು, ಸುದ್ದಿಪತ್ರಿಕೆಗಳವರು, ಪೆಂಟರ್ಸ್, ಶಿಲ್ಪಿಗಳು, ಇತ್ಯಾದಿ., ತಮ್ಮ ಪದವಿಗಳನ್ನು ಮುಗಿಸಿ ಪೂರ್ಣ ವಿಶ್ವಾಸದೊಂದಿಗೆ ಕೆಲಸ ಮಾಡುವ ಆಕಾಂಕ್ಷೆಗಳೊಂದಿಗೆ, ಆದರೆ ತಮ್ಮ ಕೋರಿಕೆಗಳನ್ನು ಕೇಳುವ ಕಿವಿಗಳಿಲ್ಲದ, ಎಲ್ಲಾ ಬಾಗಿಲುಗಳು ಮುಚ್ಚಿದ, ಮುಂದಡಿ ಇಡಲಾಗದ ತುದಿಗೆ ತಳ್ಳಲ್ಪಟ್ಟ, ಹತ್ತು ಸಾವಿರ ಯುವ ವೃತ್ತಿಪರ ಜನರ ಬಗ್ಗೆ;”

“ತಮ್ಮ ದುರ್ಗತಿಗಳ ಬಗ್ಗೆ ತಿಳಿದುಕೊಂಡು ಮತ್ತು ಆದ್ದರಿಂದಲೇ ಧೃತಿಗೆಡದೆ ಕೆಚ್ಚಿನಿಂದ ಹೋರಾಡುವ ಸಾಮರ್ಥ್ಯದ ಜನ ಇವರಾಗಿದ್ದಾರೆ. ಯಾರ ಜೀವನದ ಹತಾಶ ರಸ್ತೆಗಳು ದ್ರೋಹ ಮತ್ತು ಹುಸಿ ಭರವಸೆಗಳ ಇಟ್ಟಿಗೆಗಳಿಂದ ಮಾಡಲ್ಪಟ್ಟಿದೆಯೋ, ಈ ಜನರಿಗೆ, “ನಾವು ನಿಮಗೆ ಕೊಡುತ್ತೇವೆ ...” ಎಂದು ಹೇಳುವುದಿಲ್ಲ, ಬದಲಿಗೆ: “ಇದು ಇಲ್ಲಿದೆ, ಈಗ ನಿಮ್ಮಲ್ಲಿರುವ ಎಲ್ಲದರಿಂದ ಇದಕ್ಕಾಗಿ ಹೋರಾಡಿ, ಸ್ವಾತಂತ್ರ್ಯ ಮತ್ತು ಸಂತೋಷ ನಿಮ್ಮದಾಗುತ್ತದೆ!”

ಐದು ಕ್ರಾಂತಿಕಾರಿ ಕಾನೂನುಗಳು

ಕ್ರಾಂತಿಕಾರಿಗಳು ಕ್ರಾಂತಿ ನಂತರ ಜಾರಿ ಮಾಡುತ್ತೇವೆಂದು ಹೇಳುತ್ತಿದ್ದ ಕಾನೂನುಗಳ ಬಗ್ಗೆ ದೋಷಾರೋಪಣೆ ಪಟ್ಟಿಯಲ್ಲಿ ಸೇರಿಸದಿರುವುದನ್ನೇ ನೆಪವಾಗಿಟ್ಟುಕೊಂಡು ಅವುಗಳನ್ನು ತಮ್ಮ ವಾದವೆಂಬ ಭಾಷಣದಲ್ಲಿ ದೀರ್ಘವಾಗಿ ವಾದಿಸುತ್ತಾರೆ:–

“ಮೊಂಕಾಡಾ ಬ್ಯಾರಕ್‌ಗಳನ್ನು ವಶಪಡಿಸಿಕೊಂಡ ತಕ್ಷಣದಲ್ಲೇ ರೇಡಿಯೋ ಮೂಲಕ ದೇಶಕ್ಕೆ ಘೋಷಣೆ ಮಾಡುತ್ತಿದ್ದ ಐದು ಕ್ರಾಂತಿಕಾರಿ ಕಾನೂನುಗಳ ಬಗ್ಗೆಯೂ ನಮ್ಮ ಮೇಲಿನ ದೋಷಾರೋಪಣೆ ಪಟ್ಟಿಯಲ್ಲಿ ಸೇರಿಸಬೇಕಿತ್ತು. ಕರ್ನಲ್ ಷಾವಿಯಾನೊ ಉದ್ದೇಶಪೂರ್ವಕವಾಗಿ ಆ ದಾಖಲೆಗಳನ್ನು ನಾಶಪಡಿಸಿರಬಹುದು. ಹಾಗೊಂದು ವೇಳೆ ಹಾಗೇ ಮಾಡಿದ್ದರೂ ಸಹ, ಅವು ನನಗೆ ನೆನಪಿವೆ.

ಮೊದಲನೆಯ ಕ್ರಾಂತಿಕಾರಿ ಕಾನೂನು, ಜನತೆಗೆ ಅಧಿಕಾರವನ್ನು ಹಿಂದಿರುಗಿಸುವುದು ಮತ್ತು 1940 ರ ಸಂವಿಧಾನವನ್ನು, ಯಾವಾಗ ಜನತೆ ಅದನ್ನು ತಿದ್ದುಪಡಿ ಮಾಡಲು ಅಥವಾ ಬದಲಾಯಿಸಲು ತೀರ್ಮಾನಿಸುತ್ತಾರೋ ಅಲ್ಲಿವರೆಗೆ, ಪ್ರಭುತ್ವದ ಉಚ್ಚ ಕಾನೂನೆಂದು ಘೋಷಣೆ ಮಾಡುವುದು.... ಇದನ್ನು ಉಲ್ಲಂಘಿಸುವ ಯಾರನ್ನೇ ಆಗಲೀ ಶಿಕ್ಷಿಸುವ ಅಧಿಕಾರವನ್ನು, ಒಂದು ಚುನಾಯಿತ ಸಂಸ್ಥೆ ಇಲ್ಲದಿರುವಾಗ, ಕ್ರಾಂತಿಕಾರಿ ಚಳುವಳಿ ವಹಿಸಿಕೊಳ್ಳುವುದು. ಅಂದರೆ, ಶಾಸನಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗದ ಅಧಿಕಾರಗಳನ್ನು ಕ್ರಾಂತಿಕಾರಿ ಶಕ್ತಿಗಳು ಹೊಂದುವುದು.

ಬಂಡಾಯದ ಜನಸಮೂಹಗಳ ಬೆಂಬಲವನ್ನು ಪಡೆದಿರುವ ಸರ್ಕಾರವು, ಜನತೆಯ ಇಚ್ಛೆ ಮತ್ತು ನಿಜವಾದ ನ್ಯಾಯವನ್ನು ಸಮರ್ಪಕವಾಗಿ ಜಾರಿಗೊಳಿಸಲು ಬೇಕಾದ ಎಲ್ಲಾ ಅಧಿಕಾರಗಳನ್ನು ಹೊಂದಿರುವುದು. ...... ಇಲ್ಲದಿದ್ದಲ್ಲಿ ಸಂವಿಧಾನಿಕ ವ್ಯವಸ್ಥೆಯನ್ನು ದುರ್ಬಲಗೊಳಿಸಿದ ಶಕ್ತಿಗಳ ಕೈಗೇ ವಾಪಸ್ ಅಧಿಕಾರ ನೀಡಿದಂತಾಗುತ್ತದೆ. ಇದು ಮೋಸ, ವಂಚನೆ ಮತ್ತು ದ್ರೋಹವೆಂದೆನಿಸಿಕೊಳ್ಳುತ್ತದೆ.

ಕಪ್ಪು ಹಣದ ಮೊತ್ತದ ಅಧಿಕೃತ ಅಂದಾಜು ಸಾಧ್ಯವಿಲ್ಲ ಎಂದರೆ 'ಅಚ್ಛೇದಿನ್' ಗತಿ?

ಭಾರತದ ವ್ಯಕ್ತಿಗಳು ವಿದೇಶಗಳಿಗೆ ಎಷ್ಟು ಕಪ್ಪು ಹಣ ಕಳಿಸಿದ್ದಾರೆ ಎಂಬುದರ ಅಧಿಕೃತ ಅಂದಾಜು ಇಲ್ಲ ಎಂದು ಮೋದಿ ಸರಕಾರದ ಹಣಕಾಸು ರಾಜ್ಯಮಂತ್ರಿಗಳು ರಾಜ್ಯಸಭೆಗೆ ನೀಡಿದ ಉತ್ತರದಲ್ಲಿ ಹೇಳಿದ್ದಾರೆ.(ಪಿಟಿಐ, ಮೇ 3)

"ಭಾರತೀಯ ವ್ಯಕ್ತಿಗಳು ಹೊರಗಿನ ದೇಶಗಳಿಗೆ ಕಳಿಸಿರುವ ಕಪ್ಪು ಹಣ ಎಷ್ಟೆಂದು ನಿರ್ಧರಿಸುವುದು ಒಂದು ತನಿಖೆಯ ಸಂಗತಿ. ಆದಾಯ ತೆರಿಗೆ ಇಲಾಖೆ, ಜಾರಿ ನಿರ್ದೇಶನಾಲಯ, ಸಿಬಿಐ ಇತ್ಯಾದಿ ಸಂಬಂಧಪಟ್ಟ ಕಾನೂನು ಜ್ಯಾರಿ ಸಂಸ್ಥೆಗಳಿಂದ ಫಾಲೋ–ಅಪ್ ಕ್ರಿಯೆಗಳು ನಡೆಯುತ್ತಿವೆ. ಆದರೆ ಇಂತಹ ಪ್ರಕರಣಗಳಲ್ಲಿ ಇರುವ ಮೊತ್ತಗಳ ವಿವರಗಳನ್ನು ಕೇಂದ್ರೀಯವಾಗಿ ಇಡುವುದಿಲ್ಲ" ಇದು ರಾಜ್ಯಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಸರಕಾರದಿಂದ ಬಂದಿರುವ ಉತ್ತರ. ಅಂದರೆ ಬಳಿ ಲೆಕ್ಕ ಇಲ್ಲ.

ಬ್ಯಾಂಕ್ ಆಫ್ ಇಟಲಿಯ ಆರ್ಥಿಕ ತಜ್ಞರ ಇತ್ತೀಚಿನ ಲೆಕ್ಕಾಚಾರಗಳ ಪ್ರಕಾರ ಜಗತ್ತಿನಾದ್ಯಂತ ತೆರಿಗೆಮುಕ್ತಧಾಮಗಳಲ್ಲಿ ಗುಡ್ಡೆ ಹಾಕಿರುವ ಕಪ್ಪು ಹಣದಲ್ಲಿ ಭಾರತದ ಪಾಲು 152ರಿಂದ 181 ಬಿಲಿಯ ಡಾಲರುಗಳು, ಅಂ–ದರೆ ಸುಮಾರು 10 ರಿಂದ 12ಲಕ್ಷ ಕೋಟಿ ರೂ.ಗಳು. ಈ ಮಾಹಿತಿ ಬಗ್ಗೆ ಸರಕಾರ ಏನನ್ನುತ್ತದೆ ಎಂದು ಕೇಳಿದಾಗ ಇದು ಕೆಲವು ಅನುಮಾನಗಳ ಆಧಾರದಲ್ಲಿ ಮಾಡಿರುವ ಲೆಕ್ಕಾಚಾರ, ಇದಕ್ಕೆ ಸಾಕ್ಷಿಗಳೇನೂ ಇದ್ದ ಹಾಗೆ ಕಾಣುವುದಿಲ್ಲ ಎಂಬುದು ಸರಕಾರದ ಉತ್ತರ.

ಇನ್ನೊಂದು ಲೆಕ್ಕಾಚಾರದ ಪ್ರಕಾರ ಕಪ್ಪು ಹಣದ ಮೊತ್ತದಲ್ಲಿ ಭಾರತದ ಪಾಲು 4ರಿಂದ 5 ಬಿಲಿಯ ಡಾಲರ್‌ಗಳು, ಅಂದರೆ 26ರಿಂದ 33 ಸಾವಿರ ಕೋಟಿ ರೂ.ಗಳು ಎಂದು ಹೇಳಿದ ಹಣಕಾಸು ರಾಜ್ಯಮಂತ್ರಿಗಳು ಇಂತಹ ವಿಭಿನ್ನ ಅಂದಾಜುಗಳ ಸಂರ್ಭದಲ್ಲಿ ಇವನ್ನು ಬಹಳ ಜಾಗರೂಕತೆಯಿಂದ ನೋಡಬೇಕಾಗುತ್ತದೆ, ಈ ಬಗ್ಗೆ ದೃಢ ಮಾಹಿತಿ ಯಾವ ರೀತಿಯಲ್ಲೂ ಸಿಗುವುದಿಲ್ಲ ಎಂಬುದು ಮೋದಿ ಸರಕಾರದ ಕಿರಿಯ ಹಣಕಾಸು ಮಂತ್ರಿಗಳು ಎರಡು ವರ್ಷಗಳ ಆಳ್ವಿಕೆಯ ನಂತರ ಕೊಟ್ಟಿರುವ ಉತ್ತರ.

ಹಾಗಿದ್ದರೆ 2014ರಲ್ಲಿ ಚುನಾವಣಾ ಪ್ರಚಾರದಲ್ಲಿ ಆಗಿನ ಪ್ರಧಾನಿ ಪಟ್ಟಾಕಾಂಕ್ಷಿ ಮೋದಿಯವರು ವಿದೇಶಗಳಲ್ಲಿ ಭಾರತದ 80ಲಕ್ಷ ಕೋಟಿ ರೂ.ಗಳಷ್ಟು ಕಪ್ಪು ಹಣ ರಾಶಿ ಬಿದ್ದಿದೆ ಎಂದು ಯಾವ ಆಧಾರದಲ್ಲಿ ಹೇಳಿದರು ಎಂಬ ಪ್ರಶ್ನೆ ಸಹಜ. ಅವರ ನೆಚ್ಚಿನ ಬೆಂಬಲಿಗ ಬಾಬಾ ರಾಂದೇವ್ ಇನ್ನೂ ಮುಂದೆ ಹೋಗಿ 400 ಕೋಟಿ ಲಕ್ಷ ರೂ. ಅಂ–ದರು. ಬಿಜೆಪಿಯ ಟಾಸ್ಕ್ ಫೋರ್ಸ್ 11 ರಿಂದ 22.5 ಲಕ್ಷ ಕೋಟಿ ರೂ. ಎಂದು ಲೆಕ್ಕ ಹಾಕಿತ್ತು.

ಕಪ್ಪು ಹಣದ ಲೆಕ್ಕ ಸಿಗುವುದೇ ಇಲ್ಲ ಎಂದಿರುವಾಗ ಇವೆಲ್ಲ ಕೇವಲ ಚುನಾವಣಾ ಬುರುಡೆಗಳು, ಮತದಾರರಲ್ಲಿ ಪ್ರತಿಯೊಬ್ಬರ ಖಾತೆಗೆ 15ರಿಂದ 20 ಲಕ್ಷ ರೂ,ಗಳು ಬಂದು ಬೀಳುವ ವಚನವೂ ಕೇವಲ ಬುರುಡೆಯೇ? ಮತದಾರರು ಇದನ್ನು ತಿಳಿಯಲು ಈ ಎರಡು ವರ್ಷಗಳ ಕಾಲ ಕಾಯಬೇಕಾಗಿತ್ತೇ?

ಬಿಜೆಪಿಯ ಟಾಸ್ಕ್ ಪೋರ್ಸ್‌ನ ಅಂದಾಜು ಸುಮಾರಾಗಿ ಬ್ಯಾಂಕ್ ಆಫ್ ಇಟಲಿಯ ಆರ್ಥಿಕ ತಜ್ಞರ ಅಂದಾಜಿನ ಹತ್ತಿರಕ್ಕೆ ಬರುತ್ತದೆ. ಆದರೆ ಈ ಬಗ್ಗೆ 'ಹೆಮ್ಮೆ' ಪ್ರದರ್ಶಿಸುವ ಧೈರ್ಯವೂ ಈಗ ಆಳುವ ಪಕ್ಷವಾಗಿರುವ ಅದಕ್ಕೆ ಇದ್ದಂತಿಲ್ಲ. ಏಕೆಂದರೆ ಆಗ ಪ್ರತಿಯೊಬ್ಬರ ಖಾತೆಗೆ 15–20ಲಕ್ಷ ರೂ. ಯಾವಾಗ ಬರುತ್ತದೆ ಎಂಬ ಪ್ರಶ್ನೆ ಇನ್ನೂ ಜೀವಂತವಾಗಿರುತ್ತದೆ.

ರಾಜಸ್ತಾನ : ಕನ್ಹೈಯ ಕುಮಾರ್‌ಗಳು ಹುಟ್ಟದಂತೆ ಮಾಡುವ ಪಠ್ಯಕ್ರಮ!

ರಾಜಸ್ತಾನದ 'ಮಾದರಿ' ಶಿಕ್ಷಣ ಮಂತ್ರಿ ಮತ್ತೆ ಸುದ್ದಿಯಲ್ಲಿದ್ದಾರೆ. 'ಈ ರಾಜ್ಯದಲ್ಲಿ ಕನ್ಹೈಯ ಕುಮಾರ್‌ಗಳು ಹುಟ್ಟದಂತೆ ಮಾಡುವ ಪಠ್ಯಕ್ರಮವನ್ನು ತರುತ್ತೇವೆ' ಎಂದು ಅವರು ಈ ಹಿಂದೆ ಹೇಳಿದ್ದು ನಮ್ಮ ಓದುಗರಿಗೆ ನೆನಪಿರಬಹುದು. ಅದನ್ನೀಗ ಜಾರಿಗಪಳಸುತ್ತಿರುವಂತೆ ಕಾಣುತ್ತದೆ.

ಅದಕ್ಕೆ ಒಂದು ಉದಾಹರಣೆ ಆಗಲೇ ಜನಜನಿತವಾಗಿ ಬಿಟ್ಟಿದೆ. ಅವರ ಪ್ರಕಾರ 'ಪುನರ್‍ರಚಿಸಿದ' ಎಂಟನೇ ತರಗತಿಯ ಸಮಾಜ ವಿಜ್ಞಾನದ ಪಠ್ಯಪುಸ್ತಕ ಈ ವಾರ ಎಲ್ಲ ಮಾಧ್ಯಮಗಳಲ್ಲಿ ಸುದ್ದಿ ಮಾಡಿದೆ. ಅದರಲ್ಲಿ ಜವಹರಲಾಲ್ ನೆಹರೂ ಅವರ ಹೆಸರು ಸ್ವಾತಂತ್ರ್ಯ ಹೋರಾಟಗಾರರ ಪಟ್ಟಿಯಲ್ಲಿಯೂ ಇಲ್ಲವಂತೆ, ಅವರು ದೇಶದ ಮೊದಲ ಪ್ರಧಾನ ಮಂತ್ರಿ ಎಂಬ ಪ್ರಸ್ತಾಪವೂ ಆ ಪುಸ್ತಕದಲ್ಲಿ ಎಲ್ಲೂ ಇಲ್ಲವಂತೆ.

ಮಹಾತ್ಮ ಗಾಂಧಿಯವರನ್ನು ನಾಥೂರಾಮ್ ಗೋಡ್ಸೆ ಗುಂಡಿಟ್ಟು ಕೊಂದ ಎಂಬ ಸಂಗತಿಯೂ ಈ ಪಠ್ಯಪುಸ್ತಕದಲ್ಲಿ ಇಲ್ಲವಂತೆ. ಅದಕ್ಕೆ ಆಶ್ಚರ್ಯವೇನೂ ಪಡಬೇಕಾಗಿಲ್ಲ, ಏಕೆಂದರೆ ಕನ್ಹೈಯ ಕುಮಾರ್‌ಗಳು ಹುಟ್ಟದಿರಬೇಕಾದರೆ ಈ ರೀತಿ ಇತಿಹಾಸವನ್ನು ಹುಸಿಗೊಳಿಸಲೇ ಬೇಕು ತಾನೇ?

ಆದರೆ ಅದೇಕೋ ಈ ಮಂತ್ರಿಗೆ ಇವನ್ನು ಸಮರ್ಥಿಸಿಕೊಳ್ಳುವ ಭಂಡತನ ಪ್ರದರ್ಶಿಸುವ ಧೈರ್ಯವಾಗಿಲ್ಲ. ಈ ಹೊಸ ಪಠ್ಯಪುಸ್ತಕಗಳನ್ನು ಪರಿಣಿತರು ಸಿದ್ಧಪಡಿಸಿದ್ದು, ಇದರಲ್ಲಿ ಸರಕಾರದ ಪಾತ್ರವೇನೂ ಇಲ್ಲ ಎಂದು ನುಸುಳಿಕೊಳ್ಳಬೇಕೆಂದು ಅವರಿಗೆ ಏಕೋ ಅನಿಸಿದೆ. ಆದರೆ ಅದನ್ನು ಯಾರೂ ನಂಬದಿದ್ದಾಗ ಯಾವ ಹೊಸ ಪುಸ್ತಕದಲ್ಲಿ ಎಷ್ಟು ಬಾರಿ ನೆಹರೂ ಹೆಸರು ಬಂದಿದೆ ಎಂದು ಲೆಕ್ಕ ಮಾಡಲು ಕೂತಂತೆ ಕಾಣುತ್ತದೆ.

ಪುಟ 91ರಲ್ಲಿ(ಸಂವಿಧಾನದ ಗುರಿಗಳ ಕುರಿತ ನಿರ್ಣಯವನ್ನು ಮಂಡಿಸಿದವರು ಎಂದು) ಮತ್ತು 177ರಲ್ಲಿ(ರಾಜಸ್ತಾನದ ಏಕೀಕರಣದ ದಾರಿಯಲ್ಲಿ ಒಂದು ಹೆಜ್ಜೆಯನ್ನು ಉದ್ಘಾಟಿಸಿದವರು ಎಂದು) ಅವರ ಹೆಸರು ಬಂದಿದೆ ಎಂದರು. ನಂತರ ಒಂದು ಹೇಳಿಕೆಯನ್ನೇ ಕೊಟ್ಟು 7, 9 ಮತ್ತು 11ನೇ ತರಗತಿಗಳ ಪಠ್ಯಪುಸ್ತಕಗಳಲ್ಲಿ ನೆಹರೂ ಅವರ ಹೆಸರು 'ಕನಿಷ್ಟ 15' ಕಡೆ ಬಂದಿದೆ ಎಂದು ಲೆಕ್ಕ ಕೊಟ್ಟಿದ್ದಾರೆ. ಆದರೆ ಇವುಗಳಲ್ಲಿ ಕನಿಷ್ಟ 13 ಕೇವಲ ಲೆಕ್ಕಕ್ಕೆ ಸೇರಿಸಿದಂತಿದೆ ಎಂದು ಟೈಂಸ್ ಆಫ್ ಇಂಡಿಯಾ ವರದಿಗಾರರು ಹೇಳಿದ್ದಾರೆ.

ಇದಕ್ಕಿಂತ ಮುಖ್ಯವಾಗಿ ಬಂಭತ್ತನೇ ತರಗತಿಯ ಸಮಾಜ ವಿಜ್ಞಾನ ಪಠ್ಯಪುಸ್ತಕದಲ್ಲಿದ್ದ ನೆಹರೂ ಅವರ 1947ರ ಅಗಸ್ಟ್ 14–15ಮಧ್ಯರಾತ್ರಿಯ ಐತಿಹಾಸಿಕ ಭಾಷಣ 'ಭವಿಷ್ಯದೊಂದಿಗೆ ಸಮಾಗಮ'ವನ್ನು ಹೊಸ ಪುಸ್ತಕದಲ್ಲಿ ತೆಗೆದು ಹಾಕಲಾಗಿದೆಯಂತೆ. ಹನ್ನೊಂದನೇ ತರಗತಿಯ ಹಿಂದಿ ಸಾಹಿತ್ಯದ ಪಠ್ಯಪುಸ್ತಕದಲ್ಲಿದ್ದ 'ಭಾರತ್ ಮಾತಾ' ಎಂಬ ಅವರ ಲೇಖನವನ್ನೂ ತೆಗೆದು ಹಾಕಲಾಗಿದೆಯಂತೆ. ಕನ್ಹೈಯ ಕುಮಾರ್‌ಗಳು ಹುಟ್ಟದಂತೆ ಮಾಡಲು ಇವೆರಡಂತೂ ಅತ್ಯಗತ್ಯ!


'ಅಚ್ಚೇ ದಿನ್' ರೂವಾರಿ ಗುಜರಾತ್ ಬಿಟ್ಟು ದಿಲ್ಲಿಗೆ ಹೋದ ಮೇಲೆ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ 10 ನೇ ಸ್ಥಾನದಲ್ಲಿರುವ ಅವರ ಗುಜರಾತ್ ಮಾದರಿಯ ಸ್ಥಾನವನ್ನು, ಇನ್ನೂ ಕೆಳಗೆ, ಭಾರತದ ಸರಾಸರಿಗಿಂತಲೂ ಕೆಳಗೆ, 12ನೇ ಸ್ಥಾನದಲ್ಲಿರುವ 'ರಾಜಸ್ತಾನ ಮಾದರಿ' ಪಡೆಯುತ್ತಿರುವಂತೆ ಕಾಣುತ್ತದೆ–ಕಾರ್ಮಿಕ ಹಕ್ಕುಗಳ ರಂಗದಲ್ಲಿ, ಶೈಕ್ಷಣಿಕ ರಂಗದಲ್ಲಿ ಮತ್ತು ಚಮಚಾ ಬಂಡವಾಳಶಾಹಿಯ ರಂಗದಲ್ಲೂ!

ಈ ನಡುವೆ ಈ ಶಿಕ್ಷಣ ಮಂತ್ರಿಗೆ ಆರೆಸ್ಸೆಸ್ ಕಚೇರಿಯಿಂದ ಬುಲಾವ್ ಬಂದಿದೆಯಂತೆ. ಏಕೆ ನೆಹರೂ ಪ್ರಸ್ತಾಪಗಳನ್ನು ತೆಗೆದಿದ್ದೀರಿ ಎಂದು ಕೇಳಲಿಕ್ಕಂತೂ ಅಲ್ಲ. ಆದರೆ ಕೇಸರೀಕರಣ ಮಾಡುವಾಗಲೂ ವಹಿಸಬೇಕಾದ 'ಜಾಗರೂಕತೆ'ಯನ್ನು ವಹಿಸಿಲ್ಲ ಎಂದು ತರಾಟೆಗೆ ತೆದುಕೊಳ್ಳಲು ಎಂದು ಟೈಂಸ್ ಆಫ್ ಇಂಡಿಯಾ (ಮೇ12) ವರದಿ ಮಾಡಿದೆ. ನೆಹರೂರವರಿಗೆ ಕೊಕ್ ಕೊಡುವ ಭರದಲ್ಲಿ ಭಗತ್ ಸಿಂಗ್ ಮತ್ತು ಅವರ ಸಂಗಾತಿಗಳಿಗೆ ಸ್ಫೂರ್ತಿ ತುಂಬಿದ್ದ ರಾಂಪ್ರಸಾದ್ ಬಿಸ್ಮಿಲ್ ಅವರ 'ಸರ್‌ಫರೋಶೀ ಕೀ ತಮನ್ನಾ..'(ಕಟುಕನ ಕೈಗಳಿಗೆ ತಲೆ ಕೊಡುವ ಹುಮ್ಮಸ್ಸಿದೆ, ಕಟುಕನ ಬಾಹುಗಳಲ್ಲಿ ಶಕ್ತಿಯೆಷ್ಟಿದೆ ನೋಡಬೇಕಾಗಿದೆ) ಎಂಬ ಉರ್ದು ಕವನವನ್ನು ಮತ್ತು ಹಿಂದಿಯ ಪ್ರಖ್ಯಾತ ಕವಯಿತ್ರಿ ಮತ್ತು ಆ ರಾಜ್ಯದಲ್ಲಿ ಗಾಂಧೀಜಿಯ ಅಸಹಕಾರ ಚಳುವಳಿಯಲ್ಲಿ ಭಾಗವಹಿಸಿದ ಮೊದಲ ಮಹಿಳೆ ಸುಭದ್ರಾ ಕುಮಾರಿ ಅವರ ಪ್ರಖ್ಯಾತ 'ಝಾನ್ಸೀ ಕೀ ರಾನಿ' ಕವನವನ್ನೂ ಕೈಬಿಡಲಾಗಿದೆಯಂತೆ. ಏನು ಮಾಡುವುದು, ಸಂಘ ಪರಿವಾರದ ಸಿದ್ಧಾಂತಗಳನ್ನು ಅಕ್ಷರಶಃ ಪಾಲಿಸಬೇಕೆಂದು ಹೊರಡುವವರಿಂದ ಇಂತಹ 'ತಪ್ಪು'ಗಳು ಆಗುತ್ತಿವೆ. ದಿಲ್ಲಿಯ ಶಿವಸೇನೆಯವರು ಅಮೆರಿಕಾದ ಅಧ್ಯಕ್ಷ ಸ್ಥಾನದ ರಿಪಬ್ಲಿಕನ್ ಅಭ್ಯರ್ಥಿ ಗೆಲ್ಲಲಿ ಎಂದು ವಿಶೇಷ ಹವನ ಮಾಡಿಸಿದಂತೆ, ಜೆಎನ್‌ಯು ಪ್ರಕರಣದಲ್ಲಿ ಗೃಹಮಂತ್ರಿಗಳೇ ಟ್ವೀಟ್ ಮಾಡಿ ಬೇಸ್ತು ಬಿದ್ದಂತೆ, ಕೇಂದ್ರ ಹಣಕಾಸು ಮಂತ್ರಿಗಳು ಪಿಎಫ್ ವಿಷಯದಲ್ಲಿ ಎರಡು ತಿಂಗಳಲ್ಲಿ ಮೂರು ಬಾರಿ ತಿಪ್ಪರಲಾಗ ಹಾಕಿದಂತೆ, ಎಲ್ಲಕ್ಕೂ ಮಿಗಿಲಾಗಿ ಬಿಜೆಪಿಯ ಅತಿರಥ–ಮಹಾರಥರೇ ಉತ್ತರಾಖಂಡದಲ್ಲಿ ಹೆಜ್ಜೆ–ಹೆಜ್ಜೆಗೂ ಹೈಕೋರ್ಟ್–ಸುಪ್ರಿಂ ಕೋರ್ಟ್ ತರಾಟೆಗೆ ಗುರಿಯಾಗುವಂತಹ ಪ್ರದರ್ಶನ ನೀಡಿದಂತೆ!

ದೇಶದ ಕಾಲುಭಾಗದಷ್ಟು ಜನ ಬರದ ದವಡೆಗೆ ಸಿಲುಕಿರುವಾಗ ಅದನ್ನು ಎದುರಿಸುವಲ್ಲಿ, ಜೀವಗಳನ್ನು ಉಳಿಸುವಲ್ಲಿ 'ಇಚ್ಛಾಶಕ್ತಿ'ಯ ಕೊರತೆಯಿದೆ, ಇದೊಂದು ರಾಷ್ಟ್ರೀಯ ಅನಾಹುತ ಎಂದು ಪರಿಗಣಿಸದೆ ಕೇಂದ್ರ ಸರಕಾರ 'ಒಕ್ಕೂಟ ತತ್ವ'ದ ಹೆಸರಿನಲ್ಲಿ ತನ್ನ ಹೊಣೆಗಾರಿಕೆಯಿಂದ ಕೈತೊಳೆದುಕೊಂಡು ಬಿಟ್ಟಿದೆ ಎಂದು ದೇಶದ ಸರ್ವೋಚ್ಚ ನ್ಯಾಯಾಲಯ ತನ್ನ 53 ಪುಟಗಳ ತೀರ್ಪಿನಲ್ಲಿ ಕಟುವಾಗಿ ಹೇಳಿದೆ –ಸುದ್ದಿ



ವ್ಯಂಗ್ಯಚಿತ್ರ ಕೃಪೆ: ಉನ್ನಿ, ಇಂಡಿಯನ್ ಎಕ್ಸ್‌ಪ್ರೆಸ್



'ತಗೊಳ್ಳಿ ನಮ್ಮ 5ರೂ'–ರೇಗ ಕಾರ್ಮಿಕರು '...ಮತ್ತು ನಮ್ಮ 7ರೂ'–ಪಿಂಚಣಿದಾರರು

2 ವರ್ಷಗಳಾಗುತ್ತಿರುವಂತೆ 'ವಂತಿಗೆ'ಗಳ ಮಹಾಪೂರ!

ಅಯ್ಯೋ ಪಾಪ, ಉದ್ಯಮಿಗಳಿಗೆ ಇನ್ನಷ್ಟು ರಿಯಾಯ್ತಿಗಳನ್ನು ಕೊಡಲು ಮೋದಿ ಸರಕಾರದ ಬಳಿ ದುಡ್ಡಿಲ್ಲ ಎಂದುಕೊಂಡು ಮೊನ್ನೆ ಮೇ ದಿನದಂದು ಝಾರ್ಖಂಡ್‌ನ ನೂರಾರು ರೇಗ ಕಾರ್ಮಿಕರು ಪ್ರಧಾನ ಮಂತ್ರಿಗಳಿಗೆ ತಮಗೆ ಈ ವರ್ಷ ಕೊಟ್ಟ 5 ರೂ. ಕೂಲಿ ಹೆಚ್ಚಳವನ್ನು ಹಿಂದಿರುಗಿಸಿದ್ದಾರೆ ಎಂದು ಇಂಡಿಯನ್ ಎಕ್ಸ್‌ಪ್ರೆಸ್ ವರದಿ ಮಾಡಿದೆ.

ನಂತರ ಮೇ 5 ರಂದು ಪಿಂಚಣಿದಾರರ 'ಚಲೋದಿಲ್ಲಿ'ಗೆ ಬಂದ ರಾಜಸ್ತಾನದ ಗ್ರಾಮೀಣ ಪಿಂಚಣಿದಾರರು ತಮ್ಮ ಒಂದು ದಿನದ ಪಿಂಚಣಿ 7ರೂ.ಗಳನ್ನು ಇದೇ ರೀತಿ 'ಅಯ್ಯೋ ಪಾಪ' ಎನ್ನುತ್ತ ಪ್ರಧಾನ ಮಂತ್ರಿಗಳಿಗೆ ಕಳಿಸಿದ್ದಾರೆ ಎಂದು ಸ್ಕ್ರಾಲ್.ಇನ್ ವರದಿ ಮಾಡಿದೆ.

ಎರಡು ವರ್ಷಗಳ 'ಅಚ್ಚೇ ದಿನ್'ಗಳು ಅದರ ರೂವಾರಿಯ ಬಗ್ಗೆ ಮೂಡಿಸಿದ ವಿಶ್ವಾಸದ ಪ್ರತೀಕ ಇದು.

ರೇಗ ಅಥವ ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಒಂದು ಹಕ್ಕು ಆಧಾರಿತ ಯೋಜನೆ, ಇದರ ಪ್ರಕಾರ ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗ ಕೇಳುವವರಿಗೆ ವರ್ಷಕ್ಕೆ ಕನಿಷ್ಟ 100ದಿನಗಳ ಉದ್ಯೋಗಗಳನ್ನು ಇಲ್ಲವೇ ಭತ್ಯೆಯನ್ನು ಒದಗಿಸಲು ಸರಕಾರ ಬಾಧ್ಯವಾಗಿದೆ ಈ ವರ್ಷ ಎಪ್ರಿಲ್‌ನಲ್ಲಿ ಈ ಹಕ್ಕು–ಆಧಾರಿತ ಸ್ಕೀಮಿಗೆ ಕನಿಷ್ಟ ಕೂಲಿಯನ್ನು ಕೇವಲ 5ರೂ.ಗಳಷ್ಟು ಹೆಚ್ಚಿಸಿತು. ಇದನ್ನು ಪ್ರತಿಭಟಿಸಿ ಝಾರ್ಖಂಡ್‌ನಲ್ಲಿ ಮಾಣಿಕ ಎಂಬ ಹಳ್ಳಿಯ ನೂರಾರು ಕೆಲಸಗಾರರು ಈ ಅಲ್ಪ ಹೆಚ್ಚಳವನ್ನು ಪ್ರಧಾನ ಮಂತ್ರಿಗಳಿಗೆ ನೀವೇ ಇಟ್ಟುಕೊಳ್ಳಿ ಎಂದು ಕಳಿಸಿದ್ದಾರೆ. 100ದಿನಗಳ ಕೆಲಸವಂತೂ ಕೊಡುವುದಿಲ್ಲ, ಮಾಡಿಸಿಕೊಂಡ ಕೆಲಸಕ್ಕೆ ಕೂಲಿ ಕೂಡ ಸಮಯಕ್ಕೆ ಸರಿಯಾಗಿ ಕೊಡುವುದಿಲ್ಲ, ಕೂಲಿ ಕೊಟ್ಟರೂ ಅದು ಕನಿಷ್ಟ ಕೂಲಿಗಿಂತ ಕಡಿಮೆಯಿರುತ್ತದೆ. ಝಾರ್ಖಂಡ್‌ನಲ್ಲಿ ಕನಿಷ್ಟ ದಿನ ಕೂಲಿ 212ರೂ. ಎಂಬುದನ್ನು ಗಮನಿಸಬೇಕು. ಇದೀಗ 'ಒಳ್ಳೆಯ ದಿನ'ಗಳ ಪ್ರಾಮಾಣಿಕತೆ!

ಇನ್ನು ಗ್ರಾಮೀಣ ಪ್ರದೇಶದ ಬಡ ಪಿಂಚಣಿದಾರರ ಪಿಂಚಣಿಯನ್ನು 2006ರಿಂದ ಪರಿಷ್ಕರಿಸಿಲ್ಲ. ರಾಜಸ್ತಾನದ ತಾರಾಗರ್‌ನಿಂದ ಬಂದ 76 ವರ್ಷದ ಭಾಗ್ನಿ ದೇವಿಗೆ ಸಿಗುವ ಪಿಂಚಣಿ ತಿಂಗಳಿಗೆ 200ರೂ. ಅಂದ ರೆ ದಿನಕ್ಕೆ 7ರೂ.ಗಳಷ್ಟೂ ಇಲ್ಲ! ಇದನ್ನು ರಾಜಸ್ತಾನ ಪಿಂಚಣಿದಾರರು ಪ್ರಧಾನ ಮಂತ್ರಿಗಳಿಗೆ ಕಳಿಸಿದ್ದಾರೆ, ಅವರಿಗಂತೂ ಪ್ರಯೋಜನವಾದೀತು ಎಂದು!

'#ಪೋ ಮೋನೆ ಮೋದಿ' ಟ್ವಿಟರ್‌ಹಾರ

ಎರಡು ವರ್ಷಗಳ ಆಳ್ವಿಕೆ ರೇಗಾ ಕಾರ್ಮಿಕರಿಂದ, ಪಿಂಚಣಿದಾರ–ರಿಂದ 'ವಂತಿಗೆ'ಗಳ ಪ್ರತಿಭಟನೆಗಳನ್ನು ಕೊಡಿಸಿದರೆ ಕೇರಳದಲ್ಲಿ ಪ್ರಧಾನಿಗಳ ಚುನಾವಣಾ ಭಾಷಣಗಳು ಅವರಿಗೆ ಟ್ವಿಟರ್ ವ್ಯಂಗ್ಯಗಳ ಮಾಲೆಯನ್ನೇ ತಂದು ಕೊಟ್ಟಿದೆ. ಕೇರಳದಲ್ಲಿ ಪರಿಶಿಷ್ಟ ವರ್ಗಗಳಲ್ಲಿ ಶಿಶು ಮರಣ ದರ ಸೋಮಾಲಿಯಾಕ್ಕಿಂತಲೂ ಕೆಟ್ಟದಾಗಿದೆ ಎಂಬ ಅಣಿಮುತ್ತು ಉದುರಿಸಿ ತನ್ನ ಬೆನ್ನು ತಾನೇ ತಟ್ಟಿಕೊಳ್ಳಲು(ಅಥವ ಸೆಲ್ಫಿ ತಗೊಳ್ಳಲು) ಅಣಿಯಾಗುತ್ತಿರುವಂತೆ ರಾಜ್ಯದಲ್ಲಿರುವ ಮತ್ತು ಹೊರಗೂ ಇರುವ ಕೇರಳೀಯರ ಆಕ್ರೋಶದ ಸರಮಾಲೆ ಅವರನ್ನು ಸುತ್ತಿಕೊಂಡಿದೆ. ಸಾಮಾಜಿಕ ಮಾಧ್ಯಮದಲ್ಲಂತೂ '#ಪೋ ಮೋನೆ ಮೋದಿ' ಮತ್ತು "#ಸೊಮಾಲಿಯ' ಎಂಬ ಟ್ವಿಟರ್‌ಗಳಲ್ಲಿ ಭಾರತದಂತಹ ದೇಶದ ಪ್ರಧಾನಿಗೆ ತಕ್ಕುದಲ್ಲದ ಹತ್ತಾರು ಸಾವಿರ ಗೇಲಿ ಮಾತುಗಳನ್ನು ಎದುರಿಸಬೇಕಾಗಿ ಬಂದಿದೆ ಎಂದು ವರದಿಯಾಗಿದೆ.

ಪ್ರತಿಯೊಂದು ಯಶಸ್ವಿ ರಕ್ಷಣಾ 'ಡೀಲ್'ನ ಹಿಂದೆ ಒಂದು ಯಶಸ್ವಿ ಹಗರಣ ಇರುತ್ತದೆ



ವ್ಯಂಗ್ಯಚಿತ್ರ ಕೃಪೆ: ಮಂಜುಲ್,ಡಿಎನ್‌ಎ



ಕೆ.ಎಂ.ನಾಗರಾಜ್

ಬಡವರಿಗೆ ನೇರ ವರ್ಗಾವಣೆ, ಶ್ರೀಮಂತರಿಗೆ ಪರೋಕ್ಷ ವರ್ಗಾವಣೆ



ಸಾಮಾನ್ಯವಾಗಿ, ಬಡವರಿಗೆ ದೊರೆಯುವ ಕೆಲವು ಸೌಲಭ್ಯಗಳು ಮತ್ತು ಅವುಗಳ ಮೇಲಿನ ವೆಚ್ಚದ ಬಗ್ಗೆ ಮಾಧ್ಯಮಗಳಿಂದಾಗಿ, ಎಲ್ಲರಿಗೂ ತಿಳುವಳಿಕೆ ಇದೆ.
ಆದರೆ, ಶ್ರೀಮಂತರು ಮತ್ತು ಉದ್ಯಮಪತಿಗಳು ಸರ್ಕಾರದಿಂದ ಪಡೆಯುವ ಸೌಲಭ್ಯಗಳ ಬಗ್ಗೆ ಮತ್ತು ಅದಕ್ಕಿಂತಲೂ ಮಿಗಿಲಾಗಿ ಅವರಿಗೆ ತೆರಿಗೆ ರಿಯಾಯ್ತಿ ಗಳ ಮೂಲಕ ಒದಗಿಸುವ ಬಹಳ ದೊಡ್ಡ ಮೊತ್ತದ ಆರ್ಥಿಕ ನೆರವಿನ ಬಗ್ಗೆ ಬಹಳ ಮಂದಿಗೆ ಗೊತ್ತಿಲ್ಲ. ಈ ರಿಯಾಯ್ತಿ ಗಳೂ ಹಣದ ಇನ್ನೊಂದು ರೂಪವೇ ಹೊರತು ಬೇರೆ ಏನೂ ಅಲ್ಲ. ಅದೊಂದು ಗುಟ್ಟಲ್ಲದಿದ್ದರೂ ಒಂದು ರೀತಿಯ ಗುಟ್ಟಿನ ವ್ಯವಹಾರ.

ಆರ್ಥಿಕವಾಗಿ ದುರ್ಬಲವಾಗಿರುವ ಜನಸಮುದಾಯದ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ದೊರೆಯುವ ವಿದ್ಯಾರ್ಥಿವೇತನ, ವಯಸ್ಸಾದವರಿಗೆ ಸಿಗುವ ಪಿಂಚಣಿ, ನರೇಗಾದಡಿಯಲ್ಲಿ ಕೊಡುವ ಕೂಲಿ ಹಣ ಮುಂತಾದ ಪ್ರಯೋಜನೆಗಳನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರವಾಗಿ ಹಣ ಜಮಾ ಮಾಡುವ ವ್ಯವಸ್ಥೆಗೆ 'ಸೌಕರ್ಯಗಳ ನೇರ ವರ್ಗಾವಣೆ'(ಡಿಬಿಟಿ) ಎನ್ನುತ್ತಾರೆ. ಸರ್ಕಾರದ ಯೋಜನೆಗಳನ್ನು ಅನುಷ್ಠಾನಗೊಳಿಸುವ ಮಧ್ಯವರ್ತಿಗಳೇ ಹಣ ಗುಳುಂ ಮಾಡುತ್ತಿರುವುದನ್ನು ಕಡಿಮೆ ಮಾಡುವ' ಉದ್ದೇಶದಿಂದ, 'ಸೌಕರ್ಯಗಳ ನೇರ ವರ್ಗಾವಣೆ' ಯೋಜನೆಯನ್ನು 2013ರಿಂದ ಜಾರಿಗೊಳಿಸಿರುವುದಾಗಿ ಸರ್ಕಾರ ಹೇಳಿಕೊಳ್ಳುತ್ತಿದೆ. ಜನಸಾಮಾನ್ಯರಿಗೆ ಸಬ್ಸಿಡಿಯು ರೂಪದಲ್ಲಿ ದೊರೆಯುತ್ತಿರುವ ಪದಾರ್ಥಗಳು ಮತ್ತು ಸೇವೆಗಳನ್ನು/ಪ್ರಯೋಜನಗಳನ್ನು, ಹಂತ ಹಂತವಾಗಿ, ಹಣದ ರೂಪದಲ್ಲಿ ನೇರವಾಗಿ ವರ್ಗಾಯಿಸುವ ಯೋಜನೆಯನ್ನು ಜಾರಿಗೊಳಿಸಲು ಸರ್ಕಾರ ತೀರ್ಮಾನಿಸಿದೆ.

ಸಾಮಾನ್ಯವಾಗಿ, ಬಡವರಿಗೆ ದೊರೆಯುವ ಕೆಲವು ಸೌಲಭ್ಯಗಳು ಮತ್ತು ಅವುಗಳ ಮೇಲಿನ ವೆಚ್ಚದ ಬಗ್ಗೆ ಮಾಧ್ಯಮಗಳಲ್ಲಿ ಟೀಕೆ, ಟಿಪ್ಪಣಿ ಪ್ರಚಾರಗಳು ಇರುತ್ತವೆ. ಹಾಗಾಗಿ, ಈ ನೇರ ವರ್ಗಾವಣೆಯ ಬಗ್ಗೆ ಎಲ್ಲರಿಗೂ ತಿಳುವಳಿಕೆ ಇದೆ. ಆದರೆ, ಶ್ರೀಮಂತರು ಮತ್ತು ಉದ್ಯಮಪತಿಗಳು ಸರ್ಕಾರದಿಂದ ಪಡೆಯುವ ಸೌಲಭ್ಯಗಳ ಬಗ್ಗೆ ಮತ್ತು ಅದಕ್ಕಿಂತಲೂ ಮಿಗಿಲಾಗಿ ಅವರಿಗೆ ತೆರಿಗೆ ರಿಯಾಯ್ತಿಗಳ ಮೂಲಕ ಒದಗಿಸುವ ಬಹಳ ದೊಡ್ಡ ಮೊತ್ತದ ಆರ್ಥಿಕ ನೆರವಿನ ಬಗ್ಗೆ ಬಹಳ ಮಂದಿಗೆ ಗೊತ್ತಿಲ್ಲ. ಈ ರಿಯಾಯ್ತಿಗಳೂ ಹಣದ ಇನ್ನೊಂದು ರೂಪವೇ ಹೊರತು ಬೇರೆ ಏನೂ ಅಲ್ಲ. ಅದೊಂದು ಗುಟ್ಟಲ್ಲದಿದ್ದರೂ ಒಂದು ರೀತಿಯ ಗುಟ್ಟಿನ ವ್ಯವಹಾರ. ಈ ವ್ಯವಹಾರವನ್ನು 'ಪರೋಕ್ಷ ವರ್ಗಾವಣೆ' ಎಂದು ಕರೆಯಬಹುದು. ಏಕೆಂದರೆ, ತಾಂತ್ರಿಕವಾಗಿ, ಹಣ ನೇರವಾಗಿ ಬ್ಯಾಂಕ್ ಖಾತೆಗೆ ವರ್ಗಾವಣೆಯಾಗುವುದಿಲ್ಲ. ಹಾಗಲ್ಲದಿದ್ದರೂ, ಅದು ಹಣದ ವರ್ಗಾವಣೆಯೇ. ದೇಶದ ಜನಸಂಖ್ಯೆಯ ಸುಮಾರು ಮುಕ್ಕಾಲು ಭಾಗದಷ್ಟಿರುವ ಕೋಟಿ ಕೋಟಿ ಬಡ ಜನತೆಯ ಆಹಾರ, ಆರೋಗ್ಯ, ಶಿಕ್ಷಣ ಮುಂತಾದ ಸಾಮಾಜಿಕ ಜವಾಬ್ದಾರಿಯನ್ನು ನಿರ್ವಹಿಸಲು ಸರ್ಕಾರಕ್ಕೆ ತಗುಲುವ ವೆಚ್ಚಗಳು ಸಾವಿರಾರು ಕೋಟಿ ರೂಪಾಯಿಗಳ ಲೆಕ್ಕದಲ್ಲಿದ್ದರೆ, ಕೆಲವು ಸಾವಿರ ಸಂಖ್ಯೆಯ ಶ್ರೀಮಂತರು ಮತ್ತು ಉದ್ಯಮಪತಿಗಳು ಸರ್ಕಾರದಿಂದ ಪಡೆಯುವ ಸೌಲಭ್ಯಗಳ ಮೊತ್ತವು ಕೆಲವು ಲಕ್ಷ ಕೋಟಿ ರೂಗಳಾಗುತ್ತದೆ.

ವಿತ್ತೀಯ ಬಲವರ್ಧನೆಯೇ ಧ್ಯೇಯವೆಂದು ಸರ್ಕಾರ ಘೋಷಣೆ ಮಾಡಿದೆ. ಅದನ್ನು ಸಾಧಿಸಲು ತೆರಿಗೆ ವರಮಾನಗಳು ಹೆಚ್ಚಬೇಕು. ಆದರೆ, ಅದ–ಕ್ಕೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಸರ್ಕಾರ ಹಿಂಜರಿಯುತ್ತಿದೆ. ಈ ಎರಡು ಅಂಶಗಳ ಕಲಸು ಮೇಲೋಗರವೇ ನಮ್ಮ ದೇಶದಲ್ಲಿ ಜಾರಿಯಲ್ಲಿರುವ ಆರ್ಥಿಕ ನೀತಿಗಳು. ಈ ಎರಡೂ ಅಂಶಗಳು ಮೂಕ ಗೊಂಬೆಗಳಂತೆ ಅಕ್ಕ ಪಕ್ಕದಲ್ಲಿ ಕೂತಿವೆ. ಪರಿಣಾಮವಾಗಿ, ಸರ್ಕಾರವು ವೆಚ್ಚಗಳ ಕಡಿತ ಮಾಡುತ್ತಿದೆ. ಬಡಜನರಿಗೆ ಸಂಬಂಧಿಸಿದ ಸಾಮಾಜಿಕ ವೆಚ್ಚಗಳ ಮೇಲೆ ಈ ಕಡಿತದ ಹೊಡೆತ ಬಹಳವಾಗಿ ಬಿದ್ದಿದೆ. ಹಾಗಾಗಿ, ಜೀವನ ನಿರ್ವಹಣೆ ಮಾಡಲು ಬಡಜನರು ಏದುಸಿರು ಬಿಡುವಂತಾಗಿದೆ.

ಕೈಗಾರಿಕಾ ಉತ್ಪಾದನೆಯ ಪ್ರಮಾಣ ಕುಸಿಯುತ್ತಿದೆ. ಗ್ರಾಮೀಣ ಪ್ರದೇಶಗಳಲ್ಲಿ ಬರ ಕಾಡುತ್ತಿದೆ. ಕುಡಿಯುವ ನೀರಿಗೂ ಜನ ಪರದಾಡುತ್ತಿದ್ದಾರೆ. ಜಾನುವಾರುಗಳಿಗೆ ಮೇವು ಮತ್ತು ಕೂಲಿಕಾರರಿಗೆ ಉದ್ಯೋಗ ದೊರೆಯುತ್ತಿಲ್ಲ. ಒಟ್ಟಾರೆ ಯಾಗಿ ಇಡೀ ಅರ್ಥವ್ಯವಸ್ಥೆಯೇ ಮಂದಗತಿಯಲ್ಲಿದೆ. ಹಾಗಾಗಿ, ಜನತೆಯ ಜೀವನ ದುರ್ಭರ ವಾಗುತ್ತಿದೆ. ಇಂತಹ ಸಮಯದಲ್ಲಿ, ಸರ್ಕಾರವು ಸೂಕ್ತ ಕಾಮಗಾರಿ ಕೆಲಸಗಳನ್ನು ಕೈಗೊಂಡು ಬೃಹತ್ ಪ್ರಮಾಣದಲ್ಲಿ ಹಣ ವೆಚ್ಚ ಮಾಡುವ ಮೂಲಕ ಅರ್ಥವ್ಯವಸ್ಥೆಯನ್ನು ಚುರುಕುಗೊಳಿಸಿ ಜನತೆಯ ಸಂಕಷ್ಟಗಳಿಗೆ ಸ್ವಲ್ಪವಾದರೂ ಪರಿಹಾರ ಒದಗಿಸಬಹುದು. ಈ ನಿಟ್ಟಿನಲ್ಲಿ ತೊಡಗಿಕೊಳ್ಳಲು ಸರ್ಕಾರ ಅಸಮರ್ಥವಾಗಿದೆ ಅಥವಾ ವಿಮುಖವಾಗಿದೆ.

ಜನತೆಯ ಸಾಮಾಜಿಕ ಮತ್ತು ಆರ್ಥಿಕ ಹಕ್ಕುಗಳನ್ನು ಮಾನ್ಯ ಮಾಡುವುದು ಸರ್ಕಾರದ ಹೊಣೆಗಾರಿಕೆ. ಅದನ್ನು ನಿರ್ವಹಿಸುವಂತೆ ಮತ್ತು ಆರ್ಥಿಕ ಹಿಂಜರಿಕೆಯನ್ನು ಮೀರುವ ಸಲುವಾಗಿ ಬೃಹತ್ ಪ್ರಮಾಣದ ಹಣ ವೆಚ್ಚ ಮಾಡುವಂತೆ ಕೂಗು ಎದ್ದ ಸಂದರ್ಭಗಳಲ್ಲಿ ಸರ್ಕಾರ ಕೊಡುವ ಮಾಮೂಲು ಉತ್ತರ–ಬೊಕ್ಕಸದಲ್ಲಿ ಸಾಕಷ್ಟು ಹಣ ಇಲ್ಲ ಮತ್ತು ಇಂತಹ ಖರ್ಚುಗಳಿಂದಾಗಿ ವಿತ್ತೀಯ ಕೊರತೆ ಹೆಚ್ಚಾಗುತ್ತದೆ. ಅದರಿಂದ ಜಾಗತಿಕ ಹೂಡಿಕೆದಾರರಿಗೆ "ತಪ್ಪು ಸಂಕೇತ"ರವಾನೆಯಾಗುತ್ತದೆ. ಪರಿಣಾಮವಾಗಿ ಭವಿಷ್ಯದಲ್ಲಿ ಹೂಡಿಕೆ ಸ್ಥಗಿತವಾಗಿ ಬೆಳವಣಿಗೆ ಕುಂಠಿತವಾಗುತ್ತದೆ. ಇದು ಸರ್ಕಾರದ ಉತ್ತರ. ತನ್ನ ಈ ನಿಲುವಿನಿಂದಾಗಿ ಜನತೆಯ ಸ್ಥಿತಿಗತಿಗಳ ಮೇಲೆ ಎಷ್ಟು ಅಡ್ಡ ಪರಿಣಾಮ ಉಂಟಾಗುತ್ತದೆ ಎಂಬುದಕ್ಕಿಂತಲೂ ಅರ್ಥವ್ಯವಸ್ಥೆಯ ಬೆಳವಣಿಗೆಯ ಮೇಲಿನ ಭೀತಿಯೇ ಸರ್ಕಾರಕ್ಕೆ ಮುಖ್ಯವಾಗುತ್ತದೆ.

ನೇರ ತೆರಿಗೆಗಳ ಇಳಿಕೆ

ಸರ್ಕಾರದ ಈ ವಾದವು ಮೂಲ ಸಮಸ್ಯೆಯನ್ನು ಮರೆಮಾಚುತ್ತದೆ. ಜನತೆಗೆ ಅತ್ಯವಶ್ಯಕವಾದ ಸೇವೆಗಳನ್ನು ಒದಗಿಸಲು ಬೇಕಾಗುವ ಹಣ ಖರ್ಚುಮಾಡಲು ಮತ್ತು ವಿತ್ತೀಯ ಶಿಸ್ತು ಭಂಗವಾದಂತೆ ನೋಡಿಕೊಳ್ಳಲು ಸರ್ಕಾರಕ್ಕಿರುವುದು ಒಂದೇ ದಾರಿ–ಹೆಚ್ಚಿನ ಮಟ್ಟದ ತೆರಿಗೆ ಸಂಗ್ರಹ. ಆದರೆ, ಸರ್ಕಾರದ ತೆರಿಗೆ ಸಂಗ್ರಹದ ಮಟ್ಟ ಚಿಂತಾಜನಕವಾಗಿದೆ ಮತ್ತು ದಿನೇ ದಿನೇ ಅಧೋಗತಿಗಿಳಿಯುತ್ತಿದೆ.

ಜಿ–20 ದೇಶಗಳಿಗೆ ಹೋಲಿಸಿದರೆ, ಭಾರತದಲ್ಲಿ ಜಿಡಿಪಿ–ತೆರಿಗೆಯ ಅನುಪಾತ ಬಹಳ ಕೆಳಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸೇರಿ ಜಿಡಿಪಿಯ ಸುಮಾರು 18% ತೆರಿಗೆ ಸಂಗ್ರಹಿಸುತ್ತಿವೆ. ಇದು ಆಫ್ರಿಕನ್ ದೇಶಗಳಿಗಿಂತಲೂ ಕಡಿಮೆ. ಇತ್ತೀಚಿನ ವರ್ಷಗಳಲ್ಲಿ, ಉತ್ತಮ ಆರ್ಥಿಕ ಬೆಳವಣಿಗೆಯಾಗಿದ್ದರೂ ಜಿಡಿಪಿ–ತೆರಿಗೆಯ ಅನುಪಾತ ಬದಲಾಗಿಲ್ಲ. ಅಂದರೆ, ಜನತೆಯ ಅವಶ್ಯಕತೆಗಳನ್ನು ಪೂರೈಸುವಲ್ಲಿ ಆರ್ಥಿಕ ಬೆಳವಣಿಗೆ ಸೋತಿದೆ.

ತೆರಿಗೆ ಸಂಗ್ರಹದಲ್ಲಿ, ಪರೋಕ್ಷ ತೆರಿಗೆಗಳ ಮೇಲಿನ ಅವಲಂಬನೆ ಹೆಚ್ಚುತ್ತಿರುವುದು ಕಳವಳಕಾರಿಯಾಗಿದೆ. ಏಕೆಂದರೆ, ಪರೋಕ್ಷ ತೆರಿಗೆಗಳು ಬಡವರನ್ನು ಅಳತೆಗೆಟ್ಟ ಪ್ರಮಾಣದಲ್ಲಿ ತಟ್ಟುತ್ತವೆ. ವಾಸ್ತವವಾಗಿ, ಅತಿ ಹೆಚ್ಚಿನ ತೆರಿಗೆ ಕೊಡುತ್ತಿರುವವರು ತಾವು ಮಾತ್ರ ಎಂಬ ತಪ್ಪು ಕಲ್ಪನೆ ಶ್ರೀಮಂತರು ಮತ್ತು ಮಧ್ಯಮ ವರ್ಗದವರಲ್ಲಿದೆ. ಶ್ರೀಮಂತರಿಗಿಂತ ಹೆಚ್ಚಿನ ತೆರಿಗೆ ಬಡವರು ಕೊಡುತ್ತಾರೆ. ಏಕೆಂದರೆ, ಬಡವರು ತಮ್ಮ ಸಂಪೂರ್ಣ ವರಮಾನವನ್ನು (ಅದರ ಜೊತೆಯಲ್ಲಿ ಮಾಡಿದ ಸಾಲವನ್ನೂ) ಖರ್ಚುಮಾಡುತ್ತಾರೆ. ಹಾಗಾಗಿ, ಅವರು ಕೊಳ್ಳುವ ಪದಾರ್ಥಗಳ ಮೇಲೆ ಎಕ್ಸೈಸ್ ಡ್ಯೂಟಿ, ವ್ಯಾಪಾರ ತೆರಿಗೆ ಮತ್ತು ಆಮದು ಸುಂಕಗಳ ರೂಪದಲ್ಲಿ ಹೆಚ್ಚಿನ ಪ್ರಮಾಣದ ತೆರಿಗೆ ಭರಿಸುತ್ತಾರೆ. ತದ್ವಿರುದ್ಧವಾಗಿ, ಶ್ರೀಮಂತರು ತಮ್ಮ ವರಮಾನವನ್ನು ಪೂರ್ತಿ ಖರ್ಚುಮಾಡುವುದಿಲ್ಲ ಮತ್ತು ಅನೇಕ ಉಳಿತಾಯ ಉತ್ತೇಜನಗಳನ್ನು ಬಳಸಿಕೊಂಡು ತಮ್ಮ ತೆರಿಗೆಯ ಹೊರೆಯನ್ನು ಇಳಿಸಿಕೊಳ್ಳುತ್ತಾರೆ.

2009–10ರಲ್ಲಿ, ಒಟ್ಟು ತೆರಿಗೆಗಳಲ್ಲಿ, ನೇರ ತೆರಿಗೆಗಳ ಪಾಲು 60.8% ಇತ್ತು. ಅದು 2012–13ರಲ್ಲಿ 54.2% ಮತ್ತು 2015–16ರಲ್ಲಿ 51% ಮಟ್ಟಕ್ಕೆ ಇಳಿದಿದೆ. 2014–15ರಲ್ಲಿ, ಜಾಗತಿಕ ಮಾರುಕಟ್ಟೆಯಲ್ಲಿ ತೈಲಗಳ ಬೆಲೆಗಳು ಇಳಿದಿದ್ದು, ಕೇಂದ್ರ ಸರ್ಕಾರವು ಎಕ್ಸೈಸ್ ಡ್ಯೂಟಿ ಏರಿಸಿದ ಪರಿಣಾಮವಾಗಿ ಪರೋಕ್ಷ ತೆರಿಗೆಗಳ ಪಾಲು 34% ಹೆಚ್ಚಾಗಿದೆ ಮತ್ತು ಅದರಲ್ಲಿ ಬಡವರ ಕೊಡುಗೆ ಹೆಚ್ಚುತ್ತಿದೆ.

ತೆರಿಗೆ ತಪ್ಪಿಸಿಕೊಳ್ಳುವ ಕಾರ್ಪೊರೇಟ್‌ಗಳು

ನಮ್ಮ ತೆರಿಗೆ ವ್ಯವಸ್ಥೆಯಲ್ಲಿ ಶ್ರೀಮಂತರು ಮತ್ತು ಕಾರ್ಪೊರೇಟ್‌ಗಳು ಅನೇಕ ತೆರಿಗೆ ವಿನಾಯ್ತಿ ಪಡೆ–ಯುತ್ತಾರೆ. ಹಾಗಾಗಿ ಅವರು ಕಟ್ಟುವ ತೆರಿಗೆ ಪ್ರಮಾಣ ಕಡಿಮೆ. ತೆರಿಗೆ ಕಾನೂನಿನ ಲೋಪ ದೋಷಗಳನ್ನು ಬಳಸಿಕೊಂಡು ಅತಿ ಕಡಿಮೆ ಪ್ರಮಾಣದಲ್ಲಿ ತೆ–ರಿಗೆ ಹೊರೆ ಬೀಳುವಂತೆ ನೋಡಿಕೊಳ್ಳಬಹುದು. ಹಾಗಿದ್ದರೂ, ತೆರಿಗೆ ಕಟ್ಟುವುದನ್ನು ತಪ್ಪಿಸಿಕೊಳ್ಳುವ ಅಕ್ರಮಗಳು ಬಿರುಸಾಗಿ ನಡೆಯುತ್ತಿವೆ ಎಂಬುದನ್ನು ಪನಾಮ ಸೋರಿಕೆ ಪ್ರಕರಣ ಬಯಲುಮಾಡಿದೆ.

ಕಂಪೆನಿಗಳ ಲಾಭದ ಪ್ರಮಾಣ ಹೆಚ್ಚುತ್ತಿದ್ದರೂ ಅವು ಕಟ್ಟುವ ತೆರಿಗೆ ಕಡಿಮೆಯಾಗುತ್ತಿದೆ. ಈಗಿರುವ ತೆರಿಗೆ ನಿಯಮಗಳ ಪ್ರಕಾರ ಅವು ತಮ್ಮ ವರಮಾನದ 33.84% ತೆರಿಗೆ ಕಟ್ಟಬೇಕು. ಆದರೆ, ಅವು ಸರಾಸರಿಯಾಗಿ ಕಟ್ಟುತ್ತಿರುವ ತೆರಿಗೆಯ ಪ್ರಮಾಣ 24.64% ಇದೆ. ಕಂಪೆನಿಗಳ ಲಾಭ ಹೆಚ್ಚಿದಂತೆ ಅವು ಕಟ್ಟುತ್ತಿರುವ ತೆರಿಗೆಯ ಪ್ರಮಾಣ ಇಳಿಯುತ್ತಿದೆ. ಒಂದು ಕೋಟಿ ಲಾಭ ಗಳಿಸಿದ ಕಂಪೆನಿ 29.37% ತೆರಿಗೆ ಕಟ್ಟಿದರೆ, ಐದು ನೂರು ಕೋಟಿಗೂ ಅಧಿಕ ಲಾಭ ಗಳಿಸಿದ ಕಂಪೆನಿ ಕಟ್ಟುವ ತೆರಿಗೆ 22.88% ಇದೆ. ಸಾರ್ವಜನಿಕ ವಲಯದ ಕಂಪೆನಿಗಳು ಹೆಚ್ಚು ತೆರಿಗೆ ಕಟ್ಟುತ್ತವೆ. ಬುದ್ಧಿವಂತ ಖಾಸಗಿ ಕಂಪೆನಿಗಳು ಕಟ್ಟುತ್ತಿರುವ ತೆರಿಗೆ ಬಹಳ ಕಡಿಮೆ.

ತೆರಿಗೆ ವ್ಯವಸ್ಥೆಯು ಈ ವಿಪರೀತಗಳನ್ನು ಸೃಷ್ಟಿಸಿದೆ. ಉದಾಹರಣೆಗೆ, 2014–15ರಲ್ಲಿ, ಲಾಭಗಳಿಸಿದ 52,911 ಕಂಪೆನಿಗಳು ಯಾವ ತೆರಿಗೆಯನ್ನೂ ಕಟ್ಟಿಲ್ಲ ಅಥವಾ ಸಕಾರದಿಂದಲೇ ಹಣ ಪಡೆದಿವೆ. ಕಳೆದ ಐದು ವರ್ಷಗಳಲ್ಲಿ, ತೆರಿಗೆಯ ದರ ಇಳಿಸಿದ ಪರಿಣಾಮವಾಗಿ ಕೆಲವು ವಲಯದಲ್ಲಿರುವ ಕಂಪೆನಿಗಳಿಗೆ ಯದ್ವಾತದ್ವ ಪ್ರಯೋಜನವಾಗಿದೆ. 2010–11 ರಲ್ಲಿ 21.94% ಇದ್ದ ಲೀಸಿಂಗ್ ಕಂಪೆನಿಗಳ ತೆರಿಗೆ 2014–15ರ ವೇಳೆಗೆ ಕೇವಲ 1.53% ಮಟ್ಟಕ್ಕೆ ಇಳಿದಿದೆ. ಗಣಿಗಾರಿಕೆ ಗುತ್ತಿಗೆದಾರರ ತೆರಿಗೆ 32.29% ನಿಂದ 14.02%ಗೆ ಇಳಿದಿದೆ. ಇಲ್ಲಿರುವ ರಾಜಕೀಯವನ್ನು ಇದು ಬಿಂಬಿಸುತ್ತದೆ.

ಸರ್ಕಾರಕ್ಕೆ ಇದೆಲ್ಲಾ ಗೊತ್ತಿಲ್ಲ ಎಂದೇನೂ ಅಲ್ಲ. ವಾಸ್ತವವಾಗಿ, ಸರಕಾರಕ್ಕೆ ಬರಬೇಕಾಗಿದ್ದ ತೆರಿಗೆಗಳನ್ನು ಕಾನೂನು ಪ್ರಕಾರವೇ ಬಿಟ್ಟುಕೊಟ್ಟ ರಿಯಾಯ್ತಿಯ ವಿವರಗಳು ಮುಂಗಡ ಪತ್ರದ ದಾಖಲೆಗಳಲ್ಲೇ ಸಿಗುತ್ತವೆ. ಕಳೆದ ಎರಡು ವರ್ಷಗಳಲ್ಲಿ ಈ ರೀತಿಯಲ್ಲಿ ಬಿಟ್ಟುಕೊಟ್ಟ ತೆರಿಗೆಗಳ ಪ್ರಮಾಣ ಜಿಡಿಪಿಯ ಶೇ.4.5ರಷ್ಟಿದೆ ಮತ್ತು ಇದು ಬಜೆಟ್‌ನಲ್ಲಿ ತೋರಿಸಿರುವ ಕೊರತೆಯ ಮೊತ್ತಕ್ಕಿಂತಲೂ ದೊಡ್ಡದಿದೆ. ಅನೇಕ ಉತ್ತೇಜನಗಳನ್ನು ಒದಗಿಸಿರುವ ಕಾರಣದಿಂದ, ಕಾರ್ಪೊರೇಟ್ ತೆರಿಗೆ ಒಂದರಲ್ಲೇ, 2014–15ರಲ್ಲಿ 65,067 ಕೋಟಿ ರೂಗಳು ಮತ್ತು 2015–16ರಲ್ಲಿ 68,711 ಕೋಟಿ ರೂಗಳ ತೆರಿಗೆ ಆದಾಯ ನಷ್ಟವಾಗಿದೆ.

ವೈಯುಕ್ತಿಕ ತೆರಿಗೆ ಉಳಿತಾಯ ಉಪಾಯಗಳು

ವ್ಯಕ್ತಿಗಳಿಂದ ತೆರಿಗೆಗಳನ್ನು ಸಂಗ್ರಹಿಸುತ್ತಿರುವುದೂ ಅಸಮರ್ಪಕವಾಗಿದೆ. ದೇಶದ 80 ಕೋಟಿ ವಯಸ್ಕರ ಪೈಕಿ, 2014–15ರಲ್ಲಿ, ಕೇವಲ 6% ಮಂದಿ (ಅಂದರೆ, 4 ಕೋಟಿ 86 ಲಕ್ಷ ಮಂದಿ) ತೆರಿಗೆದಾರರಿದ್ದರು. ಬಹಳ ಮಂದಿ ಹೆಚ್ಚಿನ ವರಮಾನವಿದ್ದರೂ ತೆರಿಗೆ ಕೊಡುವುದಿಲ್ಲ. ಕಣ್ಣಿಗೆ ರಾಚುವಷ್ಟು ವೈಭವೋಪೇತ ಖರ್ಚುಗಳನ್ನು ಮಾಡುವವರ ಸಂಖ್ಯೆ ಊಹೆಗಿಂತಲೂ ಬಹಳ ದೊಡ್ಡದಿದೆ. ಆದರೂ, ಒಂದು ಕೋಟಿಗಿಂತಲೂ ಹೆಚ್ಚಿನ ವರಮಾನ ಇರುವವರ ಸಂಖ್ಯೆ, 2012–13ರಲ್ಲಿ ಇಪ್ಪತ್ತು ಸಾವಿರಕ್ಕಿಂತಲೂ ಕಡಿಮೆ ಇತ್ತು ಎಂದರೆ ನಂಬಲು ಸಾಧ್ಯವೇ?

2015–16ರಲ್ಲಿ, ಶ್ರೀಮಂತರು ಮತ್ತು ಕಾರ್ಪೊರೇಟ್‌ಗಳಿಗೆ, ನೇರ ತೆರಿಗೆಗಳಲ್ಲಿ, ಸರ್ಕಾರ ದಯಪಾಲಿಸಿರುವ ರಿಯಾಯ್ತಿಗಳ ಮೊತ್ತ 1,28,639 ಕೋಟಿ ರೂಗಳು. ಈ ಬಳುವಳಿಯನ್ನು ಸರ್ಕಾರವು ಮಾಡುತ್ತಿರುವ ಬಹಳ ಮುಖ್ಯವಾದ ಸಾಮಾಜಿಕ ಖರ್ಚುಗಳೊಂದಿಗೆ ಹೋಲಿಸಿದರೆ ಸರ್ಕಾರದ ಸಾಮಾಜಿಕ ಕಳಕಳಿ ಎಷ್ಟೆಂಬುದು ಸ್ಪಷ್ಟವಾಗುತ್ತದೆ. ಕೋಟಿ ಕೋಟಿ ಮಂದಿ ಕಡು ಬಡವರಿಗೆ ಜೀವನೋಪಾಯದ ಉದ್ಯೋಗ ಒದಗಿಸಲು ಮಾಡಿರುವ ಖರ್ಚು ಕೇವಲ 35,754 ಕೋಟಿ ರೂ. ದಾಖಲೆಯ ಪ್ರಮಾಣದಲ್ಲಿ ಶಿಶು ಮರಣ ಮತ್ತು ಅಪೌಷ್ಟಿಕತೆಯ ಸಂದರ್ಭದಲ್ಲಿ ಸಮಗ್ರ ಶಿಶು ಕಲ್ಯಾಣ ಯೋಜನೆಯ ಮೇಲಿನ ಖರ್ಚು ಕೇವಲ 15,394 ಕೋಟಿ ರೂ. ಶಿಕ್ಷಣ ಕ್ಷೇತ್ರದಲ್ಲಿ ಗುಣ ಮತ್ತು ಪರಿಮಾಣ ಎರಡೂ ಇಳಿಯುತ್ತಿರುವಾಗ ಮತ್ತು ಶಿಶುಗಳ ಸಂಖ್ಯೆ ವೇಗವಾಗಿ ಏರುತ್ತಿರುವ ಸಂದರ್ಭದಲ್ಲಿ ಸರ್ಕಾರವು ಶಿಕ್ಷಣದ ಮೇಲೆ ಮಾಡಿರುವ 42,187 ಕೋಟಿ ರೂಗಳ ವೆಚ್ಚವು ಏನೇನೂ ಸಾಲದು. ಸರ್ಕಾರವು ಒಂದು ವೇಳೆ 1,28,639 ಕೋಟಿ ರೂಗಳ ಬಳುವಳಿಯನ್ನು ಶ್ರೀಮಂತರು ಮತ್ತು ಕಾರ್ಪೊರೇಟ್‌ಗಳಿಗೆ ದಯಪಾಲಿಸಿರದಿದ್ದರೆ, ಈಗ ಮಾಡಿರುವ ಖರ್ಚಿನ ಎರಡರಷ್ಟು ಮೊತ್ತದ ಹಣವನ್ನು ಈ ಬಾಬ್ತು ಖರ್ಚು ಮಾಡಬಹುದಿತ್ತು.

ಕಡಿಮೆ ಮಟ್ಟದಲ್ಲಿರುವ ಮತ್ತು ಇಳಿಯುತ್ತಿರುವ ತೆರಿಗೆಯ ದರಗಳು ಸರ್ಕಾರವು ಯಾವ ರೀತಿಯ ರಾಜಕೀಯ ಆಯ್ಕೆ ಮಾಡಿದೆ ಎಂಬುದನ್ನು ಸೂಚಿಸುತ್ತದೆ. ಗಮನಾರ್ಹವಾದ ಸಂಗತಿ ಏನೆಂದರೆ, ನ್ಯಾಯವಲ್ಲದ ಈ ಆಯ್ಕೆಗಳನ್ನು ಮಾಡಿರುವ ಈ ಸರ್ಕಾರವನ್ನು ತಪ್ಪಿಸಿಕೊಳ್ಳಲು ಈ ದೇಶದ ಪ್ರಜೆಗಳಾದ ನಾವು ಹೇಗೆ ಬಿಟ್ಟಿದ್ದೇವೆ ಎಂಬುದು.

ಆಧಾರ: ದಿ ಹಿಂದೂ ಪತ್ರಿಕೆ ಪ್ರಕಟಿಸಿರುವ ಜೆ.ಎನ್.ಯು. ಪ್ರೊ. ಜಯತಿ ಘೋಷ್ ಅವರ ಲೇಖನ



ಸಾಮರ್ಥ್ಯವಿದ್ದರೆ 'ಕೇರಳ ಮಾದರಿ ಅಭಿವೃದ್ಧಿ'ಯನ್ನು ಗುಜರಾತ್‌ನಲ್ಲಿ ಜಾರಿ ಮಾಡಿ – ಯೆಚೂರಿ ಸವಾಲು

ಕೇರಳದ ವಿಧಾನಸಭಾ ಚುನಾವಣೆ ಹತ್ತಿರವಾಗುತ್ತಿದೆ. ಚುನಾವಣಾ ಪ್ರಚಾರವೂ ತೀವ್ರವಾಗುತ್ತಿದೆ. ಪ್ರಧಾನಿ ನರೇಂದ್ರ ಮೋದಿಯವರು ಪ್ರಚಾರದಲ್ಲಿ ಮಾತನ್ನಾಡುತ್ತಾ 'ಬಿಜೆಪಿ ಕೂಟ'ವನ್ನು ಗೆಲ್ಲಿಸಿದರೆ ಕೇರಳವನ್ನು 'ಗುಜರಾತ್ ಮಾದರಿ'ಯಲ್ಲಿ ಅಭಿವೃದ್ಧಿ ಮಾಡುವುದಾಗಿ ಕೇರಳದ ಜನತೆಗೆ ಭರವಸೆ ಕೊಡುತ್ತಿದ್ದಾರೆ. ಮೋದಿಯವರ ಈ ಮಾತು ಕೇಳಿ ಕೇರಳದ ಪ್ರಜ್ಞಾವಂತ ಜನತೆಯಂತೂ ಮನಸಾರೆ ನಕ್ಕಿರುತ್ತಾರೆ.

ಎಲ್ಲಿಯ ಕೇರಳ ? ಎಲ್ಲಿಯ ಗುಜರಾತ್ !! ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ ಯೆಚೂರಿಯವರು ಈ ಹೇಳಿಕೆಗೆ ಸೂಕ್ತ ಉತ್ತರ ನೀಡಿದ್ದಾರೆ. ಅವರು 'ಕೇರಳವು ತನ್ನ ಮಾದರಿಯಲ್ಲೆ ಸಂತೋಷವಾಗಿದೆ. ಸಾಮರ್ಥ್ಯವಿದ್ದರೆ ಕೇರಳ ಮಾದರಿಯನ್ನು ಗುಜರಾತ್‌ನಲ್ಲಿ ಜಾರಿಮಾಡಿ' ಎಂದು ಸವಾಲು ಹಾಕಿದ್ದಾರೆ. ಈ ಸವಾಲಿಗೆ ಆಧಾರವಾದ ಅಂಶಗಳಲ್ಲಿ ಕೆಲವನ್ನು ಪರಿಶೀಲಿಸೋಣ.

ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಕೇರಳವು ದೇಶಕ್ಕೆ ಮೊತ್ತ ಮೊದಲ ಸ್ಥಾನದಲ್ಲಿದೆ. ಗುಜರಾತ್ ಈ ಸಾಲಿನಲ್ಲಿ 12 ನೇ ಸ್ಥಾನದಲ್ಲಿದೆ. ಇದು ಒಟ್ಟಾರೆ ಅಭಿವೃದ್ಧಿಯ ಪ್ರಶ್ನೆ. ಬಿಡಿ ಬಿಡಿಯಾಗಿಯೂ ಅಭಿವೃದ್ಧಿಯ ಹಲವು ಆಯಾಮಗಳನ್ನು ಪರಿಶೀಲಿಸಬಹುದು. ಸಾಕ್ಷರತೆಯಲ್ಲಿ ಕೇರಳ ಪ್ರಥಮ ಸ್ಥಾನದಲ್ಲಿದ್ದರೆ ಗುಜರಾತ್ 18 ನೇ ಸ್ಥಾನದಲ್ಲಿದೆ. ಮನುಷ್ಯನ ಸರಾಸರಿ ಜೀವಿತಾವಧಿಯಲ್ಲಿ ಕೇರಳ ಪ್ರಥಮ ಸ್ಥಾನದಲ್ಲಿದ್ದರೆ ಗುಜರಾತ್ 9 ನೇ ಸ್ಥಾನದಲ್ಲಿದೆ. ಗಂಡು–ಹೆಣ್ಣುಗಳ ಉತ್ತಮ ಅನುಪಾತದಲ್ಲಿ ಸಹ ಕೇರಳ ಪ್ರಥಮ ಸ್ಥಾನದಲ್ಲಿದ್ದರೆ ಗುಜರಾತ್ ಕಡೆ ಕಡೆಯ 25 ನೇ ಸ್ಥಾನದಲ್ಲಿದೆ. ಶಿಶು ಮರಣ ನಿಯಂತ್ರಿಸುವಲ್ಲಿ ಕೇರಳ ಮೊದಲ ಸ್ಥಾನದಲ್ಲಿದ್ದರೆ ಗುಜರಾತ್ 21 ನೇ ಸ್ಥಾನದಲ್ಲಿದೆ. ಜನಾರೋಗ್ಯ ಸಾಧನೆಯಲ್ಲಿ ಕೇರಳ ಮೊದಲ ಸ್ಥಾನದಲ್ಲಿದ್ದರೆ ಗುಜರಾತ್ 20 ನೇ ಸ್ಥಾನದಲ್ಲಿದೆ. ಬಡತನ ನಿವಾರಣೆಯಲ್ಲಿ ಕೇರಳ 2 ನೇ ಸ್ಥಾನದಲ್ಲಿದ್ದರೆ ಗುಜರಾತ್ 14 ನೇ ಸ್ಥಾನದಲ್ಲಿದೆ. ಕುಡಿಯುವ ನೀರು ಪೂರೈಕೆಯಲ್ಲಿ ಕೇರಳ ಮೂರನೇ ಸ್ಥಾನದಲ್ಲಿದ್ದರೆ ಗುಜರಾತ್ 9 ಸ್ಥಾನದಲ್ಲಿದೆ. ಮನೆಗಳ ವಿದ್ಯುದೀಕರಣದಲ್ಲಿ ಕೇರಳ 5 ಸ್ಥಾನದಲ್ಲಿದ್ದರೆ ಗುಜರಾತ್ 11 ನೇ ಸ್ಥಾನದಲ್ಲಿದೆ. ಸ್ವಚ್ಛತೆಯ ವಿಷಯದಲ್ಲಿ ಕೇರಳ ದೇಶಕ್ಕೆ ಮೊದಲ ಸ್ಥಾನದಲ್ಲಿದ್ದರೆ ಗುಜರಾತ್ 16 ನೇ ಸ್ಥಾನದಲ್ಲಿದೆ. ಜನನ ನಿಯಂತ್ರಣದಲ್ಲಿ ಕೇರಳ ಎರಡನೇ ಸ್ಥಾನದಲ್ಲಿದ್ದರೆ, ಗುಜರಾತ್ 17ನೇ ಸ್ಥಾನದಲ್ಲಿದೆ.

ಪರಿಸ್ಥಿತಿ ಹೀಗಿರುವಾಗ ಯಾರು ಯಾವುದನ್ನು ಮಾದರಿಯಾಗಿ ತೆಗೆದುಕೊಳ್ಳಬೇಕು ಎಂಬುದನ್ನು ಗಂಭೀರವಾಗಿ ಯೋಚಿಸಬೇಕಾದ ಪರಿಸ್ಥಿತಿ ಇದೆ. ಸಂಘಪರಿವಾರ ಇಂತಹ ಯೋಚನೆ ಮಾಡದಿದ್ದರೂ ಕೇರಳದ ಜನರಂತೂ ಈ ಬಗೆಗೆ ತೀರ್ಮಾನಿಸುತ್ತಾರೆ.

ಕೇರಳ ಮಾದರಿ V/S ಗುಜರಾತ್ ಮಾದರಿ

ಸೂಚಿಕ	ರ್ಯಾಂಕ್	
	ಕೇರಳ	ಗುಜರಾತ್
1. ಮಾನವ ಅಭಿವೃದ್ಧಿ ಸೂಚಕ	1	12
2. ಸಾಕ್ಷರತೆ	1	18
3. ಸರಾಸರಿ ಜೀವಿತಾವಧಿ	1	9
4. ಲಿಂಗಾನುಪಾತ	1	25
5. ಶಿಶು ಮರಣ ದರ	1	21
6. ಆರೋಗ್ಯ ವ್ಯವಸ್ಥೆ	1	20
7. ಶೌಚಾಲಯ ವ್ಯವಸ್ಥೆ	1	15
8. ಸ್ವಚ್ಛತೆ	1	16
9. ಜನಸಂಖ್ಯಾ ನಿಯಂತ್ರಣ	2	17
10. ಬಡತನ ನಿರ್ಮೂಲನೆ	2	14
11. ಕುಡಿಯುವ ನೀರಿನ ವ್ಯವಸ್ಥೆ	3	9
12. ಚುಚ್ಚುಮದ್ದು ಕವರೇಜ್	4	18
13. ಮನೆಗಳ ವಿದ್ಯುತೀಕರಣ	5	11

ಎಲ್‌ಡಿಎಫ್ ಪ್ರಚಾರ ಸಾಮಗ್ರಿಗೆ ಬೆಂಕಿ

ಧರ್ಮಾದಮ್ ಒಂದು ವಿಧಾನ ಸಭಾ ಕ್ಷೇತ್ರ. ಈ ಕ್ಷೇತ್ರದಲ್ಲಿ ಸಿಪಿಐ(ಎಂ) ನಾಯಕ ಪಿಣರಾಯಿ ವಿಜಯನ್ ಅಭ್ಯರ್ಥಿ. ಮೂರು ಜನ ಆರೆಸ್ಸೆಸಿಗರ ತಂಡ ರಾತ್ರೋ ರಾತ್ರಿ ಪಿಣರಾಯಿ ವಿಜಯನ್ ಅವರ ಪ್ರಚಾರ ಸಾಮಾಗ್ರಿಗಳಿಗೆ ಬೆಂಕಿ ಇಟ್ಟಿದೆ. ಪ್ರಚಾರ ಸಾಮಾಗ್ರಿಗಳನ್ನು ಸುಡಬಹುದು. ಜನರ ಮನಸ್ಸಿನಲ್ಲಿ ಸಿಪಿಐ(ಎಂ) ಬಗೆಗೆ ಮತ್ತು ಎಲ್‌ಡಿಎಫ್ ಬಗೆಗೆ ಇರುವ ಒಲವನ್ನು ಸುಡಲಾಗದು ಎಂಬುದು ಪಾಪ ಅವರಿಗೆ ಗೊತ್ತಿಲ್ಲ.



'ಭ್ರಷ್ಟಾಚಾರ ಮುಕ್ತ, ಅಭಿವೃದ್ಧಿ ಹೊಂದಿದ, ಜಾತ್ಯತೀತ ಕೇರಳ'ಕ್ಕಾಗಿ

ಕೇರಳದಲ್ಲಿ ಇಲ್ಲಿಯವರೆಗೆ ಖಾತೆ ತೆರೆಯಲು ವಿಫಲವಾಗಿರುವ ಭಾರತೀಯ ಜನತಾ ಪಾರ್ಟಿ–ಬಿಜೆಪಿಯ ಮುಖಂಡರು ಕೇರಳದಲ್ಲಿ ಸ್ಪರ್ಧೆ ಇರುವುದು ಕಾಂಗ್ರೆಸ್ ನೇತೃತ್ವದ ಯುಡಿಎಫ್ ಮತ್ತು ಬಿಜೆಪಿ ನೇತೃತ್ವದ ಕೂಟದ ನಡುವೆ ಎಂದೂ, ಬಿಜೆಪಿ ನೇತೃತ್ವದ ರಂಗ ಅಧಿಕಾರಕ್ಕೆ ಬರಲಿದೆ ಎಂದೂ ಹೇಳಿಕೊಳ್ಳುತ್ತಿದ್ದಾರೆ. ಈ ಬಗೆಗೆ ಪ್ರತಿಕ್ರಿಯಿಸಿರುವ ಸಿಪಿಐ(ಎಂ) ಮುಖಂಡ ಪಿಣರಾಯಿ ವಿಜಯನ್ 'ಭ್ರಷ್ಟಾಚಾರ ಮುಕ್ತ, ಅಭಿವೃದ್ಧಿ ಹೊಂದಿದ, ಜಾತ್ಯತೀತ ಕೇರಳ'ಕ್ಕಾಗಿ ಜನತೆ ಎಲ್‌ಡಿಎಫ್ ಅನ್ನು ಆರಿಸಿ ತರಲಿದ್ದಾರೆ. ಕಾಂಗ್ರೆಸ್, ಬಿಜೆಪಿಗಳ ಸ್ಪರ್ಧೆ ಏನಿದ್ದರೂ ಎರಡನೇ ಸ್ಥಾನಕ್ಕಾಗಿ ಎಂದು ತಿರುಗೇಟು ನೀಡಿದ್ದಾರೆ. ಇದಲ್ಲದೇ ಯುಡಿಎಫ್ ಮತ್ತು ಬಿಜೆಪಿ ನಡುವ ರಹಸ್ಯ ಒಪ್ಪಂದ–ಮ್ಯಾಚ್ ಫಿಕ್ಸಿಂಗ್ ಏರ್ಪಟ್ಟಿದೆ ಎಂದೂ ಹೇಳಿದ್ದಾರೆ.



ನಾನಾ ಗಣ್ಯರ ಪ್ರಚಾರ

ಕೇರಳದ ಮಾಜಿ ಮುಖ್ಯಮಂತ್ರಿ ವಿ.ಎಸ್. ಅಚ್ಯುತಾನಂದನ್ ಸೇರಿದಂತೆ ಚುನಾವಣೆಯಲ್ಲಿ ಸಿಪಿಐ(ಎಂ) ಪಕ್ಷದ ನಾನಾ ಮುಖಂಡರು ಪ್ರಚಾರದಲ್ಲಿ ಪಾಲ್ಗೊಂಡಿದ್ದಾರೆ. ಪಟ್ಟಣತಿಟ್ಟ ಜಿಲ್ಲೆಯ ವಿವಿಧ ಕ್ಷೇತ್ರಗಳಲ್ಲಿ ಸಿಪಿಐ(ಎಂ) ಪಾಲಿಟ್ ಬ್ಯೂರೋ ಸದಸ್ಯರಾದ ಪ್ರಕಾಶ್ ಕಾರಟ್ ಪ್ರಚಾರ ಕೈಗೊಂಡಿದ್ದಾರೆ. ತ್ರಿಪುರದ ಮುಖ್ಯಮಂತ್ರಿ ಹಾಗೂ ಪಾಲಿಟ್ ಬ್ಯೂರೋ ಸದಸ್ಯರಾದ ಮಾಣಿಕ್ ಸರಕಾರ್ ಸೇರಿದಂತೆ ಪಾಲಿಟ್ ಬ್ಯೂರೋ ಸದಸ್ಯರುಗಳಾದ ಬೃಂದಾ ಕಾರಟ್ ಕೋಜಿಕ್ಕೋಡ್‌ನಲ್ಲಿ, ಸುಭಾಷಿಣಿ ಆಲಿ ಅಲಪುಜದಲ್ಲಿ, ತಿರುವನಂತಪುರದಲ್ಲಿ ಬಿ.ವಿ. ರಾಘವುಲು, ಪ್ರಚಾರ ಭಾಷಣಗಳನ್ನು ಮಾಡಿದ್ದಾರೆ. ಕೋಡಿಯೇರಿ ಬಾಲಕೃಷ್ಣನ್ ಅವರಲ್ಲದೇ ವರದರಾಜನ್ ಅವರು ಜೊತೆ–ಗೂಡಿದ್ದಾರೆ.

ಬಿ.ವಿ. ರಾಘವುಲು ಅವರು ಮಾನತಾಡುತ್ತಾ ಎಲ್‌ಡಿಎಫ್‌ನದು ಜನಪರ ಅಭಿವೃದ್ಧಿಯ ಕಣ್ಣೋಟ, ಆದರೆ ಯುಡಿಎಫ್‌ನದು ಕಾರ್ಪೋರೇಟ್ ಪರವಾದ ಅಭಿವೃದ್ಧಿಯ ಕಣ್ಣೋಟ ಎಂದು ತೀವ್ರವಾಗಿ ಟೀಕಿಸಿದ್ದಾರೆ.

ಪಶ್ಚಿಮ ಬಂಗಾಳ : ತೃಣಮೂಲಿಗರ ಚುನಾವಣೋತ್ತರ ಹಿಂಸಾಚಾರ

ಜನರಲ್ಲಿ ಜಾಗೃತಿ ಮತ್ತು ಪ್ರತಿರೋಧ, ಚುನಾವಣಾ ಆಯೋಗದ ಬಿಗಿಯಾದ ಕ್ರಮಗಳು ಇತ್ಯಾದಿಗಳಿಂದ ತಾವು ಯೋಜಿಸಿದಷ್ಟು ಚುನಾವಣಾ ಅಕ್ರಮಗಳನ್ನು ನಡೆಸಲು ಸಾಧ್ಯವಾಗದ ತೃಣಮೂಲ ಕಾಂಗ್ರೆಸ್ ಚುನಾವಣೆ ಮುಗಿದ ಮೇಲೆ ಹಲ್ಲೆ ಹಿಂಸೆಗಳನ್ನು ನಡೆಸುತ್ತಿದೆ.

ಚುನಾವಣೆಗಳು ಮುಗಿದ ಕೂಡಲೇ ಕೇಂದ್ರ ಮೀಸಲು ಪಡೆಯ ಯೋಧರು ಮತ್ತು ಪೋಲೀಸ್ ಕಾವಲನ್ನು ತೆಗೆಯಲಾಗುತ್ತದೆ. ಆಗ ಎಡರಂಗದ ಪರವಾಗಿ ಬೂತ್ ಏಜೆಂಟರಾಗಿ ಕೆಲಸ ಮಾಡಿದವರನ್ನು ಹುಡುಕಿ ಹಲ್ಲೆ ಮಾಡುವುದು, ಸಿಪಿಐ(ಎಂ) ಮತ್ತು ಎಡರಂಗಕ್ಕಾಗಿ ದುಡಿದವರನ್ನು ಹುಡುಕಿ ಹಿಂಸೆ ನೀಡುವುದು ನಡೆಯುತ್ತಿವೆ. ಈ ಬಾರಿ ಹಿಂಸಾಚಾರ ಮತ್ತೊಂದು ಘಟ್ಟವನ್ನು ಮುಟ್ಟಿದೆ.

ಎಡರಂಗಕ್ಕಾಗಿ ಕೆಲಸ ಮಾಡಿದವರನ್ನು ಹುಡುಕಿ ಹಲ್ಲೆ ನಡೆಸುವುದಲ್ಲದೇ ಅವರ ಮನೆಯ ಸದಸ್ಯರ ಮೇಲೆ, ಅದೂ ಮಕ್ಕಳ ಮೇಲೆ ಹಲ್ಲೆಗಳು ನಡೆದಿವೆ. ಹೆಣ್ಣು ಮಕ್ಕಳು ಎಂಬ ಅಂಶವನ್ನೂ ಸಹ ಲೆಕ್ಕಕ್ಕೆ ತೆಗೆದುಕೊಳ್ಳದೇ ಮಕ್ಕಳ ಮೇಲೆ ಕ್ರೂರ ಹಲ್ಲೆಗಳನ್ನು ನಡೆಸಲಾಗಿದೆ. ಮುರ್ಷಿದಾಬಾದ್ ಜಿಲ್ಲೆಯ ಡೋಮ್ಕಾಲ್ ಮತಗಟ್ಟೆಯಲ್ಲಿ ಸಿಪಿಐ(ಎಂ) ಪರ ಏಜೆಂಟ್ ಆಗಿದ್ದ ತಹಿದುಲ್ ಇಸ್ಲಾಂ ಅನ್ನು ಟಿಎಂಸಿ ಗೂಂಡಾಗಳು ಕೊಂದುಹಾಕಿದ್ದಾರೆ. ಬರ್ಧ್ವಾನ್ ಜಿಲ್ಲೆಯಲ್ಲಿ ಸಿಪಿಐ(ಎಂ) ಏಜೆಂಟ್ ಆಗಿ ಕೆಲಸ ಮಾಡಿ ವಾಪಸ್ ಬರುವಾಗ ಟಿಎಂಸಿ ಗೂಂಡಾಗಳು ಎಸ್.ಕೆ. ಫಜಲ್ ಹಕ್ವೆ ಮೇಲೆರಗಿ ಕೊಂದು ಹಾಕಿದ್ದಾರೆ. ತನ್ನ ಮಗನನ್ನು ಸಿಪಿಐ(ಎಂ) ಪರವಾಗಿ ಬೂತ್ ಏಜೆಂಟ್ ಆಗಿ ಕೆಲಸ ಮಾಡಲು ಅವಕಾಶ ಮಾಡಿಕೊಟ್ಟದ್ದಕ್ಕಾಗಿ 48 ವರ್ಷದ ದೂಖಿರಾಮ್ ದಾಲ್ ಅವರನ್ನು ಕಗ್ಗೊಲೆ ಮಾಡಲಾಗಿದೆ. ಇದೇ ಬರ್ಧ್ವಾನ್ ಜಿಲ್ಲೆಯಲ್ಲೆ ಕಾಂಡಕೋಶ್‌ನಲ್ಲಿ ಖಾಂಡಕರ್ ಆಲಿ ಹುಸೇನ್ ಎಂಬ ಕಾಂಗ್ರೆಸ್ ಕಾರ್ಯಕರ್ತರನ್ನು ಟಿಎಂಸಿ ಗೂಂಡಾಗಳು ಕೊಂದು ಹಾಕಿದ್ದಾರೆ.

ಇದು ನಡೆದದ್ದು ಬೆಹಲ(ಪೂರ್ವ) ಹರಿದೇವ್‌ಪುರ್‌ದಲ್ಲಿ; ಮತ ಚಲಾಯಿಸಬಾರದು ಎಂದು ಟಿಎಂಸಿ ಗೂಂಡಾಗಳು ನೀಡಿದ್ದ ಎಚ್ಚರಿಕೆ ಮೀರಿ ತಾತ ಚಲಾಯಿಸಿದ. ರಾತ್ರಿ ಹುಡುಕಿಕೊಂಡು ಬಂದ ಗೂಂಡಾಗಳು ಆತ ಮನೆಯಲ್ಲಿ ಇಲ್ಲದಿದ್ದಾಗ ಏಳು ವರ್ಷದ ಮುಗ್ಧ ಮಗು ಪ್ರೀತಿ ಮೇಲೆ ಹೀನಾಯ ಹಲ್ಲೆ ಮಾಡಿದರು. 24 ಪರಗಣ ಜಿಲ್ಲೆಯ ಸದ್ಗಚಿಯಾದಲ್ಲಿ ಟಿಎಂಸಿ ಗೂಂಡಾಗಳು ಮೂರು ವರ್ಷದ ಬಾಲಕಿಯ ಮೇಲೆ ಹಲ್ಲೆ ನಡೆಸಿದ್ದಾರೆ. ಮಗುವಿನ ಕಿವಿಗೆ ಪೆಟ್ಟು ಬಿದ್ದು ಗಾಯವಾಗಿದೆ. ಇಂತಹ ಅಮಾನವೀಯ ಪ್ರಕರಣಗಳ ದೊಡ್ಡ ಪಟ್ಟಿಯೇ ಸಿಗುತ್ತದೆ.

ಎಡರಂಗದ ಪರವಾಗಿ ಚುನಾವಣಾ ಆಯೋಗಕ್ಕೆ ಈ ಸಂಬಂಧ ಮನವಿ ಸಲ್ಲಿಸಲಾಗಿದೆ. ಚುನಾವಣಾ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಮತ್ತು ಫಲಿತಾಂಶದ ಹಂತದವರೆಗೆ ಅಗತ್ಯ ಭದ್ರತೆಯ ಕ್ರಮಗಳನ್ನು ಮುಂದುವರಿಸಬೇಕೆಂದು ಮನವಿಯಲ್ಲಿ ಒತ್ತಾಯಿಸಲಾಗಿದೆ. ಜನ ಸಮುದಾಯದ ಬಲದಿಂದ ಜನಶಕ್ತಿಯ ಬಲದಿಂದ ತೃಣಮೂಲಿಗರ ಗೂಂಡಾಗಿರಿಯನ್ನು ಎದುರಿಸಲು ಗಮನ ನೀಡಲಾಗುತ್ತಿದೆ.

ಮೇ 14 ಎಡಪಕ್ಷಗಳಿಂದ 'ಜಾರ್ಖಂಡ್ ಬಂದ್'ಗೆ ಕರೆ

ಜಾರ್ಖಂಡ್ ರಾಜ್ಯದಲ್ಲಿ ಕೋಮುವಾದ ತಲೆ ಎತ್ತಲು ಹವಣಿಸುತ್ತಿದೆ. ಕೋಮುಗಲಭೆಗಳ ಸರಣಿ ಘಟನೆಗಳು ವರದಿಯಾಗುತ್ತಿವೆ. ಕೋಮುವಾದದ ಅಮಲನ್ನು ಜನರ ತಲೆಗೇರಿಸಲು ಪ್ರಯತ್ನಿಸಲಾಗುತ್ತಿದೆ. ಅದೇ ಸಮಯದಲ್ಲಿ ಕಾರ್ಮಿಕ ಕಾನೂನುಗಳಿಗೆ ಕಾರ್ಮಿಕ ವಿರೋಧಿ ಬದಲಾವಣೆಗಳನ್ನು ತರಲಾಗುತ್ತಿದೆ. ಕಾರ್ಮಿಕ ಸಂಘಟನೆ ಕಟ್ಟಿಕೊಳ್ಳುವ ಕಾರ್ಮಿಕರ ಹಕ್ಕಿಗೆ ಧಕ್ಕೆ ತರಲಾಗಿದೆ. ಸಂತಾಲ್ ಪರಗಣ ಮತ್ತು ಛೋಟಾನಾಗಪುರ ಗೇಣಿಕಾಯ್ದೆಗಳಿಗೆ ತಿದ್ದುಪಡಿ ತರಲು ಯತ್ನಿಸಲಾಗುತ್ತಿದೆ. ಬಡ ರೈತರನ್ನು ಭೂಮಿಯಿಂದ ಒಕ್ಕಲೆಬ್ಬಿಸಲಾಗುತ್ತಿದೆ. ಜನರ ಪ್ರಜಾಸತ್ತಾತ್ಮಕ ಹಕ್ಕುಗಳಿಗೂ ಚ್ಯುತಿ ಬಂದಿದೆ.

ಈ ಎಲ್ಲ ಬೆಳವಣಿಗೆಗಳ ಕುರಿತು ಚರ್ಚಿಸಿರುವ ರಾಜ್ಯದ ಎಡಪಕ್ಷಗಳು ಈ ನೀತಿಗಳ ವಿರುದ್ಧ ಮೇ 14 ರಂದು ಜಾರ್ಖಂಡ್ ಬಂದ್‌ಗೆ ಕರೆ ನೀಡಿವೆ.



ಸಿಐಟಿಯು ಕೊಡಗು ಜಿಲ್ಲಾ ಸಮ್ಮೇಳನ
'ದುಡಿಯುವ ಕೈಗಳಿಗೆ ಭಾರಿ ಸವಾಲುಗಳು'

ಏಪ್ರಿಲ್ 24, 2016ರ ಭಾನುವಾರದಂದು ಕೊಡಗು ಜಿಲ್ಲೆಯ ಮಡಿಕೇರಿ ನಗರದಲ್ಲಿ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್(ಸಿಐಟಿಯು) ಮೂರನೇ ಜಿಲ್ಲಾ ಸಮ್ಮೇಳನ ಯಶಸ್ವಿಯಾಗಿ ನಡೆಯಿತು. ಬೆಳಗ್ಗೆ 10–30ಕ್ಕೆ ಮಡಿಕೇರಿಯ ಗದ್ದಿಗೆಯಿಂದ ಹೊರಟ ಜಾಥದ ಉದ್ಘಾಟನೆಯನ್ನು ಸಂಗಾತಿ ಬಿ.ಎಂ.ಭಟ್ ನೆರವೇರಿಸಿದರು. ನಂತರ ಮಡಿಕೇರಿಯ ಪ್ರಮುಖ ಬೀದಿಗಳಲ್ಲಿ ನೂರಾರು ಕಾರ್ಮಿಕರು ಕೆಂಬಾವುಟ ಹಿಡಿದು ಮೆರವಣಿಗೆಯಲ್ಲಿ ಸಾಗಿ ಮಡಿಕೇರಿ ಕಲಾಕ್ಷೇತ್ರಕ್ಕೆ ಆಗಮಿಸಿತ್ತು. ಬಹಿರಂಗ ಅದಿವೇಶನವನ್ನು ಕಾಂ॥ ಐ.ಆರ್. ಅಶ್ರಣ್ಣ ನಗರ ಮತ್ತು ಕಾಂ॥ ಎಸ್. ಪ್ರಸನ್ನ ಕುಮಾರ ವೇದಿಕೆಯಲ್ಲಿ ಬಹಿರಂಗ ಅದಿವೇಶನ ನಡೆಯಿತು.

ಆಕರ್ಷಕವಾದ ಮೆರವಣಿಗೆ ಮತ್ತು ಬಹಿರಂಗ ಸಭೆ

ಸಿ.ಐ.ಟಿ.ಯು.ನ ರಾಜ್ಯ ಉಪಾಧ್ಯಕ್ಷರಾದ ಬಿ.ಎಂ.ಭಟ್, ಅಧ್ಯಕ್ಷತೆಯನ್ನು ಸಿಐಟಿಯು ಜಿಲ್ಲಾಧ್ಯಕ್ಷರಾದ ಡಾ. ಐ.ಆರ್.ದುರ್ಗಾ ಪ್ರಸಾದ್ ವಹಿಸಿದ್ದರು. ಶ್ರೀಮತಿ ಬಂಗೇರ, ನಗರ ಸಭೆ ಅಧ್ಯಕ್ಷರು ಮಡಿಕೇರಿ, ಸಿ.ಐ.ಟಿ.ಯುನ ರಾಜ್ಯ ಉಪಾಧ್ಯಕ್ಷರಾದ ಜಯರಾಂ, ಕು॥ಹೆಚ್.ಎಂ.ಕಾವೇರಿ, ಮಾಜಿ ಜಿಲ್ಲಾ ಪಂಚಾಯತ್ ಉಪಾಧ್ಯಕ್ಷರು, ವಿ.ಜೆ. ಅಂತೋಣಿ, ಬಿ.ಎಸ್.ಎನ್.ಎಲ್ ಸಂಘಟನೆ ಅಧ್ಯಕ್ಷರು, ಜನಾರ್ಧನ– ಎಲ್.ಐ.ಸಿ ಸಂಘಟನೆ ಮುಖಂಡರು, ಬೇಬಿ ಮ್ಯಾಥ್ಯು, ಸಮಾಜ ಸೇವಕರು, ಹೆಚ್.ಬಿ. ರಮೇಶ, ಪ್ರಧಾನ ಕಾರ್ಯದರ್ಶಿ ಸಿ.ಐ.ಟಿ.ಯು, ಎ.ಮಹದೇವ್ ಕೊ.ಜಿ.ಜ.ವ. ಯೂನಿಯನ್ ಕಾರ್ಯದರ್ಶಿ, ಪಿ.ಆರ್. ಭರತ್ ಕ.ಗ್ರಾ.ಪ.ನೌ.ಸಂಘಟನೆಯ ಜಿಲ್ಲಾ ಅಧ್ಯಕ್ಷರು, ಹಸನಬ್ಬ, ಹಮಾಲಿ ಸಂಘಟನೆಯ ಜಿಲ್ಲಾ ಕಾರ್ಯದರ್ಶಿ, ಕೆ.ಪಿ. ಕಾವೇರಮ್ಮ, ಅಂಗನವಾಡಿ ಸಂಘಟನೆ ಜಿಲ್ಲಾ ಅದ–ಕ್ಷರು, ರಮೇಶ್ ರೈ, ಗ್ರಾಮ ಪಂಚಾಯಿತಿ ಸದಸ್ಯರು ಕಡಗದಾಳು ಉಪಸ್ಥಿತರಿದ್ದರು. ಬಹಿರಂಗ ಸಭೆಯ ನಿರೂಪಣೆಯನ್ನು ಪಿ.ಆರ್. ಭರತ್ ಮತ್ತು ಸ್ವಾಗತ :ಹೆಚ್.ಬಿ.ರಮೇಶ್ ನೆರವೇರಿಸಿದರು.

ಸರಕಾರದ ಅಹಂಕಾರ ಅಡಗಿಸಲು ಸಿಐಟಿಯು ಸಿದ್ದ:

ಬಹಿರಂಗ ಅದಿಶವೇನದ ಉದ್ಘಾಟನೆಯನ್ನು ಸಂಗಾತಿ ಬಿ.ಎಂ.ಭಟ್ ಮಾಡಿ ಕಾರ್ಮಿಕರ ಮೇಲೆ ದಾಳಿ ನಡೆಸಿದರೆ ಯಾವುದೇ ಸರ್ಕಾರ ಉಳಿಯುವುದಿಲ್ಲ ಈ ಬಾರಿಯ ಬಜೆಟ್‌ನಲ್ಲಿ ಅಂಗನವಾಡಿ, ಬಿಸಿಯೂಟ ಹಾಗು ಇನ್ನಿತರ ಕಾರ್ಮಿಕ ವೇತನ ಹೆಚ್ಚಿಸಿಲ್ಲ. ಅತ್ಯಂತ ಕಡಿಮೆ ವೇತನದಲ್ಲಿ ಕೆಲಸ ಮಾಡುತ್ತಿದ್ದಾರೆ ಅವರಿಗೆ ಪೌಷ್ಠಿಕ ಆಹಾರ ಹಾಗೂ ಸರಕಾರ ಎಲ್ಲ ಸೌಲಭ್ಯ ಸಿಗಬೇಕು ಎಂದು ಆಗ್ರಹಿಸಿದರು. ಕಾರ್ಮಿಕರ ಮತ್ತು ನೌಕರರ ರಕ್ಷಣೆ ಮಾಡದ ಸರಕಾರದ ಅಹಂಕಾರ ಅಡಗಿಸಲು ಸಿ.ಐ.ಟಿ.ಯು. ಸಿದ್ದವಿದ್ದು ಈ ಬಗ್ಗೆ ಕಾರ್ಮಿಕರು ಎಚ್ಚೆತ್ತುಕೊಂಡು ಸಂಘಟನೆಯ ಬಲ ವರ್ಧನೆಗೆ ಶ್ರಮಿಸಬೇಕು ಎಂದರು.

ಕೇಂದ್ರದ ನರೇಂದ್ರ ಮೋದಿ ಸರ್ಕಾರ ಕಾರ್ಮಿಕ ವಿರೋಧಿ ಆಡಳಿತ ನಡೆಸುತ್ತಿದ್ದು ಇದಕ್ಕೆ ಪೂರಕವಾಗಿ ಇತ್ತಿಚೆಗೆ ಬೆಂಗಳೂರಿನಲ್ಲಿ ಗಾರ್ಮೆಂಟ್ಸ್ ನೌಕರರು ಬೃಹತ್ ಪ್ರತಿಭಟನೆ ನಡೆಸಿ ಸರ್ಕಾರ–ಕ್ಕೆ ಬಿಸಿ ಮುಟ್ಟಿಸಿದ್ದಾರೆ. ದೇಶದಲ್ಲಿ ದುಡಿಯುತ್ತಿರುವ ಕಾರ್ಮಿಕರಿಗೆ ಅನೇಕ ಸವಾಲುಗಳಿವೆ ಕಾರ್ಮಿಕರ ಪರ ಯಾವುದೇ ಆಡಳಿತ ಇಲ್ಲದಂತಾಗಿದೆ ಹಾಗಾಗಿ ಸೆಪ್ಟಂಬರ್ 2ರಂದು ರಾಷ್ಟ್ರದಾದ್ಯಂತ ಮುಷ್ಕರ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ನಗರ ಸಭೆಯ ಅಧ್ಯಕ್ಷೆ ಶ್ರೀಮತಿ. ಬಂಗೇರ ಮಾತನಾಡಿ ಕಾರ್ಮಿಕರು ಸಂಘಟನೆಯ ಮೂಲಕ ಸರಕಾರದ ಎಲ್ಲಾ ಸೌಲಭ್ಯಗಳನ್ನು ಬಳಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಜಿಲ್ಲಾ ಪಾಂಚಾಯಿತಿ ಮಾಜಿ ಉಪಾಧ್ಯಕ್ಷೆ ಕು. ಹೆಚ್.ಎಂ. ಕಾವೇರಿ ಮಾತನಾಡಿ ಸಮಾಜದಲ್ಲಿನ ಅಸಮಾನತೆ–ಅನ್ಯಾಯ ಹೋಗಲಾಡಿಸಲು ಪ್ರತಿಯೊಬ್ಬರಿಗು ಶಿಕ್ಷಣ ಮತ್ತು ಜ್ಞಾನದ ಅಗತ್ಯ ಇದೆ ಎಂದರು.

ಪ್ರತಿನಿಧಿ ಸಮ್ಮೇಳನ: ಪ್ರತಿನಿಧಿ ಸಮ್ಮೇಳನ ಕಾಂ॥ ಎಸ್. ಪ್ರಸನ್ನ ಕುಮಾರ ಸಭಾಂಗಣದಲ್ಲಿ ಕಾವೇರಿ ಕಲಾ ಕ್ಷೇತ್ರದಲ್ಲಿ ನಡೆಯಿತು. ಒಟ್ಟು 73 ಪ್ರತಿನಿಧಿಗಳು ಮತ್ತು ವೀಕ್ಷಕರುಗಳು ಭಾಗವಹಿಸಿದರು. ಮಧ್ಯಾಹ್ನ 2.30ಕ್ಕೆ ಸಿಐಟಿಯುನ ಜಿಲ್ಲಾಧ್ಯಕ್ಷರಾದ ಕಾಂ॥ ಡಾ. ದುರ್ಗಾ ಪ್ರಸಾದ್ ಧ್ವಜಾರೋಹಣ ನಡೆಸಿ ಸಮ್ಮೇಳನಕ್ಕೆ ಚಾಲನೆ ನೀಡಿದರು. ಸಿಐಟಿಯುನ ಉಪಾಧ್ಯಕ್ಷರಾದ ಕಾಂ॥ ಜಯರಾಂ ಉದ್ಘಾಟನಾ ಭಾಷಣದ ಮೂಲಕ ಸಮ್ಮೇಳನಕ್ಕೆ ಸ್ಪೂರ್ತಿ ತುಂಬಿದರು. ಅತಿಥಿಗಳಾಗಿ ಕಾಂ॥ಬಿ.ಎಂ.ಭಟ್ ಉಪಸ್ಥಿತರಿದ್ದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೆಚ್.ಬಿ. ರಮೇಶರವರು ವರದಿ ಮಂಡಿಸಿದರು. ವರದಿಯ ಮೇಲೆ 7 ಜನ ಸಂಗಾತಿಗಳು ಚರ್ಚೆ ಮಾಡಿದರು. ಚರ್ಚೆಗೆ ಉತ್ತರ ನೀಡಿದ ನಂತರ ಕೆಲವು ತಿದ್ದುಪಡಿಯೊಂದಿಗೆ ವರದಿಯನ್ನು ಅಂಗಿಕರಿಸಲಾಯಿತು.

ಸಮ್ಮೇಳನದಲ್ಲಿ 6 ನಿರ್ಣಯಗಳನ್ನು ಅಂಗೀಕರಿಸಲಾಯಿತು:

- ಕೊಡಗು ಜಿಲ್ಲೆಯನ್ನು ಬರ ಪೀಡಿತ ಜಿಲ್ಲೆಯೆಂದು ಘೋಷಿಸಲು ಒತ್ತಾಯಿಸಿ.
- ಕಾಡಾನೆ ಹಾವಳಿಯಿಂದ ರಕ್ಷಣೆಗೆ ಒತ್ತಾಯಿಸಿ.
- ನಿವೇಶರಹಿತರಿಗೆ ನಿವೇಶನ ನೀಡಬೇಕೆಂದು
- ಕೊಡಗಿನಲ್ಲಿ ಹೊಸ ಮರಳು ನೀತಿ ಜಾರಿಪಡಿಸಲು
- ಸೆಪ್ಟಂಬರ್ 2 2016 ಅಖಿಲ ಭಾರತ ಮುಷ್ಕರದ ಹೋರಾಟ ಯಶಸ್ವಿಗೊಳಿಸಲು
- ಭವಿಷ್ಯ ನಿಧಿ ಬಗ್ಗೆ

ಸಿಐಟಿಯುವಿನ ಹೊಸ ಜಿಲ್ಲಾ ಸಮಿತಿ:

ಅಧ್ಯಕ್ಷರು ಡಾ. ಐ.ಆರ್. ದುರ್ಗಾಪ್ರಸಾದ್

ಉಪಾಧ್ಯಕ್ಷರುಗಳು ಎ. ಮಹದೇವ, ಕೆ.ಪಿ. ಕಾವೇರಮ್ಮ, ಸಿ.ಬಿ. ಚಂದನ್

ಪ್ರಧಾನ ಕಾರ್ಯದರ್ಶಿ ಹೆಚ್.ಬಿ. ರವೇಶ್

ಉಪಕಾರ್ಯದರ್ಶಿಗಳು ಪಿ.ಆರ್. ಭರತ್, ಕುಸುಮ, ಒಂದು ಸ್ಥಾನ ಖಾಲಿ

ಕೋಶಾಧಿಕಾರಿ ಎ.ಸಿ. ಸಾಬ್



JANASHAKTHI KANNADA VARA PATRIKE MAY 22, 2016 Price : Rs. 10/-
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026
RNI No. KARKAN /2006/17926 Posted on every Satuarday
Licensed to Post without prepayment License No. WPP-283



ಕಾಯಕದೊಂದಿಗೆ ವಿಶಿಷ್ಟ ಬಸವ ಜಯಂತಿ

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಪ್ರಜ್ಞಾ ಕಾನೂನು ಸಲಹಾ ಸಮಿತಿ ಕಲಬುರಗಿ ಮತ್ತು ಚನ್ನಮ್ಮ ಮಹಿಳಾ ಸ್ವ-ಸಹಾಯ ಸಂಘ, ಗುಂಜಬಬಲಾದ. ಸಂಘಟನೆಗಳು ಜಂಟಿಯಾಗಿ ಮೇ 11ರಂದು ಕಲಬುರಗಿ ಜಿಲ್ಲೆಯ ಆಳಂದ ತಾಲ್ಲೂಕಿನ ವೈಜಾಪೂರ ಕೆರೆಯಲ್ಲಿ "ಬುದ್ಧ, ಬಸವ, ಅಂಬೇಡ್ಕರ್ ಜಯಂತಿ ಆಚರಣೆಯ ನಿಮಿತ್ಯ ಕಾಯಕ ನಿರತ ಕಾರ್ಯಕ್ರಮ" ವನ್ನು ಹಮ್ಮಿಕೊಂಡಿದ್ದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಹಕ ಅಧಿಕಾರಿ ಅನಿರುದ್ಧ ಶ್ರವಣ್, ಜೆ.ಎಂ.ಎಸ್. ರಾಜ್ಯ ಉಪಾಧ್ಯಕ್ಷರಾದ ಕೆ.ನೀಲಾ, ಪ್ರಜ್ಞಾ ಕಾನೂನು ಸಲಹಾ ಸಮಿತಿ ಮುಖಂಡರು ಹಾಗೂ ಪ್ರಾಧ್ಯಪಕರಾದ ಮೀನಾಕ್ಷಿ ಬಾಳಿ, ಸಾಹಿತಿಗಳಾದ ಡಾ.ಕಾಶಿನಾಥ ಅಂಬಲಗಿ, ಡಾ.ಪ್ರಭು ಖಾನಾಪುರ, ತಾ.ಪಂ. ಕಾರ್ಯನಿರ್ವಹಕ ಅಧಿಕಾರಿ ಡಾ.ಸಂಜಯ ರೆಡ್ಡಿ ಮತ್ತು ವಿವಿಧ ಸಂಘಟನೆಯ ಕಾರ್ಯಕರ್ತರು, ಸರ್ಕಾರಿ ಶಾಲಾ ಶಿಕ್ಷಕರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಸೂಂಟ ನೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ವೈಜಾಪುರ ಆಲೂರು ಗ್ರಾಮದಿಂದ 400ಕ್ಕೂ ಅಧಿಕ ಸಂಖ್ಯೆಯ ರೈತರು, ಕೂಲಿಕಾರ್ಮಿಕರು ಕೆಲಸ ಮಾಡಿದರು.

ಹೆಚ್.ಆರ್. ನವೀನ್‌ಕುಮಾರ್



ಮಂಡ್ಯ: ಅಂತರ್ಜಾತಿ ವಿವಾಹಿತರ ಸಮಾವೇಶಗಳು



ಮಂಡ್ಯ ಜಿಲ್ಲೆಯಲ್ಲಿ ಮೇ 09 ರಂದು ಕ್ರಾಂತಿಜ್ಯೋತಿ ಬಸವ ಜಯಂತಿ ಅಂಗವಾಗಿ ಜಾತಿ ವಿನಾಶಕ್ಕಾಗಿ, ಮಾನವೀಯ ಮೌಲ್ಯಗಳ ಉಳಿವಿಗಾಗಿ, ಅಂತರ್ಜಾತಿ ಮತ್ತು ಅಂತರ ಧರ್ಮಿಯ ವಿವಾಹಿತರ ಸಮಾವೇಶವನ್ನು ಮನುಜ ಮತ ವಿಶ್ವಪಥ ವೇದಿಕೆ ಹಮ್ಮಿಕೊಂಡಿತ್ತು. ಈ ಕಾರ್ಯಕ್ರಮಕ್ಕೆ ಆಗಮಿಸಿದ ಮಾನವ ಧರ್ಮ ಪೀಠ (ನಿಡುಮಾಮಿಡಿ ಮಠ)ದ ಪೀಠಾಧ್ಯಕ್ಷರಾದ ಶ್ರೀ ವೀರಭದ್ರಚನ್ನಮಲ್ಲ ಸ್ವಾಮೀಜಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಕಾರ್ಯಕ್ರಮದಲ್ಲಿ ಮೈಸೂರಿನ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಪ್ರಾಧ್ಯಪಕ ಅರವಿಂದ ಮಾಲಗತ್ತಿ ಮಾತನಾಡಿ "ಜಾತಿ ಆಚರಣೆ, ತಾರತಮ್ಯ, ಅನ್ಯಾಯ, ಸುಲಿಗೆಯನ್ನು ಒಪ್ಪಿಕೊಂಡು, ಅವರೇ ಅದನ್ನು ಅನುಸರಿಸಿಕೊಂಡು ಹೋಗುವಂತಹ ವ್ಯವಸ್ಥೆಯನ್ನು ದೇಶದಲ್ಲಿ ಹುಟ್ಟುಹಾಕಲಾಗಿದೆ. ಈ ಕೆಲಸವನ್ನು ಅಮೆರಿಕಾದ ಗೂಢಚಾರ ಸಂಸ್ಥೆಯಿಂದಲೂ ಮಾಡಲು ಸಾಧ್ಯವಿಲ್ಲ. ಬೇರೆ ಜಾತಿಯವರನ್ನು ಪ್ರೀತಿಸಿದ ಮಕ್ಕಳನ್ನು ಕೊಲೆ ಮಾಡುವುದು ಪೈಶಾಚಿಕ ಕೃತ್ಯ. ಜಾತಿ ಆಳವಾಗಿ ಬೇರೂರಿದೆ. ಜಾತಿ ಬಿಟ್ಟು ಒಂದಾದರೆ ಮಾತ್ರ ಬಲಾಢ್ಯ ಭಾರತ ನಿರ್ಮಾಣ ಸಾಧ್ಯ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಟಿ.ಎಲ್.ಕೃಷ್ಣೇಗೌಡ, ಸಿ.ಕುಮಾರಿ, ದೇವಿ ಮತ್ತಿತರ ಮುಖಂಡರು ಭಾಗವಹಿಸಿದ್ದರು.

ದೇವತೆಗೆಗಳದ್ದೇ ಅಂತರ್ಜಾತಿ ವಿವಾಹ

ಇದೇ ದಿನ ಮತ್ತೊಂದು ವೇದಿಕೆಯಲ್ಲಿ ವಿಶ್ವ ಮಾನವ ವೇದಿಕೆ ನೇತೃತ್ವದಲ್ಲಿ ನಡೆದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಮಾಜಿ ಅಡ್ವೋಕೇಟ್ ಜನರಲ್ ಪ್ರೋ.ರವಿವರ್ಮಕುಮಾರ್‌ರವರು ದೇವರಾದ ಶಿವ, ರಾಮ, ಚಲುವನಾರಾಯಣಸ್ವಾಮಿ ಅಂತರ್ಜಾತಿ ವಿವಾಹವಾಗಿದ್ದಾರೆ. ದೇವರೇ ಆಗಿರುವಾಗ ನೀವ್ಯಾಕೆ ಹಿಂದೆ-ಮುಂದೆ ನೋಡಿತ್ತೀರಾ ಎಂದು ಪ್ರಶ್ನಿಸಿದರು.

ಜಾತಿ ಮುಕ್ತ ಮನಸ್ಸುಗಳ ಸಮ್ಮಿಲನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು ರಾಮನು ಅನಾಥ ಮಗುವಾದ ಸೀತಿಯನ್ನು ಮದುವೆಯಾಗುತ್ತಾನೆ. ಶಿವನು ದಕ್ಷ ಮಹಾರಾಜನ ಮಗಳನ್ನು ಮದುವೆಯಾಗುತ್ತಾನೆ. ಅಷ್ಟೇ ಏಕೆ ವಶಿಷ್ಠ, ಜಮದಗ್ನಿ, ವಿಶ್ವಾಮಿತ್ರ ಋಷಿಗಳೂ ಬೇರೆ ಜಾತಿಯವರನ್ನು ಮದುವೆ ಆಗಿದ್ದಾರೆ. ಅವರಿಗೆ ಆದರ್ಶವಾಗಿದ್ದು ಮಾನವರಾದ ನಮಗೇಕೆ ಆಗಿಲ್ಲ ಎಂದು ಕೇಳಿದರು.

ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ದೇವನೂರು ಮಹಾದೇವ, ಅಧ್ಯಕ್ಷತೆ ವಹಿಸಿದ್ದ ರೈತ ನಾಯಕಿ ಸುನಂದಾ ಜಯರಾಂ, ಹಿರಿಯ ಸಾಹಿತಿ ಎಚ್.ಎಲ್. ಕೇಶವಮೂರ್ತಿ, ಮೈಸೂರು ಮಾಣವ ಮಂಟಪದ ಉಗ್ರನರಸಿಂಹೇಗೌಡ, ನ್ಯಾಯವಾದಿ ಬಿ.ಟಿ.ವಿಶ್ವನಾಥ, ಭಾರತೀಯ ಬೌಧ ಮಹಾಸಭಾದ ಎಂ.ಸಿ.ಶಿವರಾಜ್, ರೈತ ಮುಖಂಡ ಮುದ್ದೇಗೌಡ ಇದ್ದರು.



JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **NITHYANANDASWAMI** EMS Bhavana, No.37/A, 8th Cross, Mahalakshmi Layout, BANGALORE-560086 Editor : **NITHYANANDASWAMI**